ಭಾನುವಾರ, ಡಿಸೆಂಬರ್ 3, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 333 | ಪುಟ 20

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಥಕಧಿಮಿತ ಎಂದು ಅಡಿ ಇಟ್ಟು ಬರುತ್ತಿರುವ ಚಳಿಯ ಬಿಡಿ ಬಿಡಿ ಚಿತ್ರಗಳು...



ಚುನಾವಣಾ ಫಲಿತಾಂಶದ ಕ್ಷಣ ಕ್ಷಣದ ಸುದ್ದಿಗಾಗಿ prajavani.net ನೋಡಿ
ಎಫ್‌ಪಿಐ: ಹೆಚ್ಚುತ್ತಿದೆ ಒಳಹರಿವು 8
ಜಂಟಿ ಹೋರಾಟಕ್ಕೆ ಬಿಜೆಪಿ, ಜೆಡಿಎಸ್ ಅಣಿ
ಈಗಿರುವುದು 50% ಕಮಿಷನ್ ಸರ್ಕಾರ: ಬೊಮ್ಮಾಯಿ 6
ಸದನ ಕಲಹವೋ ಸುಗಮ ಕಲಾಪವೋ? 6

ಉತ್ಸವದ ಬೊಂಬೆಗಳಿಗಿಲ್ಲ ಕಿಮ್ಮತ್ತು, ನೆಲೆಯಿಲ್ಲದ ಹಗಲುವೇಷಗಾರರು

ಬೊಂಬೆಯಾಡಿಸಿ ದಣಿದೋರು...

• ರಶ್ಮಿ ಎಸ್

ಒಳನೋಟ

ಬೆಂಗಳೂರು: 'ಏನು ಕೇಳ್ತೀರಿ ನಮ್ಮತಿ, ಜಾತ್ರಿ, ಮೆರವಣಿಗಿಯೊಳಗ ನಕ್ಕೊಂತ ಕುಣೀತೀವಿ. ಕುಣಿಗೆ ಹೋಗೂತನಾನೂ ನಮ್ಮ ಸಂಘರ್ಷ ನಡದೇ ಇರ್ತದ, ಇರಾಕ ಮನಿಯಿಲ್ಲ. ಓದಸಾಕ ಸಾಲಿ ಇಲ್ಲ. ಒಂದು ಆದಾಯದ ಮೂಲ ಅಂತನೇ ಇಲ್ಲ' ಹಿಂಗೆ ತಮ್ಮ ಬದುಕಿನ ಎಳೆಯನ್ನು ಅಲೆಮಾರಿಗಳು ಬಿಚ್ಚಿಡುತ್ತಾರೆ.

ಆಂಧ್ರಪ್ರದೇಶ ಮೂಲದ ಬುಡ್ಗಜಂಗಮ ಈ ಅಲೆಮಾರಿ ಕಲಾವಿದರು ಪರಿಶಿಷ್ಟ ಜಾತಿಗೆ ಸೇರಿದವರು. ಕಲಬುರಗಿ, ಕೊಪ್ಪಳ, ಬಳ್ಳಾರಿ, ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಗಳಲ್ಲಿಯೂ ಹರಡಿದ್ದಾರೆ. ಜಾಗ ಬದಲಿಸುವ ಈ ಕಲಾವಿದರು ದೊಡ್ಡ ದೊಡ್ಡ ಗಾರುಡಿ ಗೊಂಬೆಗಳನ್ನು ಧರಿಸಿ, ಮೆರವಣಿಗೆಯ ಮುಂಚೂಣಿಯಲ್ಲಿರುತ್ತಾರೆ.

ತೆಲುಗು ಧಾಟಿಯ ಕನ್ನಡದಲ್ಲಿ ಮಾತನಾಡುವ ಇವರೆಲ್ಲರೂ ಜನಪದ ಹಾಡುಗಳ, ಕತೆಗಳ ಕಣಜವಾಗಿದ್ದಾರೆ. ಸಮಕಾಲೀನ ಘಟನೆಗಳನ್ನೂ ತಮ್ಮ ಕತೆಗಳಲ್ಲಿ ಸೇರ್ಪಡೆ ಮಾಡಬಲ್ಲ ಇವರನ್ನು . ಹುಬ್ಬಳ್ಳಿಯಲ್ಲಿ ದಲ್‌ಪಟಾ ಕಲಾವಿದರು ಎಂದು ಕರೆಯುತ್ತಾರೆ. ಆದರೆ ಆಂಧ್ರ ಮೂಲದಿಂದ ಬಂದವರೆಲ್ಲ ಬುಡ್ಗ ಜಂಗಮರು ಎಂದು ಅಧ್ಯಯನಗಳು ತಿಳಿಸುತ್ತವೆ.

ನರಸಿಂಹ, ನಂದಿ, ರಾಜ, ರಾಣಿ, ಕುದುರೆ, ಗೂಳಿ, ಗೊರಿಲ್ಲಾ, ಜೋಡಿ ಕುದುರೆಯ ಮುಖವಾಡಗಳನ್ನು ಧರಿಸಿ, ಲಾಸ್ಯದಿಂದ ಬಳಕುತ್ತ ನಡೆಯುವ ಇವರಲ್ಲಿ ಕತ್ತಿವರಸೆ ಮಾಡುವವರು, ಚಕ್ರ ಸುತ್ತುವವರೂ ಇದ್ದಾರೆ. ತಮ್ಮ ಪರಂಪರೆಯನ್ನು ಬಿಡಲಾಗದೆ, ತಲೆ ಮಾರುಗಳಿಂದ ಇದೇ ವೃತ್ತಿಯಲ್ಲಿದ್ದಾರೆ.

ಈ ವೃತ್ತಿ ಕೈ ಹಿಡಿದಿದೆಯೇ ಎಂಬ ಪ್ರಶ್ನೆಗೆ ಉತ್ತರ ಹೀಗಿದೆ. 'ಸರ್ಕಾರದಿಂದ ಕೆಲವರಿಗೆ ಮಾತ್ರ ಮಾಸಾಶನ ನೀಡುತ್ತಾರೆ. ವರ್ಷಕ್ಕೆ ಮೂರು ನಾಲ್ಕು ಕಾರ್ಯಕ್ರಮಗಳು ಸಿಗುತ್ತವೆ. ಎಂಟು ಮಂದಿ ಇರುವ ತಂಡಕ್ಕೆ ಗರಿಷ್ಠ ₹ 30,000 ಸಂಭಾವನೆ ನೀಡಲಾಗುತ್ತದೆ. ಹೊರಜಿಲ್ಲೆಯವರಿಗೆ ಹೋಗಿಬರುವ ಖರ್ಚು ಎಂದು ಐದು ಸಾವಿರ ಹೆಚ್ಚುವರಿಯಾಗಿ ಸೇರಿಸಿ ನೀಡಲಾಗುತ್ತದೆ. ಇದರಲ್ಲೇ ಇಡೀ ತಂಡ ಊಟ, ವಸತಿಯನ್ನೂ ನೋಡಿಕೊಳ್ಳಬೇಕು'.

4ನೇ ಪುಟ ನೋಡಿ



ಮೈಸೂರು ದಸರಾ ಉತ್ಸವದಲ್ಲಿ ಭಾಗವಹಿಸಿದ್ದ ಹಗಲುವೇಷ ಕಲಾವಿದರು

ಬೊಂಬೆ ಕುಣಿತ ಕಲೆ ಹೊಸ ತಲೆಮಾರಿನ ಜನರನ್ನು ಆಕರ್ಷಿಸುವ ರೀತಿಯಲ್ಲಿ ಹೊಸ ಆಯಾಮದಿಂದ ಮರುಸ್ಥಾಪಿಸಬೇಕಾದ ಅಗತ್ಯವಿದೆ. ಕಲಾವಿದರ ಬದುಕು ಕೂಡ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕಾರಣ ಹೊಸಬರು ಈ ಕಲೆ ನೆಚ್ಚಿಕೊಂಡು ಬರುವುದು ಕಷ್ಟ. ಇರುವವರೇ ಈ ಕಲೆಯನ್ನು ಉಳಿಸಿಕೊಂಡು ಹೋಗಬೇಕಾದ ಅಗತ್ಯವಿದೆ. ಸರ್ಕಾರ ನಮ್ಮಂಥ ಅನುಭವಿಗಳಿಗೆ ಆರ್ಥಿಕ ನೆರವು ಒದಗಿಸಿದರೆ ಹೊಸಬರನ್ನು ಈ ಕ್ಷೇತ್ರಕ್ಕೆ ಕರೆತರುವ ಪ್ರಯತ್ನ ಮಾಡಬಹುದು.

ಹನುಮಂತಪ್ಪ ಬಬ್ಬಲ್, ಬೊಂಬೆ ಕುಣಿತ ಕಲಾವಿದ, ಚಿಲಕಮುಕಿ, ಕೊಪ್ಪಳ ಜಿಲ್ಲೆ

ಮತ ಎಣಿಕೆ ಇಂದು

ನಾಲ್ಕು ರಾಜ್ಯಗಳ ಚುನಾವಣಾ ಫಲಿತಾಂಶಕ್ಕೆ ಕ್ಷಣಗಣನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಮುಂಚಿನ 'ಸೆಮಿಫೈನಲ್' ಎಂದೇ ಪರಿಗಣಿಸಲಾಗಿರುವ ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ ಹಾಗೂ ಛತ್ತೀಸಗಢ ವಿಧಾನಸಭೆ ಚುನಾವಣೆಯ ಮತ ಎಣಿಕೆ ಭಾನುವಾರ ನಡೆಯಲಿದೆ. ಈ ಫಲಿತಾಂಶವು ಬಿಜೆಪಿ ಹಾಗೂ ಅದರ ಪ್ರಮುಖ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಸಾಮರ್ಥ್ಯ ಹಾಗೂ ದೌರ್ಬಲ್ಯಗಳನ್ನೂ ಹೊರಹಾಕಲಿದೆ. 'ಫೈನಲ್' ಹಣಾಹಣಿಯ ರಣತಂತ್ರಗಳ ದಿಕ್ಕನ್ನು ಸಹ ಈ ಫಲಿತಾಂಶ ನಿರ್ಧರಿಸಲಿದೆ ಎಂದು ವ್ಯಾಖ್ಯಾನಿಸಲಾಗಿದೆ.

ನವೆಂಬರ್ 7ರಿಂದ 30ರ ಅವಧಿಯಲ್ಲಿ ಐದು ರಾಜ್ಯಗಳಿಗೆ ಚುನಾವಣೆ ನಡೆದಿತ್ತು. ಮಿಜೋರಾಂನಲ್ಲಿ ಮಾತ್ರ ಮತ ಎಣಿಕೆ ಸೋಮವಾರ ನಡೆಯಲಿದೆ. ಡಿ.3ರಂದು ನಿಗದಿಯಾಗಿರುವ ಮತ ಎಣಿಕೆಯನ್ನು ಬೇರೆ ದಿನಕ್ಕೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿ ಮಿಜೋರಾಂನ ಎನ್‌ಜಿಒ ಕೋ ಆರ್ಡಿನೇಷನ್ ಕಮಿಟಿ ರಾಜ್ಯದಾದ್ಯಂತ ಶುಕ್ರವಾರ ಪ್ರತಿಭಟನೆ ನಡೆಸಿತ್ತು. ಹೀಗಾಗಿ, ಸೋಮವಾರ ಮತ ಎಣಿಕೆ ನಡೆಸಲು ಆಯೋಗ ತೀರ್ಮಾನಿಸಿದೆ.

ಮತಗಟ್ಟೆ ಸಮೀಕ್ಷೆ ಪ್ರಕಾರ, 90 ಸ್ಥಾನಗಳನ್ನು ಹೊಂದಿರುವ ಛತ್ತೀಸಗಢದಲ್ಲಿ ಕಾಂಗ್ರೆಸ್ ಸ್ಪಷ್ಟ ಮೇಲುಗೈ ಸಾಧಿಸಿದ್ದು, ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ. 119 ಸ್ಥಾನಗಳನ್ನು ಹೊಂದಿರುವ ತೆಲಂಗಾಣದಲ್ಲಿ ಬಿಆರ್‌ಎಸ್ ಅನ್ನು ಕಾಂಗ್ರೆಸ್ ಅಧಿಕಾರದಿಂದ ಕೆಳಗಿಳಿಸಲಿದೆ ಎಂದೂ ಸಮೀಕ್ಷೆಗಳು ಹೇಳಿವೆ. ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ನಿಕಟ ಸ್ಪರ್ಧೆ ಏರ್ಪಟ್ಟಿದ್ದು, ಮತ ಎಣಿಕೆಯ ಕೊನೆಯ ಕ್ಷಣದವರೆಗೂ ಜಿದ್ದಾಜಿದ್ದಿ ಮುಂದುವರಿಯಬಹುದು. ಈ ರಾಜ್ಯಗಳಲ್ಲಿ ಅತಂತ್ರ ಫಲಿತಾಂಶ ಬರುವ ಸಾಧ್ಯತೆಯೂ ಇದೆ ಎಂದು ಸಮೀಕ್ಷೆಗಳು ಹೇಳಿವೆ. ಈ ಎರಡೂ ರಾಜ್ಯಗಳ ಫಲಿತಾಂಶದ ಕಡೆಗೆ ಎಲ್ಲರ ದೃಷ್ಟಿ ನೆಟ್ಟಿದೆ. ಎರಡೂ ರಾಜ್ಯಗಳಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಗಳನ್ನು ಘೋಷಿಸದೆಯೇ ಬಿಜೆಪಿ ಚುನಾವಣೆ ಎದುರಿಸಿದೆ.

230 ಸದಸ್ಯರ ಬಲಾಬಲದ ಮಧ್ಯಪ್ರದೇಶದಲ್ಲಿ 19 ವರ್ಷಗಳಿಂದ ಬಿಜೆಪಿ ಅಧಿಕಾರದಲ್ಲಿದೆ. ಆಡಳಿತ ವಿರೋಧಿ ಅಲೆ ಹಾಗೂ ಗ್ಯಾರಂಟಿಗಳ ಘೋಷಣೆಯು ಕಾಂಗ್ರೆಸ್‌ಗೆ ಅನುಕೂಲ ಮಾಡಿಕೊಡಲಿದೆ ಎಂದು ಆ ಪಕ್ಷದ ನಾಯಕರು ಭಾವಿಸಿದ್ದರು.

7ನೇ ಪುಟ ನೋಡಿ



ಅಶೋಕ್ ಗೆಹಲೋತ್ | ಶಿವರಾಜ ಸಿಂಗ್ ಚೌಹಾಣ್ | ಭೂಪೇಶ್ ಬಘೇಲ್ | ಕೆ.ಚಂದ್ರಶೇಖರ್ ರಾವ್

ಯಾರ ವರ್ಚಸ್ಸು ಎಷ್ಟು?

ಈ ಫಲಿತಾಂಶವು ಕಮಲನಾಥ್, ಅಶೋಕ್ ಗೆಹಲೋತ್, ಭೂಪೇಶ್ ಬಘೇಲ್, ಎ. ರೇವಂತ್ ರೆಡ್ಡಿ (ಎಲ್ಲ ಕಾಂಗ್ರೆಸ್ ನಾಯಕರು), ಶಿವರಾಜ ಸಿಂಗ್ ಚೌಹಾಣ್, ನರೇಂದ್ರ ಸಿಂಗ್ ತೋಮರ್, ವಸುಂಧರಾ ರಾಜೇ ಸಿಂಧಿಯಾ, ರಮಣ್ ಸಿಂಗ್ (ಎಲ್ಲ ಬಿಜೆಪಿ ನಾಯಕರು) ಹಾಗೂ ಕೆ.ಚಂದ್ರಶೇಖರ್ ರಾವ್ (ಬಿಆರ್‌ಎಸ್) ಅವರ ವರ್ಚಸ್ಸು ಎಷ್ಟಿದೆ ಎಂಬುದನ್ನು ತೋರಿಸಿಕೊಡಲಿದೆ.

ಮಿಜೋರಾಂ ಮತ ಎಣಿಕೆ ನಾಳೆ

638 ಕ್ಷೇತ್ರ, 7,643 ಅಭ್ಯರ್ಥಿಗಳು

ನಾಲ್ಕು ರಾಜ್ಯಗಳ 638 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 7,643 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಅವರ ಭವಿಷ್ಯ ಭಾನುವಾರ ನಿರ್ಧಾರವಾಗಲಿದೆ. ಮತ ಎಣಿಕೆ ಬೆಳಿಗ್ಗೆ 8 ಗಂಟೆಗೆ ಆರಂಭವಾಗಲಿದೆ.

ಈ ರಾಜ್ಯಗಳು ಒಟ್ಟಾಗಿ 82 ಲೋಕಸಭಾ ಸ್ಥಾನಗಳನ್ನು ಹೊಂದಿವೆ. ಈ ಕ್ಷೇತ್ರಗಳ ಪೈಕಿ, 2019ರ ಚುನಾವಣೆಯಲ್ಲಿ ಬಿಜೆಪಿ 66 ಸ್ಥಾನಗಳನ್ನು ಮತ್ತು ಕಾಂಗ್ರೆಸ್ 6 ಸ್ಥಾನಗಳನ್ನು ಜಯಿಸಿದ್ದವು. ಉಳಿದ ಸ್ಥಾನಗಳು ಪ್ರಾದೇಶಿಕ ಪಕ್ಷಗಳ ಪಾಲಾಗಿದ್ದವು.

ನಾಳೆಯಿಂದ ಸಂಸತ್ ಅಧಿವೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಲ್ಕು ರಾಜ್ಯಗಳ ವಿಧಾನ ಸಭಾ ಚುನಾವಣಾ ಫಲಿತಾಂಶದ ನಂತರ ಸೋಮವಾರದಿಂದ ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮತ್ತೊಂದು ಸುತ್ತಿನ 'ಸಮರ'ಕ್ಕೆ ಸರ್ಕಾರ ಹಾಗೂ ವಿರೋಧ ಪಕ್ಷಗಳು ಸಜ್ಜಾಗಿವೆ.

ಅಧಿವೇಶನದಲ್ಲಿ ಸುಗಮ ಕಲಾಪವನ್ನು ವಿಪಕ್ಷಗಳು ಖಾತ್ರಿಪಡಿಸಬೇಕು ಎಂದು ಹೇಳಿರುವ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ಎಲ್ಲ ವಿಷಯಗಳ ಕುರಿತೂ ಚರ್ಚಿಸಲು ಸಿದ್ಧರಿದ್ದೇವೆ ಎಂದು ತಿಳಿಸಿದ್ದಾರೆ.

ಅಧಿವೇಶನದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಶನಿವಾರ ಸರ್ವಪಕ್ಷಗಳ ನಾಯಕರ ಸಭೆ ಏರ್ಪಡಿಸಿತ್ತು. 23 ಪಕ್ಷಗಳ 30 ನಾಯಕರು ಸಭೆಯಲ್ಲಿ ಭಾಗಿಯಾಗಿದ್ದರು. ಎಲ್ಲ ವಿಷಯಗಳ ಕುರಿತು ಚರ್ಚೆ ನಡೆಸಲು ಸರ್ಕಾರ ಸಿದ್ಧವಿರುವುದಾಗಿ ವಿಪಕ್ಷಗಳಿಗೆ ಮನವರಿಕೆ ಮಾಡಲಾಗಿದೆ ಎಂದು ಜೋಶಿ ಹೇಳಿದರು.

'ರಚನಾತ್ಮಕ ಚರ್ಚೆಗೆ ಸರ್ಕಾರ ಸಿದ್ಧವಾಗಿದೆ. ಕಲಾಪ ಸುಗಮವಾಗಿ ನಡೆಯಲು ಸಹಕಾರ ನೀಡುವಂತೆ ಪ್ರತಿಪಕ್ಷಗಳಿಗೆ ಮನವಿ ಮಾಡಲಾಗಿದೆ. ವಿಪಕ್ಷಗಳ ಸಲಹೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಲಾಗಿದೆ' ಎಂದೂ ಅವರು ಹೇಳಿದರು.

ಅಧಿವೇಶನ ಡಿ.22ರ ವರೆಗೆ (ಒಟ್ಟು 15 ದಿನ) ನಡೆಯಲಿದೆ. ಅಧಿವೇಶನದಲ್ಲಿ 19 ಮಸೂದೆಗಳು ಮತ್ತು ಎರಡು ಹಣಕಾಸು ವಿಷಯಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಜೋಶಿ ಮಾಹಿತಿ ನೀಡಿದರು.

ಗಡಿಯಲ್ಲಿ ಚೀನಾ ಆಕ್ರಮಣ, ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ, ಬೆಲೆ ಏರಿಕೆ ಮತ್ತು ಕೇಂದ್ರ ತನಿಖಾ ಸಂಸ್ಥೆಗಳ ದುರ್ಬಳಕೆ, ರಾಜ್ಯ ಸರ್ಕಾರಗಳ ಆಡಳಿತದಲ್ಲಿ ರಾಜ್ಯಪಾಲರ ಹಸ್ತಕ್ಷೇಪ, ಪ್ಯಾಲೆಸ್ಟೀನ್ ವಿಷಯದಲ್ಲಿ ಸರ್ಕಾರದ ನಡೆ ಸೇರಿದಂತೆ ವಿವಾದಾತ್ಮಕ ವಿಷಯಗಳ ಚರ್ಚೆಗೆ ವಿರೋಧ ಪಕ್ಷಗಳು ಪಟ್ಟು ಹಿಡಿಯಲಿವೆ ಎಂದು ಮೂಲಗಳು ಹೇಳಿವೆ.



ಮೊಯಿತ್ರಾ ಉಚ್ಚಾಟನೆಗೆ ಶಿಫಾರಸು: ಚರ್ಚೆಗೆ ಪಟ್ಟು

'ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಉಚ್ಚಾಟಿಸುವಂತೆ ಸಂಸತ್ತಿನ ನೀತಿ ಸಮಿತಿ ಮಾಡಿರುವ ಶಿಫಾರಸಿನ ಕುರಿತು ಲೋಕಸಭೆಯಲ್ಲಿ ಚರ್ಚೆ ನಡೆಸಬೇಕು. ಚರ್ಚೆ ಬಳಿಕವೇ ಉಚ್ಚಾಟನೆ ಕುರಿತು ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಟಿಎಂಸಿ ನಾಯಕರಾದ ಸುದೀಪ್ ಬಂಡೋಪಾಧ್ಯಾಯ ಹಾಗೂ ಡೆರಿಕ್ ಒಬ್ರಯಾನ್ ಅವರು ಸರ್ವಪಕ್ಷಗಳ ನಾಯಕರ ಸಭೆಯಲ್ಲಿ ಆಗ್ರಹಿಸಿದ್ದಾರೆ. ಇದಕ್ಕೆ ವಿಪಕ್ಷಗಳ ಉಳಿದ ನಾಯಕರು ಬೆಂಬಲ ವ್ಯಕ್ತಪಡಿಸಿದ್ದಾರೆ. ಇಬ್ಬರು ಎಎಪಿ ಸಂಸದರಾದ ಸಂಜಯ್ ಸಿಂಗ್ ಮತ್ತು ರಾಘವ್ ಚಡ್ಡಾ ಅವರ ಅಮಾನತು ಬಗ್ಗೆಯೂ ಅವರು ಪ್ರಸ್ತಾಪಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 9

ಮೂರು ಸಹಕಾರ ಬ್ಯಾಂಕ್ ಹಗರಣ: ಸಿಬಿಐ ತನಿಖೆಗೆ

ಬೆಂಗಳೂರು: ನಗರದ ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್, ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟಡ್ ಮತ್ತು ಶ್ರೀ ವಸಿಷ್ಠ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್‌ಗಳಲ್ಲಿ ನಡೆದಿರುವ ಬಹುಕೋಟಿ ರೂಪಾಯಿ ಹಗರಣಗಳನ್ನು ಸಿಬಿಐ ತನಿಖೆಗೆ ವಹಿಸಲಾಗಿದೆ.

5


ಒಳ ಪುಟಗಳಲ್ಲಿ
ಭ್ರೂಣ ಹತ್ಯೆ: ಶುಶ್ರೂಷಕಿ ಬಂಧನ 7
ಚರ್ಚೆಗೆ ಗ್ರಾಸವಾದ 'ಮೆಲೋಡಿ' 9
ಆದಿತ್ಯ ಎಲ್1 ಉಪಗ್ರಹ: ಪೇಲೋಡ್ ಕಾರ್ಯಾರಂಭ 9



ಚಂಡಮಾರುತ: ಶಾಲೆಗಳಿಗೆ ರಜೆ, ರೈಲುಗಳ ಸಂಚಾರ ರದ್ದು 8
'ದಲಿತ ಸಿ.ಎಂ– ಹೈಕಮಾಂಡ್ ನಿರ್ಣಯ ಅಂತಿಮ' 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಡಯಾಲಿಸಿಸ್ ಸೇವೆ ಅಸ್ತವ್ಯಸ್ತ

ಬಾಕಿ ವೇತನಕ್ಕಾಗಿ ನೌಕರರ ಪ್ರತಿಭಟನೆ: ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಲ್ಕು ತಿಂಗಳ ಬಾಕಿ ವೇತನ ನೀಡಬೇಕು ಹಾಗೂ ಸೇವಾ ಭದ್ರತೆ ಒದಗಿಸಬೇಕು' ಎಂದು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿರುವ ಡಯಾಲಿಸಿಸ್ ಕೇಂದ್ರಗಳ ನೌಕರರ ಪೈಕಿ ಕೆಲವರು ವಿಷ ಕುಡಿದು ಶನಿವಾರ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗಳಲ್ಲಿನ ಡಯಾಲಿಸಿಸ್ ಸಿಬ್ಬಂದಿ ಮುಷ್ಕರ ನಿರತರಾಗಿರುವ ಕಾರಣ ಸೇವೆಗಳಲ್ಲಿ ವ್ಯತ್ಯಯವಾಗಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಈ ಚಿಕಿತ್ಸೆ ದುಬಾರಿಯಾಗಿದೆ. ಮೂತ್ರಕೋಶ (ಕಿಡ್ನಿ) ಸಮಸ್ಯೆಯಿಂದ ಬಳಲುತ್ತಿರುವ ಬಡವರು ಮತ್ತು ಮಧ್ಯಮ ವರ್ಗದವರು ಡಯಾಲಿಸಿಸ್‌ಗಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿರುವ ಈ ಕೇಂದ್ರಗಳನ್ನು ನೆಚ್ಚಿಕೊಂಡಿದ್ದಾರೆ. ಕೇಂದ್ರಗಳು ಚಿಕಿತ್ಸೆಗಾಗಿ ನಿರ್ದಿಷ್ಟ ಸಿಬ್ಬಂದಿಯನ್ನು ಆಶ್ರಯಿಸಿವೆ. ಸಿಬ್ಬಂದಿ ಮುಷ್ಕರದಲ್ಲಿ ಭಾಗಿಯಾಗಿರುವುದರಿಂದಾಗಿ ಕೇಂದ್ರದಲ್ಲಿ ಅಗತ್ಯ ಚಿಕಿತ್ಸೆ ಸಿಗದೇ ಕಷ್ಟಪಡುವಂತಾಗಿದೆ ಎಂದು ರೋಗಿಗಳು ಹಾಗೂ ಅವರ ಸಂಬಂಧಿಕರು ದೂರಿದ್ದಾರೆ.

ನವೆಂಬರ್ 30ರಿಂದ ಕೆಲಸಕ್ಕೆ ಗೈರಾಗಿ ರಾಜ್ಯದಾದ್ಯಂತ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಂಡಿರುವ ನೌಕರರು ತಮ್ಮ ಬೇಡಿಕೆ ಈಡೇರಿಕೆಗೆ ಒತ್ತಾಯಿಸುತ್ತಿದ್ದಾರೆ.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲೂ ಪ್ರತಿಭಟನೆ ಕುಳಿತಿರುವ ನೌಕರರು, ಬೇಡಿಕೆ ಈಡೇರಿಸುವವರೆಗೂ ಸ್ಥಳದಿಂದ ಹೋಗುವುದಿಲ್ಲವೆಂದು ಪಟ್ಟು ಹಿಡಿದಿದ್ದಾರೆ.

ಪ್ರತಿಭಟನೆ ಸ್ಥಳದಲ್ಲಿ ಶನಿವಾರ ಹಾಜರಿದ್ದ ರಾಜ್ಯ ಡಯಾಲಿಸಿಸ್ ಸಂಘದ ಉಪಾಧ್ಯಕ್ಷ ಬೀದರ್ ಜಿಲ್ಲೆಯ ರಾಮು ಕೀಟನಾಶಕ ಕುಡಿದು ಆತ್ಮಹತ್ಯೆಗೆ ಯತ್ನಿಸಿದರು. ಅದನ್ನು ಗಮನಿಸಿದ ಸಹೋದ್ಯೋಗಿಗಳು ಕೂಡಲೇ ರಾಮು ಹಾಗೂ ಇತರರನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ಎಲ್ಲರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ.

ಸಚಿವ, ಅಧಿಕಾರಿಗಳ ವರ್ತನೆಯಿಂದ ಬೇಸರ: 'ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ನ. 30ರಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ಸಚಿವರಾಗಲಿ ಹಾಗೂ ಅಧಿಕಾರಿಗಳಾಗಲಿ ಸ್ಥಳಕ್ಕೆ ಬಂದು ಸಮಸ್ಯೆ ಆಲಿಸಿಲ್ಲ' ಎಂದು ಪ್ರತಿಭಟನಕಾರರು ಅಸಮಾಧಾನ ವ್ಯಕ್ತಪಡಿಸಿದರು.

'ಬಿಆರ್‌ಎಸ್ ಸಂಸ್ಥೆಯವರು 9 ತಿಂಗಳ ಇಎಸ್‌ಐ ಮತ್ತು ಪಿಎಫ್ ನೀಡಿಲ್ಲ. ಕೆಎಸ್‌ಕೆಎಜಿ ಸಂಸ್ಥೆಯವರು (ಸಂಜೀವಿನಿ ಸಂಸ್ಥೆ) 20 ತಿಂಗಳ ಇಎಸ್‌ಐ ಮತ್ತು ಪಿಎಫ್ ಕೊಟ್ಟಿಲ್ಲ. ಸೇವಾ ಭದ್ರತೆಯೂ ಇಲ್ಲ. ರಾಜ್ಯ ಸರ್ಕಾರ ಕೂಡಲೇ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು' ಎಂದು ಆಗ್ರಹಿಸಿದರು.

ಇನ್ನೊಂದು ಸುದ್ದಿ 7

13 ಮನೆಗಳಿಗೆ ನುಗ್ಗಿದ ನೀರು: ಗ್ರಾಮಸ್ಥರ ಪ್ರತಿಭಟನೆ

ಎತ್ತಿನಹೊಳೆ: ಸೋರಿಕೆ ನೀರಿನ 'ಪ್ರವಾಹ'

• ಜಾನೇಕೆರೆ ಆರ್. ಪರಮೇಶ್

ಸಕಲೇಶಪುರ (ಹಾಸನ ಜಿಲ್ಲೆ): ಎತ್ತಿನಹೊಳೆ ಯೋಜನೆ ಪೈಪ್‌ಲೈನ್‌ನಲ್ಲಿ ಶನಿವಾರ ಮತ್ತೆ ಭಾರಿ ಪ್ರಮಾಣದ ನೀರು ಪ್ರವಾಹದಂತೆ ಉಕ್ಕಿ ಹರಿದಿದ್ದು, 13 ಮನೆ, ರಸ್ತೆ, ಕಾಫಿ ತೋಟಗಳಿಗೆ ಹಾನಿ ಉಂಟಾಗಿದೆ.

ಯೋಜನೆಯ ಕಾಡಮನೆ ಚೆಕ್‌ಡ್ಯಾಂ 4 ಮತ್ತು 5ರಿಂದ ಪರೀಕ್ಷಾರ್ಥವಾಗಿ ಶನಿವಾರ ಮಧ್ಯಾಹ್ನ ಹರಿಸಿದ ನೀರು, ತಾಲ್ಲೂಕಿನ ಹಾರ್ಲೆ ಕೂಡಿಗೆ ಬಳಿ ಹಳ್ಳಿಮನೆ ಗ್ರಾಮದಲ್ಲಿ ಪ್ರವಾಹ ಸೃಷ್ಟಿಸಿತ್ತು. ನೀರು ರಭಸವಾಗಿ ಮನೆಯೊಳಕ್ಕೆ ನುಗ್ಗಿತ್ತು. ಮನೆ ಮುಂದೆ ಬಿಸಿಲಿಗೆ ಒಣಗಲು ಹಾಕಿದ್ದ ಕಾಫಿ ಬೀಜಗಳು ಕೊಚ್ಚಿಹೋದವು. ಹೂವಿನ ಕುಂಡಗಳು, ಅಂಗಳದಲ್ಲಿದ್ದ ಎಲ್ಲ ವಸ್ತುಗಳು, ನೀರಿನೊಂದಿಗೆ ತಗ್ಗು ಪ್ರದೇಶದತ್ತ ಹೋಗಿದ್ದವು.

ಎರಡು ಗಂಟೆ ರಭಸವಾಗಿ ನೀರು ನುಗ್ಗಿದ್ದರಿಂದ ಮನೆಗಳ ಗೋಡೆಗಳಿಗೆ, ತಳಪಾಯಕ್ಕೆ ಹಾನಿಯಾಗಿರುವುದು ಕಂಡುಬಂದಿದೆ. ಎಚ್.ಸಿ. ಮೋಹನ್ ಎಂಬವರು ಮರದ ಕೆಲಸ ಮಾಡುವ ಯಂತ್ರಗಳು, ಮರದ ನಾಟಾಗಳು, ಪೀಠೋಪಕರಣಗಳು ನೀರಿನಲ್ಲಿ ಮುಳುಗಿದ್ದು, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ ಎಂದು ಅಧಿಕಾರಿಗಳ ಬಳಿ ಅಳಲು ತೋಡಿಕೊಳ್ಳುತ್ತಿದ್ದುದು ಕಂಡುಬಂತು.

5ನೇ ಪುಟ ನೋಡಿ



ಸಕಲೇಶಪುರ ತಾಲ್ಲೂಕು ಹಾರ್ಲೆ ಕೂಡಿಗೆ ಬಳಿ ಎತ್ತಿನಹೊಳೆ ಪೈಪ್‌ನಿಂದ ನೀರು ಉಕ್ಕಿ ರಸ್ತೆಯಲ್ಲಿ ಹರಿಯಿತು
ಪ್ರಜಾವಾಣಿ ಚಿತ್ರ: ಜಾನೇಕೆರೆ ಆರ್. ಪರಮೇಶ್



ಕೃತಿಚೌರ್ಯ ಪತ್ತೆಗೆ ದೇಸಿ ಸಾಫ್ಟ್‌ವೇರ್

ಬೆಂಗಳೂರು: ಸಂಶೋಧನಾ ಪ್ರಬಂಧಗಳ ಕೃತಿಚೌರ್ಯ ಪತ್ತೆಗೆ ಬೆಂಗಳೂರು ವಿಶ್ವವಿದ್ಯಾಲಯ ಹೊಸ ಸಾಫ್ಟ್‌ವೇರ್ ಅಳವಡಿಸಿಕೊಂಡಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿರ್ದೇಶನದಂತೆ ಡ್ರಿಲ್ಬಿಟ್ ಸಂಸ್ಥೆಯ ದೇಸಿ ಸಾಫ್ಟ್‌ವೇರ್ ಅಳವಡಿಸಿಕೊಳ್ಳಲಾಗಿದ್ದು, ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುವ ಸಂಶೋಧನಾ ಪ್ರಬಂಧಗಳು, ಸಂಶೋಧನಾ ಲೇಖನಗಳಲ್ಲಿ ಕೃತಿಚೌರ್ಯ ಮಾಡುವುದನ್ನು ಈ ಸಾಫ್ಟ್‌ವೇರ್ ಪತ್ತೆ ಮಾಡಲಿದೆ. ಶೋಧಶುದ್ಧಿ ಮೂಲಕ ಕೃತಿಚೌರ್ಯದ ನಿಖರ ಫಲಿತಾಂಶ ನೀಡುತ್ತದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಪಾಲಕ ಬಿ.ಆರ್.ರಾಧಾಕೃಷ್ಣ ಮಾಹಿತಿ ನೀಡಿದ್ದಾರೆ.

2015ರಿಂದಲೂ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 'ಪ್ಲಾಗರಿಸಂ ಡಿಟೆಕ್ಷನ್ ಸಾಫ್ಟ್‌ವೇರ್ ಉಪಯೋಗಿಸಲಾಗುತ್ತಿತ್ತು. ಯುಜಿಸಿ ನಿರ್ದೇಶನದಂತೆ ಇನ್ನುಮುಂದೆ ಡ್ರಿಲ್ಬಿಟ್ ಸಂಸ್ಥೆಯ ನೂತನ ಸಾಫ್ಟ್‌ವೇರ್ ಬಳಕೆ ಮಾಡಲಾಗುವುದು ಎಂದರು.

ಡ್ರಿಲ್ಬಿಟ್ ಸಂಪೂರ್ಣ ದೇಸಿ ನಿರ್ಮಿತ ಸಾಫ್ಟ್‌ವೇರ್. ಮೇಕ್ ಇನ್ ಇಂಡಿಯಾ ಪರಿಕಲ್ಪನೆಯಡಿ ರೂಪಿಸಲಾಗಿದೆ. ಇತರೆ ಸಾಫ್ಟ್‌ವೇರ್‌ಗಳಿಗಿಂತ ನಿಖರವಾಗಿ ಶೋಧಶುದ್ಧಿ ಮಾಡುವ ಸಾಮರ್ಥ್ಯ ಹೊಂದಿದೆ ಎಂದು ಮಾಹಿತಿ ನೀಡಿದರು.

ಮನಸೆಳೆದ ಶ್ವಾನ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದ ಪಶುವೈದ್ಯ ಕಾಲೇಜು ಕ್ಯಾಂಪಸ್‌ನಲ್ಲಿ ಸಿಲಿಕಾನ್ ಸಿಟಿ ಕೆನಲ್ ಕ್ಲಬ್ ಹಾಗೂ ಬೆಂಗಳೂರು ಕೆನೈನ್ ಕ್ಲಬ್ ಆಯೋಜಿಸಿರುವ ಅಖಿಲ ಭಾರತ ಶ್ವಾನ ಪ್ರದರ್ಶನದಲ್ಲಿ ವಿವಿಧ ತಳಿಯ ನಾಯಿಗಳು ಗಮನ ಸೆಳೆದವು.

ಉತ್ತರ ಕರ್ನಾಟಕದ ಜನಪ್ರಿಯ ತಳಿ ಮುಧೋಳ, ವಿಶೇಷ ತಳಿಗಳಾದ ಅಕಿತಾ, ಮಾಲ್ಟೀಸ್, ಸೈಬೀರಿಯನ್ ಹಸ್ಕಿ, ಬೆಲ್ಜಿಯನ್ ಶೆಫರ್ಡ್, ಅಫಘಾನ್ ಹೌಂಡ್ , ಜರ್ಮನ್ ಶೆಫರ್ಡ್, ಡಾಬರ್‌ಮನ್, ಲ್ಯಾಬ್ರಡಾರ್ ರಿಟ್ರೀವರ್, ಗೋಲ್ಡನ್ ರಿಟ್ರೀವರ್, ಬಾಕ್ಸರ್, ಗ್ರೇಟ್‌ಡೇನ್, ಕಾಕರ್ ಸ್ಪೇನಿಯೆಲ್ ಮತ್ತಿತರ ತಳಿಯ ಶ್ವಾನಗಳು ಪಾಲ್ಗೊಂಡು ತಮ್ಮ ಸೌಂದರ್ಯ, ಬುದ್ಧಿಮತ್ತೆಯನ್ನು ಪ್ರದರ್ಶಿಸಿದವು.



ಅಖಿಲ ಭಾರತ ಶ್ವಾನ ಪ್ರದರ್ಶನದಲ್ಲಿ ವಿವಿಧ ತಳಿಗಳ ಶ್ವಾನಗಳೊಂದಿಗೆ ಅವುಗಳ ಮಾಲೀಕರು ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಕಡಲೆಕಾಯಿ ಪರಿಷೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಮಲ್ಲೇಶ್ವರ ಗೆಳೆಯರ ಬಳಗವು ಮಲ್ಲೇಶ್ವರದಲ್ಲಿ ಆಯೋಜಿಸಿರುವ 7ನೇ ವರ್ಷದ ಕಡಲೆಕಾಯಿ ಪರಿಷೆಗೆ ಶನಿವಾರ ಚಾಲನೆ ನೀಡಲಾಯಿತು. ಸೋಮವಾರದವರೆಗೆ ಪರಿಷೆ ನಡೆಯಲಿದೆ. ಮಲ್ಲೇಶ್ವರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ದೇಗುಲ ಸುತ್ತಲಿನ ರಸ್ತೆಗಳು ತಳಿರು ತೋರಣಗಳಿಂದ ಅಲಂಕೃತವಾಗಿವೆ. ಗಂಗಮ್ಮ, ನರಸಿಂಹಸ್ವಾಮಿ ದೇವಾಲಯ, ಕಾಡುಮಲ್ಲಿಕಾರ್ಜುನ ದೇವಸ್ಥಾನಗಳನ್ನು ಕಡಲೆಕಾಯಿಗಳಿಂದಲೇ ಅಲಂಕಾರ ಮಾಡಲಾಗಿದೆ. 20 ಅಡಿ ಉದ್ದ ಮತ್ತು 20 ಅಡಿ ಅಗಲದ ನಂದಿಯ ಪ್ರತಿಕೃತಿಯನ್ನು 800 ಕೆ.ಜಿ ಕಡಲೆಕಾಯಿಗಳಿಂದ ಅಲಂಕರಿಸಲಾಗಿದ್ದು, ಯುವಕರು ಅದರ ಮುಂದೆ ನಿಂತು ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ವಿವಿಧ ತಳಿಗಳ ಕಡಲೆಕಾಯಿಗಳ ರಾಶಿಗಳ ಸಾಲು, ಹಲವು ಬಗೆಯ ತಿಂಡಿ–ತಿನಿಸುಗಳು, ಆಟಿಕೆಗಳು, ಆಲಂಕಾರಿಕ ವಸ್ತುಗಳ ಮಾರಾಟ ಮಳಿಗೆಗಳು ಆರಂಭವಾಗಿವೆ.



ಮಲ್ಲೇಶ್ವರದಲ್ಲಿ ಶನಿವಾರ ಆರಂಭವಾದ ಪರಿಷೆಯಲ್ಲಿ ಮಕ್ಕಳು ಕಡಲೆಕಾಯಿ ತೆಗೆದುಕೊಂಡರು —ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಪರಿಷೆಯನ್ನು ಪ್ಲಾಸ್ಟಿಕ್ ಮುಕ್ತಗೊಳಿಸಲು ವಿವಿಧ ಸಂಘಟನೆಗಳ ಸದಸ್ಯರು ಜಾಗೃತಿ ಮೂಡಿಸುವುದರ ಜೊತೆಗೆ ಉಚಿತವಾಗಿ ಪೇಪರ್, ಬಟ್ಟೆಯ ಕೈಚೀಲಗಳನ್ನು ವಿತರಿಸುತ್ತಿದ್ದರು.

ಹೊರ ರಾಜ್ಯದ ಶೇಂಗಾ: ತಮಿಳುನಾಡು, ಆಂಧ್ರ ಪ್ರದೇಶದ ವಿವಿಧೆಡೆಯಿಂದಲೂ ಹಾಲ್ಗಡಲೆ, ಕೆಂಪುಕಡಲೆ ಸೇರಿ ಎರಡು, ಮೂರು ಹಾಗೂ ನಾಲ್ಕು ಬೀಜದ ನಾಟಿ, ಹೈಬ್ರಿಡ್ ತಳಿಗಳ ಕಡಲೆಕಾಯಿಗಳು ಬಂದಿವೆ. ಒಂದು ಸೇರಿಗೆ ₹40 ಹಾಗೂ ₹50 ರಂತೆ ಮಾರಾಟ ಮಾಡಲಾಗುತ್ತಿದೆ.

ಪರಿಷೆಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಶಾಸಕ ಮುನಿರತ್ನ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡ ಅನೂಪ್ ಅಯ್ಯಂಗಾರ್ ಇದ್ದರು.

ಮರಗಳ ಕ್ಯೂಆರ್ ಕೋಡ್: 'ಸಂಪಿಗೆ ರಸ್ತೆಯ ಗತ ವೈಭವವನ್ನು ಮರು ಸ್ಥಾಪಿಸಲು ಸಂಪಿಗೆ ರಸ್ತೆಯಲ್ಲಿ ಈ ಬಾರಿ 50ಕ್ಕೂ ಅಧಿಕ ಸಂಪಿಗೆ ಗಿಡಗಳನ್ನು ನೆಡಲಾಗಿದೆ. ಕಾಡುಮಲ್ಲೇಶ್ವರ ಗೆಳೆಯರ ಬಳಗದಿಂದ ನೆಡಲಾಗಿರುವ ಸಸಿಗಳನ್ನು ಸಂರಕ್ಷಣೆಯ ಮಾಡಲು ಪ್ರತಿಯೊಂದು ಗಿಡಕ್ಕೆ ಕ್ಯೂಆರ್ ಕೋಡ್ ಹಾಕಿ ಮಾಹಿತಿ ನೀಡುವ ವ್ಯವಸ್ಥೆ ಮಾಡಲಾಗುವುದು' ಎಂದು ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ ಹೇಳಿದರು.

ನಗರದಲ್ಲಿ ಇಂದು

3ನೇ ವಿಶ್ವ ಚೇತನ ಕನ್ನಡ ಕಲೆ, ಸಾಹಿತ್ಯ, ಸಾಂಸ್ಕೃತಿ ಸಮ್ಮೇಳನ, ಕರ್ನಾಟಕ ರಾಜ್ಯೋತ್ಸವ: ಸಮ್ಮೇಳನಾಧ್ಯಕ್ಷೆ: ವಿಜಯಲಕ್ಷ್ಮಿ ಸತ್ಯಮೂರ್ತಿ, ಉದ್ಘಾಟನೆ: ಕೋ.ಲ. ರಂಗನಾಥರಾವ್, ಅಧ್ಯಕ್ಷತೆ: ಭಾಗ್ಯಲಕ್ಷ್ಮಿ ಮಗ್ಗೆ, ಪ್ರಶಸ್ತಿ ಪ್ರದಾನ: ಕಾಕೋಳು ಶೈಲೇಶ್, ಆಯೋಜನೆ: ವಿಶ್ವ ಚೇತನ ಬಳಗ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 8.45

ವಾರ್ಷಿಕೋತ್ಸವ, ಸಂಗೀತ ಕಾರ್ಯಕ್ರಮ: ಉದ್ಘಾಟನೆ: ಶೈಲಜಾ ವಿಜಯ್, ಜಯಲಕ್ಷ್ಮಿ ಆನಂದ್, ಶಿವಾನಂದ ಹೇರೂರ್, ಜಯವಂತ್ ಪ್ರಭು, ಆಯೋಜನೆ: ಗಾನಯೋಗಿ ಮ್ಯೂಸಿಕ್ ಅಕಾಡೆಮಿ, ಸ್ಥಳ: ಜ್ಞಾನಸೌಧ, ಕಲ್ಯಾಣನಗರ, ಮೂಡಲಪಾಳ್ಯ, ಬೆಳಿಗ್ಗೆ 9

ಭಕ್ತಿ ಭಾವಾನಂದ ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9ರಿಂದ

ಪಾರ್ವತಮ್ಮ ಅವರಿಗೆ ಗೀತ ನಮನ: ಉದ್ಘಾಟನೆ: ಕಿಕ್ಕೇರಿ ಕೃಷ್ಣಮೂರ್ತಿ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಅತಿಥಿಗಳು: ಕೃಷ್ಣಪ್ಪ, ವಿ. ಪುಂಡರೀಕ ಮೂರ್ತಿ, ವಸಂತಕುಮಾರ್ ಎಚ್.ಎನ್., ಉಪಸ್ಥಿತಿ: ಕೆ. ಉಮೇಶ್, ವೀರಭದ್ರಪ್ಪ, ಆಯೋಜನೆ: ಉಪಾದ್ರಿ ಕುಟುಂಬವರ್ಗ, ಸ್ಥಳ: ರಾಗ ಆಡಿಟೋರಿಯಂ, ಮುದ್ದಿನಪಾಳ್ಯ ಸರ್ಕಲ್, ಬೆಳಿಗ್ಗೆ 9

ಸ್ವರ ಸಂಭ್ರಮ: ಹಿಂದೂಸ್ತಾನಿ ಗಾಯನ: ಸಮೀರ ಕುಲಕರ್ಣಿ, ಕಮಲಾ ಶಂಕರ, ರವೀಂದ್ರ ಗುರುರಾಜ ಕಾಟೋಟಿ, ತಬಲಾ: ಸುಮಿತ ನಾಯಿಕ, ಯೋಗೀಶ ಭಟ್, ಹಾರ್ಮೋನಿಯಂ: ಮಧುಸೂದನ್ ಭಟ್, ಆಯೋಜನೆ: ಬಿಜಾಪುರೆ ಹಾರ್ಮೋನಿಯಂ ಫೌಂಡೇಷನ್, ಮೇ. ಕಾಮತ್ ಆ್ಯಂಡ್ ಕಾಮತ್, ಸ್ಥಳ: ಸಿ. ಅಶ್ವತ್ಥ ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 9.30

ಕರ್ನಾಟಕ ರಾಜ್ಯೋತ್ಸವ, ವಾರ್ಷಿಕೋತ್ಸವ: ರಕ್ತದಾನ ಶಿಬಿರ ಬೆಳಿಗ್ಗೆ 9.30ಕ್ಕೆ, ಉದ್ಘಾಟನೆ: ಎಸ್. ಟಿ. ಸೋಮಶೇಖರ್, ಅಧ್ಯಕ್ಷತೆ: ಎನ್. ಕದರಪ್ಪ, ಅತಿಥಿಗಳು: ಅಶೋಕ್ ಛಲವಾದಿ, ಲಕ್ಷ್ಮೀನಾರಾಯ ಎ.ವಿ., ಆಯೋಜನೆ: ವಳಗೆರೆಹಳ್ಳಿ ನಿವಾಸಿಗಳ ಒಕ್ಕೂಟ, ಸ್ಥಳ: ಪೂನಂ ಮಂದಾರ ಅಪಾರ್ಟ್‌ಮೆಂಟ್ ವರಳಗೆರೆಹಳ್ಳಿ, ಕೆಂಗೇರಿ ಉಪನಗರ, ಬೆಳಿಗ್ಗೆ 9.30

ಕೆ.ಎ. ದಯಾನಂದ ಅವರ 'ಹಾದಿಗಲ್ಲು' 12ನೇ ಮುದ್ರಣದ ಅನಾವರಣ, ಕಲಾವಿದರ ಕುಂಚದಲ್ಲಿ 'ಹಾದಿಗಲ್ಲು': ಉದ್ಘಾಟನೆ: ಎಂ.ಎಸ್. ಮೂರ್ತಿ, ಅಧ್ಯಕ್ಷತೆ: ಕೆ.ಕೆ. ಮಕಾಳಿ, ಉದ್ಘಾಟನೆ: ಟಿ. ಯಲ್ಲಪ್ಪ, ಅಧ್ಯಕ್ಷತೆ: ಸುಬ್ಬು ಹೊಲೆಯಾರ್, ಅತಿಥಿಗಳು: ವೀರಶೆಟ್ಟಿ, ಬಸವರಾಜ ಸಬರದ, ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಸತ್ಯಮಂಗಲ ಮಹಾದೇವ, ಮಹೇಶ್ ಚಿಕ್ಕಲೂರು, ಗೊರೂರು ಪಂಕಜ, ಮಧು ಅಕ್ಷರಿ, ರವಿ ದಳವಾಯಿ, ಪದ ದೇವರಾಜ್, ಆಯೋಜನೆ: ಪದ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಸರ್ವಸದಸ್ಯರ ಸಭೆ: ಉದ್ಘಾಟನೆ: ವಿ. ಗೋಪಾಲಗೌಡ, ಡಾ.ಎಂ.ಸಿ. ಸುಧಾಕರ್, ಸನ್ಮಾನಿತರು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಂ. ಕೃಷ್ಣಪ್ಪ, ಅತಿಥಿಗಳು: ಹಸನ್ ಮೋಹಿದ್ದೀನ್, ವಿವೇಕ ಸುಬ್ಬಾರೆಡ್ಡಿ, ಆಯೋಜನೆ: ಕರ್ನಾಟಕ ರಾಜ್ಯ ಬೆರಳಚ್ಚು, ಶೀಘ್ರಲಿಪಿ ಮತ್ತು ಗಣಕಯಂತ್ರ ವಿದ್ಯಾಶಾಲೆಗಳ ಸಂಘ, ಸ್ಥಳ: ಈಶ್ವರ ಸೇವಾ ಮಂಡಳಿ, ಮಲ್ಲೇಶ್ವರ, ಬೆಳಿಗ್ಗೆ 10

ಜಾನಪದ ಸಂಭ್ರಮೋತ್ಸವ: ಉದ್ಘಾಟನೆ: ಚಂದ್ರಶೇಖರ ಕಂಬಾರ, ರಿಜ್ವಾನ್ ಅರ್ಷದ್, ಅಧ್ಯಕ್ಷತೆ: ಜ್ಯೋತಿ ಪ್ರಕಾಶ ಮಿರ್ಜಿ, ಅತಿಥಿಗಳು: ಸುಧಾಕರನ್ ರಾಮಮತಳಿ, ಕೆ. ಧರಣಿದೇವಿ, ದಯಾನಂದ, ಬಾನಂದೂರು ಕೆಂಪಯ್ಯ, ಬಿ.ಆರ್. ಪೊಲೀಸಪಾಟೀಲ, ಆಯೋಜನೆ: ಕರ್ನಾಟಕ ಸಂರಕ್ಷಣಾ ಸಂಘ, ಸ್ಥಳ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿಭವನ, ಬೆಳಿಗ್ಗೆ 10

ಮಲ್ಲೇಪುರಂ ಜಿ. ವೆಂಕಟೇಶ ಅವರ 'ದಿಟದ ದೀವಟಿಗೆ' ಆತ್ಮಕಥನ ಗ್ರಂಥ ಬಿಡುಗಡೆ, ಗಣ್ಯರಿಗೆ ಸನ್ಮಾನ: ಉದ್ಘಾಟನೆ: ಸಿ. ಸೋಮಶೇಖರ, ಅಧ್ಯಕ್ಷತೆ: ಕಮಲಾ ಹಂಪನಾ, ಗ್ರಂಥ ಬಿಡುಗಡೆ: ಶ್ರೀನಿವಾಸ ವರಖೇಡಿ, ಅತಿಥಿ: ಡಿ.ಕೆ. ಕಿರಣ್ ಕುಮಾರ್, ಸನ್ಮಾನ: ವೂಡೇ ಪಿ. ಕೃಷ್ಣ, ಸನ್ಮಾನಿತರು: ಡಿ.ಎಸ್. ವೀರಯ್ಯ, ಎ.ವಿ. ಪ್ರಸನ್ನ, ಕುಂ. ವೀರಭದ್ರಪ್ಪ, ಬೈರಮಂಗಲ ರಾಮೇಗೌಡ, ಜಯಲಕ್ಷ್ಮಮ್ಮ, ಕೋ.ರಂ. ಬಸವರಾಜು, ಬಿ.ಆರ್. ಅಶೋಕ್ ಕುಮಾರ್, ದೇವರಾಜಯ್ಯ, ನಿತಿನ್ ಶಾ, ಪ್ರಕಾಶ ಕಂಬತ್ತಹಳ್ಳಿ, ಪಿ.ಆರ್. ಪಾಗೋಜಿ, ಸ್ವ್ಯಾನ್ ಕೃಷ್ಣಮೂರ್ತಿ ಎಂ., ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಅಂಕಿತ ಪುಸ್ತಕ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30



ದಿವ್ಯಶ್ರೀ ಎಸ್. ವಟಿ, ನೃತ್ಯ ಯು.ಬಿ.

'ಕೃಷ್ಣಾರ್ಪಣಂ' ತಾಯಿ ಮಗಳ ನೃತ್ಯ ಪ್ರದರ್ಶನ: ಪ್ರಸ್ತುತಿ: ದಿವ್ಯಶ್ರೀ ಎಸ್. ವಟಿ, ನೃತ್ಯ ಯು.ಬಿ., ಅತಿಥಿಗಳು: ಉಷಾ ದಾತರ್, ಸುಶೀಲಾ ಸಂತೋಷ್, ಆಯೋಜನೆ: ನೃತ್ಯೋದಯ ಅಕಾಡೆಮಿ, ಸ್ಥಳ: ಪುಟ್ಟಣಶೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

ವಿಶ್ವ ಅಂಗವಿಕಲರ ದಿನಾಚರಣೆ–2023: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಉಪಸ್ಥಿತಿ: ಲಕ್ಷ್ಮಿ ಹೆಬ್ಬಾಳ್ಕರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಳಿಗ್ಗೆ 10.30

ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ, ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಅವರಿಗೆ ಗುರುವಂದನೆ: ಅತಿಥಿಗಳು: ಮಂಕಾಳ ವೈದ್ಯ, ಮಧು ಬಂಗಾರಪ್ಪ, ಬೇಳೂರು ಗೋಪಾಲಕೃಷ್ಣ, ಕೆ. ಗೋಪಾಲಯ್ಯ, ಹರೀಶ ಪೂಂಜ, ಸುನಿಲ್ ಕುಮಾರ್, ಭೀಮಣ್ಣ ನಾಯ್ಕ್, ಎಂ. ತಿಮ್ಮೇಗೌಡ, ಜೆ.ಪಿ. ಸುಧಾಕರ್, ವೇದಕುಮಾರ್, ಸ್ಥಳ: ಡಾ. ರಾಜ್‌ಕುಮಾರ್ ಸಭಾಂಗಣ, ಗೆಳೆಯರ ಬಳಗ, ಮಹಾಲಕ್ಷ್ಮಿ ಬಡಾವಣೆ, ಬೆಳಿಗ್ಗೆ 11

'ಮೃಣಾಲ್ ಸೇನ್' ಅವರ ಶತಮಾನೋತ್ಸವ ಅಂಗವಾಗಿ ಮಾಸಿಕ ವೆಬಿನಾರ್ ಸರಣಿ 'ಭುವನ್ ಶೋಂ': ಉಪನ್ಯಾಸ: ಸುಜಯ್ ಬಿ.ಎಂ., ನಿರ್ವಹಣೆ: ಕೆ. ಫಣಿರಾಜ್, ಆಯೋಜನೆ: ಸಮುದಾಯ ಕರ್ನಾಟಕ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

'ಮಲ್ಲಿಗೆ ತೋಟದಲ್ಲಿ ಮರ್ಡರ್' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ದೆ ನಟನೆ, ಸ್ಥಳ: ಜಾಗೃತಿ ಥಿಯೇಟರ್, ವೈಟ್‌ಫೀಲ್ಡ್, ಮಧ್ಯಾಹ್ನ 3.30

'ಕರಾವಳಿ ರತ್ನ' ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ: ಉದ್ಘಾಟನೆ: ನಿರ್ಮಲಾ ಸಿ. ಯಲಿಗಾರ್, ಪ್ರಶಸ್ತಿ ಪ್ರದಾನ: ಆರ್. ಉಪೇಂದ್ರ ಶೆಟ್ಟಿ, ಕೆ. ಯಜ್ಞನಾರಾಯಣ ಕಮ್ಮಾಜೆ, ಗೌತಮ್ ಎಚ್.ವಿ., 'ಕರಾವಳಿ ರತ್ನ ವಿಶೇಷ' ಪ್ರಶಸ್ತಿ: ಗಣೇಶ ಉಡುಪ, ಸಭಾಧ್ಯಕ್ಷ: ಬಾ. ರಾಮಚಂದ್ರ ಉಪಾಧ್ಯ, ಆಯೋಜನೆ: ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ಹೋಟೆಲ್ ಅಜಂತಾ, ರೋಹಿಣಿ ಸಭಾಂಗಣ, ಎಂ.ಜಿ. ರಸ್ತೆ, ಸಂಜೆ 4

'ಒಲವೆ ಜೀವನ ಸಾಕ್ಷಾತ್ಕಾರ' ಕರೋಕೆ ಗಾಯನ: ಎಚ್.ಕೆ. ರಘು, ರವಿರಾಜ, ಅಚ್ಚುತ ಸಂಕೇತಿ ಸಂಪದ, ಶೈಲಜಾ ವಿ., ಸಂಗೀತ ಸುಧೀಂದ್ರ, ಭಾರತಿ ಸಿಂಗ್ರಿ, ಆಯೋಜನೆ: ವಿಜಯಚಂದ್ರಿಕಾ ಸಂಗೀತ್ ಚಂದನ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4



ನಗರದ ಎಡಿಎ ರಂಗಮಂದಿರದಲ್ಲಿ ಭರತ ದ್ಯುತಿ ಕಲಾ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಸ್ಕೃತಿ ಬಾಣಾವರ ಅವರು ಭರತನಾಟ್ಯ ರಂಗಪ್ರವೇಶ ಮಾಡಿದರು

ಟಿ–20 ಕ್ರಿಕೆಟ್: ಹೆಚ್ಚುವರಿ ಬಸ್ ವ್ಯವಸ್ಥೆ, ಮೆಟ್ರೊ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಡಿ.3ರಂದು ನಡೆಯಲಿರುವ ಹೊನಲು ಬೆಳಕಿನ ಟಿ–20 ಕ್ರಿಕೆಟ್ ಪಂದ್ಯ ವೀಕ್ಷಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಬಿಎಂಟಿಸಿ ಹೆಚ್ಚುವರಿ ಬಸ್‌ಗಳನ್ನು ಕಲ್ಪಿಸಿದೆ.

ಕ್ರಿಕೆಟ್ ಮುಕ್ತಾಯಗೊಳ್ಳುವ ಸಮಯದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಿಂದ ಬಸ್‌ಗಳು ಹೊರಡಲಿವೆ.

ಎಚ್‌ಎಎಲ್ ರಸ್ತೆ ಮೂಲಕ ಕಾಡುಗೋಡಿ ಬಸ್‌ನಿಲ್ದಾಣಕ್ಕೆ, ಹೂಡಿ ರಸ್ತೆ ಮೂಲಕ ಕಾಡುಗೋಡಿಗೆ, ಅಗರ ದೊಮ್ಮಸಂದ್ರ ರಸ್ತೆ ಮೂಲಕ ಸರ್ಜಾಪುರಕ್ಕೆ, ಹೊಸೂರು ರಸ್ತೆ ಮೂಲಕ ಎಲೆಕ್ಟ್ರಾನಿಕ್ ಸಿಟಿ, ಜಯದೇವ ಆಸ್ಪತ್ರೆ ರಸ್ತೆ ಮೂಲಕ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್, ಎಂಸಿಟಿಸಿ–ನಾಯಂಡಹಳ್ಳಿ ರಸ್ತೆ ಮೂಲಕ ಕೆಂಗೇರಿ ಕೆಎಚ್‌ಬಿ ಕ್ವಾರ್ಟರ್ಸ್, ಮಾಗಡಿ ರಸ್ತೆ ಮೂಲಕ ಜನಪ್ರಿಯ ಟೌನ್‌ಶಿಪ್, ಯಶವಂತಪುರ ಮೂಲಕ ನೆಲಮಂಗಲ, ಹೆಬ್ಬಾಳ ಮೂಲಕ ಯಲಹಂಕ 5ನೇ ಹಂತ, ನಾಗವಾರ–ಟ್ಯಾನರಿ ರಸ್ತೆ ಮೂಲಕ ಆರ್‌ಕೆ ಹೆಗಡೆ ನಗರ– ಯಲಹಂಕ, ಹೆಣ್ಣೂರು ರಸ್ತೆ ಮೂಲಕ ಬಾಗಲೂರು ಹಾಗೂ ಟಿನ್ ಫ್ಯಾಕ್ಟರಿ ರಸ್ತೆ ಮೂಲಕ ಹೊಸಕೋಟೆಗೆ ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ರೈಲು ಅವಧಿ ವಿಸ್ತರಣೆ: ಟಿ–20 ಕ್ರಿಕೆಟ್ ವೀಕ್ಷಕರ ಪ್ರಯಾಣಕ್ಕೆ ಅನುಕೂಲ ಮಾಡಲು ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿರುವ ನಾಲ್ಕು ಟರ್ಮಿನಲ್ ಮೆಟ್ರೊ ನಿಲ್ದಾಣಗಳಿಂದ ಹೊರಡುವ ರೈಲು ಸಂಚಾರದ ಅವಧಿಯನ್ನು ಡಿ.3ರಂದು ರಾತ್ರಿ 11.45ರವರೆಗೆ ವಿಸ್ತರಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ಕ್ರಿಕೆಟ್ ನೋಡಿ ವಾಪಸ್ಸಾಗುವಾಗ ಟಿಕೆಟ್ ಖರೀದಿಸಲು ನೂಕುನುಗ್ಗಲು ಉಂಟಾಗುವುದನ್ನು ತಪ್ಪಿಸಲು ಮೊದಲೇ ಪೇಪರ್ ಟಿಕೆಟ್ ಖರೀದಿ ಮಾಡಲು ಅವಕಾಶ ನೀಡಲಾಗಿದೆ. ಡಿ.3ರ ಮಧ್ಯಾಹ್ನ 2ರಿಂದಲೇ ಪೇಪರ್ ಟಿಕೆಟ್ ಮಾರಾಟಕ್ಕೆ ಲಭ್ಯವಿದೆ. ಈ ಪೇಪರ್ ಟಿಕೆಟ್‌ಗಳು ರಾತ್ರಿ 8ರಿಂದ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣ ಮತ್ತು ಎಂ.ಜಿ. ರೋಡ್ ಮೆಟ್ರೊ ನಿಲ್ದಾಣದಿಂದ ಇತರ ಕಡೆ ಸಂಚಾರಕ್ಕೆ ಬಳಸಬಹುದು.

ಪೇಪರ್ ಟಿಕೆಟ್ ದರ ₹ 50 ಆಗಿದೆ. ಕ್ಯೂಆರ್ ಕೋಡ್ ಟಿಕೆಟ್‌ಗಳು ಸಾಮಾನ್ಯ ದರದ ಶೇ 5 ರಿಯಾಯಿತಿಯೊಂದಿಗೆ ಪಂದ್ಯದ ದಿನ ಖರೀದಿಸಿದರೆ ಇಡೀ ದಿನಕ್ಕೆ ಮಾನ್ಯವಾಗಲಿದೆ. ವಾಟ್ಸ್‌ಆ್ಯಪ್, ನಮ್ಮ ಮೆಟ್ರೊ ಆ್ಯಪ್, ಪೇಟಿಎಂ ಆ್ಯಪ್‌ಗಳಲ್ಲಿ ಕ್ಯೂಆರ್ ಟಿಕೆಟ್ ಖರೀದಿಸಬಹುದು. ಸ್ಮಾರ್ಟ್‌ಕಾರ್ಡ್, ಎನ್‌ಸಿಎಂಸಿ ಕಾರ್ಡ್‌ಗಳನ್ನು ಎಂದಿನಂತೆ ಬಳಸಬಹುದು ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕರ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಶಬರಿಮಲೆಗೆ ಕೆಎಸ್‌ಆರ್‌ಟಿಸಿ ಬಸ್ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಬರಿಮಲೆಗೆ ತೆರಳುವ ಭಕ್ತರಿಗೆ ಅನುಕೂಲ ಕಲ್ಪಿಸಲು ಕೆಎಸ್‌ಆರ್‌ಟಿಸಿ ವಿಶೇಷ ಬಸ್ ಸಂಚಾರ ಆರಂಭಿಸಿದೆ. 2024ರ ಜನವರಿ 15ರವರೆಗೆ ವಿಶೇಷ ಬಸ್‌ಗಳು ಸಂಚಾರ ನಡೆಸಲಿವೆ.

ವೊಲ್ವೊ ಬಸ್ ಪ್ರತಿದಿನ ಮಧ್ಯಾಹ್ನ 1.50ಕ್ಕೆ ಶಾಂತಿನಗರ ಬಸ್ ನಿಲ್ದಾಣದಿಂದ ಹೊರಡಲಿದೆ. ಮರುದಿನ ಬೆಳಿಗ್ಗೆ 6.45ಕ್ಕೆ ನೀಲಕ್ಕಲ್‌ಗೆ (ಪಂಪಾ-ಶಬರಿಮಲೈ) ತಲುಪಲಿದೆ. ಸಂಜೆ 6ಕ್ಕೆ ನೀಲಕ್ಕಲ್‌ನಿಂದ ಹೊರಟು ಮರುದಿನ ಬೆಳಿಗ್ಗೆ 10ಕ್ಕೆ ಶಾಂತಿನಗರ ಬಸ್‌ನಿಲ್ದಾಣ ತಲುಪಲಿದೆ. ವೊಲ್ವೊ ಬಸ್ ಪ್ರಯಾಣ ದರ ₹ 1,600 ಆಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

‘ಕಲೆ, ಸಂಸ್ಕೃತಿಯ ಪ್ರತ್ಯೇಕ ಪಠ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳಿಗೆ ಕಲೆ ಮತ್ತು ಸ್ಥಳೀಯ ಸಂಸ್ಕೃತಿ ಒಳಗೊಂಡ ಪ್ರತ್ಯೇಕ ಪಠ್ಯ ಅಳವಡಿಸಲು ಚಿಂತನೆ ನಡೆದಿದೆ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ಹೇಳಿದರು.

ಶನಿವಾರ ಹಮ್ಮಿಕೊಂಡಿದ್ದ ಭಾರತ್ ಸ್ಕೌಟ್ ಮತ್ತು ಗೈಡ್ಸ್‌ನ 105ನೇ ರಾಜ್ಯ ಪರಿಷತ್ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

‘ಮಕ್ಕಳಿಗೆ ನಮ್ಮ ಮೂಲ ಕಲೆ, ಸಂಸ್ಕೃತಿಯ ಅರಿವು ಮೂಡಿಸುವುದರಿಂದ ಮುಂದಿನ ತಲೆಮಾರಿಗೂ ಅವುಗಳನ್ನು ಉಳಿಸಲು ಸಾಧ್ಯ’ ಎಂದರು.

ಶಿಕ್ಷಣ ಕಲಿಕಾ ವಿಷಯಗಳಿಗೆ ಸೀಮಿತಗೊಳ್ಳದೇ ಕ್ರೀಡೆ, ವ್ಯಕ್ತಿತ್ವ ವಿಕಸನ, ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಪಠ್ಯ ವಿಷಯಗಳನ್ನು ಮಕ್ಕಳಿಗೆ ಪರಿಣಾಮಕಾರಿಯಾಗಿ ಬೋಧಿಸಲು ಅನುಕೂಲವಾಗುವವಂತೆ ಸಮಾಲೋಚನೆ ನಡೆಯುತ್ತಿದೆ ಎಂದು ಹೇಳಿದರು.

ಅಂಗನವಾಡಿ ಸೇರಿದಂತೆ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಿಸಲು ಕ್ರಿಯಾತ್ಮಕ ಕಾರ್ಯ ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದರು.

ಹುತಾತ್ಮ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರ ಸ್ಮಾರಕ ನಿರ್ಮಿಸಲು ಇಲಾಖೆಯಿಂದ ಎಲ್ಲಾ ಸಹಾಯ ಮಾಡಲಾಗುವುದು. ಸ್ಕೌಟ್ ಮತ್ತು ಗೈಡ್ಸ್ ಅನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಜಾರಿಗೆ ತರಲು ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಭಾರತ್ ಸ್ಕೌಟ್ ಮತ್ತು ಗೈಡ್ಸ್ ಕರ್ನಾಟಕದ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ಉಪಾಧ್ಯಕ್ಷ ಕೊಂಡಜ್ಜಿ ಷಣ್ಮುಖಪ್ಪ, ಆಯುಕ್ತ ಎಂ.ಎ. ಖಾಲಿದ್, ಆಯುಕ್ತೆ ಗೀತಾ ನಟರಾಜ್, ತರಬೇತಿ ಆಯುಕ್ತೆ ಕೆ.ವಿ.ಶಾಮಲಾ, ನಂಜುಂಡಪ್ಪ ಉಪಸ್ಥಿತರಿದ್ದರು.

ನಿಧನ ವಾರ್ತೆ

ಮುನ್ನುರಾವ್



ಬೆಂಗಳೂರು: ಕಮ್ಮನಹಳ್ಳಿಯ ನಿವಾಸಿ ಮುನ್ನುರಾವ್ (54) ಶನಿವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಕಲ್ಲಪಲ್ಲಿ ರುದ್ರಭೂಮಿಯಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ವಾಣಿ ವಿಲಾಸ ಆಸ್ಪತ್ರೆಯಲ್ಲಿ ಜಿರಳೆ ಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿ ವಿಲಾಸ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹಸುಗೂಸಿಗೆ ಜಿರಳೆ ಕಚ್ಚಿದೆ ಎಂದು ಪೋಷಕರು ಆರೋಪಿಸಿದ್ದಾರೆ. ಜಿರಳೆಯಲ್ಲ, ರ‍್ಯಾಷಸ್ (ಅಲರ್ಜಿ ಗುಳ್ಳೆ) ಬಿದ್ದಿದೆ ಎಂದು ಆಸ್ಪತ್ರೆಯ ಅಧೀಕ್ಷಕರು ಸ್ಪಷ್ಟನೆ ನೀಡಿದ್ದಾರೆ. ಆಸ್ಪತ್ರೆಯಲ್ಲಿ ಜಿರಳೆಗಳ ಓಡಾಟ ಹಸುಗೂಸುಗಳ ಹೆತ್ತವರನ್ನು ಕಂಗೆಡಿಸಿದೆ.

ನಾಗರಬಾವಿ ನಿವಾಸಿ ಆಶಾರಾಣಿ ಗುರುವಾರ ಗಂಡು ಮಗುವಿಗೆ ಜನ್ಮ ನೀಡಿದ್ದರು. ತಾಯಿ - ಮಗು ಇಬ್ಬರು ಆರೋಗ್ಯವಾಗಿದ್ದರಿಂದ ವಾರ್ಡ್‌ಗೆ ಸ್ಥಳಾಂತರಿಸಲಾಗಿತ್ತು. ವಾರ್ಡ್‌ನಲ್ಲಿ ಜಿರಳೆಗಳ ಹಾವಳಿ ಹೆಚ್ಚಿದ್ದು, ತಾಯಿ, ಮಗುವಿನ ಮೇಲೆ ಹರಿದಾಡಿವೆ. ಮಗುವಿನ ಮೇಲೆ ಕೆಂಪು ಗುಳ್ಳೆಗಳು ಕಾಣಿಸಿಕೊಂಡಿವೆ. ಸಮಸ್ಯೆಯನ್ನು ಆಸ್ಪತ್ರೆಯ ಸಿಬ್ಬಂದಿಗೆ ತಿಳಿಸಿದರೂ ಬೆಡ್, ವಾರ್ಡ್ ಸ್ವಚ್ಛಗೊಳಿಸಿಲ್ಲ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಅಲರ್ಜಿ: ‘ಮಗುವಿಗೆ ಜಿರಳೆ ಕಚ್ಚಿಲ್ಲ. ಅಲರ್ಜಿ ಕಾಣಿಸಿಕೊಂಡಿದೆ. ಮಕ್ಕಳ ಚರ್ಮ ಸೂಕ್ಷ್ಮವಾಗಿರುವುದರಿಂದ ಅಲರ್ಜಿ ಸಾಮಾನ್ಯ. ರೋಗಿಗಳು ಮತ್ತು ಅವರ ಕುಟುಂಬದವರು ಹೊರಗಿನಿಂದ ಊಟ ತರುವುದರಿಂದ ಜಿರಳೆಗಳು ಬಂದಿವೆ. ಆಸ್ಪತ್ರೆಯ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ಸ್ಪಷ್ಟನೆ ನೀಡಿದ್ದಾರೆ.

‘ವಿವರ ಪಡೆಯುತ್ತೇನೆ’

ವಾಣಿವಿಲಾಸ ಆಸ್ಪತ್ರೆ ವೈದ್ಯಕೀಯ ಶಿಕ್ಷಣ ಇಲಾಖೆಗೆ ಸೇರಿದೆ. ಮಗುವಿಗೆ ಜಿರಳೆ ಕಚ್ಚಿದ ಪ್ರಕರಣದ ಕುರಿತು ನಾನೂ ವಿಚಾರ ಮಾಡಿ ವಿವರ ಪಡೆಯುತ್ತೇನೆ. ಆಸ್ಪತ್ರೆ ಹಾಸಿಗೆ ಸೇರಿ ಎಲ್ಲೆಡೆ ಸ್ವಚ್ಛತೆ ಕಾಪಾಡಬೇಕು. ಲೋಪವಾಗಿದ್ದರೆ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಕ್ರಮ ಕೈಗೊಳ್ಳಲಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ವಾಹನ ಡಿಕ್ಕಿ: ವ್ಯಕ್ತಿ ಸಾವು

ದೊಡ್ಡಬಳ್ಳಾಪುರ: ಗೌರಿಬಿದನೂರು ರಾಜ್ಯ ಹೆದ್ದಾರಿಯ ಗೊಲ್ಲಹಳ್ಳಿ ಗ್ರಾಮದ ಬಳಿ ಶನಿವಾರ ವ್ಯಾನ್ ಮತ್ತು ಸರಕು ಸಾಗಣೆ ವಾಹನ ನಡುವೆ ಮುಖಾಮುಖಿ ಡಿಕ್ಕಿಯಾಗಿ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೆಂಗಳೂರಿನ ಬಾಗಲಗುಂಟೆ ನಿವಾಸಿ ಶಿವಕುಮಾರ್ (32) ಮೃತಪಟ್ಟಿದ್ದಾರೆ ಎಂದು ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸರು ತಿಳಿಸಿದ್ದಾರೆ.

'ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ವಿಷಯಗಳು' ಗೋಷ್ಠಿ: ಸಿ. ಬಸವಲಿಂಗಯ್ಯ ಅಭಿಪ್ರಾಯ

'ಸ್ಥಗಿತ ಚಿಂತನೆಯಲ್ಲಿ ಭಾರತ'

● ಆದಿತ್ಯ ಕೆ.ಎ.



ಬೆಂಗಳೂರು ಸಾಹಿತ್ಯೋತ್ಸವದಲ್ಲಿ 'ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ವಿಷಯಗಳು' ಕುರಿತ ಗೋಷ್ಠಿಯಲ್ಲಿ ಸಿ.ಬಸವಲಿಂಗಯ್ಯ ಮಾತನಾಡಿದರು. ಲಕ್ಷ್ಮಣ ಕೆ.ಪಿ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಎಲ್ಲ ಕಥೆಗಳು, ಪುರಾಣಗಳು ಕಲ್ಪಿತವೇ ಆಗಿದ್ದು ದೇಶದಲ್ಲಿ 350 ರೀತಿಯಲ್ಲಿ ರಾಮಾಯಣಗಳಿವೆ. ಇಷ್ಟೊಂದು ಬಗೆಯಲ್ಲಿ ರಾಮಾಯಣಗಳು ಇರುವಾಗ ಯಾವುದು ನೈಜವೆಂದು ನಂಬುವುದು' ಎಂದು ರಂಗಕರ್ಮಿ ಸಿ. ಬಸವಲಿಂಗಯ್ಯ ಅವರು ಪ್ರಶ್ನೆಯನ್ನು ಎತ್ತಿದರು.

'ಬೆಂಗಳೂರು ಸಾಹಿತ್ಯೋತ್ಸವ'ದಲ್ಲಿ 'ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ವಿಷಯಗಳು' ಕುರಿತ ಗೋಷ್ಠಿಯಲ್ಲಿ ಈ ವಿಷಯ ಪ್ರಸ್ತಾಪಿಸಿದರು.

'ನನ್ನ ಪ್ರಕಾರ ರಾಮನ ಕತೆ ದ್ರಾವಿಡ ನಾಡಿಗೆ ವಸಾಹತುಶಾಹಿ ಆಕ್ರಮಣವಾಗಿದೆ. ಅಲ್ಲಿ ಸೀತೆಯ ಕಥನವಿದೆ. ಆಕೆಗೆ ಬಂಡಾಯವೇಳಲು ಸಾಧ್ಯವಿರಲಿಲ್ಲ' ಎಂದು ಚರ್ಚೆ ಆರಂಭಿಸಿದ ಅವರು, ಕುವೆಂಪು ಅವರು ಶ್ರೀರಾಮಾಯಣದರ್ಶನಂನಲ್ಲಿ ಬರೆದ ವಿಷಯಗಳನ್ನು ಪ್ರಸ್ತಾಪಿಸಿದರು.

ಬೆಂಗಳೂರು ಸಾಹಿತ್ಯೋತ್ಸವ

'ಕುವೆಂಪು ಅವರು ತಮ್ಮ ಕೃತಿಯಲ್ಲಿ ಅಗ್ನಿಪರೀಕ್ಷೆಗೆ ಸೀತೆಯ ಜೊತೆಗೆ ರಾಮನನ್ನೂ ಒಳಪಡಿಸಿದ್ದಾರೆ. ಅವರ ಸಮಯದಲ್ಲಿ ಆಗ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಗಾಂಧೀತತ್ವವಿದ್ದ ರಾಮಾಯಣದ ಈ ಬದಲಾವಣೆ ಸಾಧ್ಯವಾಯಿತು' ಎಂದು ವಿಶ್ಲೇಷಿಸಿದರು.

'ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ವಿಷಯಗಳನ್ನು ಹೊರಹಾಕಿ ಹೊಸತನಕ್ಕೆ ತೆರೆದುಕೊಳ್ಳದಿದ್ದರೆ ರಂಗಭೂಮಿ ಪರಂಪರೆ ಸ್ಥಗಿತಗೊಳ್ಳುವವೂ ಅಪಾಯವಿದೆ. ಭಾರತ ಸ್ಥಗಿತಗೊಂಡ ಚಿಂತನೆಗಳ ಮೂಲಕ ಕೊಳೆತು ನಾರುತ್ತಿದೆ. ಜನರ ಮನಸ್ಸು ಸ್ಥಗಿತಗೊಂಡಿದೆ. ಚಲನಶೀಲ ಆಗಬೇಕಿದ್ದರೆ ಹೊಸ ಗಾಳಿ, ಬೆಳಕು ಬರಬೇಕಿದೆ. ಗೊರವರ ಪದ್ಯಗಳು, ಜುಂಜಪ್ಪನ ಪದ್ಯಗಳು ಮುಂಚೂಣಿಗೆ ಬಂದರೆ, ಆಡಳಿತಸೂತ್ರ ಹಿಡಿದಿರುವ ಪ್ರಭುತ್ವಗಳನ್ನು ಭಗ್ನಗೊಳಿಸಲು ಸಾಧ್ಯವಿದೆ. ನಮ್ಮ ಸಾಂಸ್ಕೃತಿಕ ಅಸ್ಮಿತೆಯೂ ಉಳಿಯುತ್ತದೆ' ಎಂದು ಎಚ್ಚರಿಸಿದರು.

> **ಎಲ್ಲ ನಾಟಕಗಳಲ್ಲೂ ಜಾತಿಯ ವಿಚಾರ ಪ್ರಸ್ತಾಪವಾಗುತ್ತಿದೆ. ಜಾತಿ ಬದುಕಿನ ಭಾಗವಾಗಿದೆ. ಜಾತಿ ಬದುಕಿನ ಭಾಗ ಆಗದಿದ್ದರೆ, ರಂಗದ ಮೇಲೂ ತರುತ್ತಿರಲಿಲ್ಲ**
> **ಕೆ.ಪಿ.ಲಕ್ಷ್ಮಣ,** ಜಂಗಮ ಕೆನಕ್ಟೀವ್ ಸದಸ್ಯ

'ಹೆಣ್ಣನ್ನು ಹೆಣ್ಣೇ ಕೊಲ್ಲುವ ಸ್ಥಿತಿಗೆ ತಲುಪಿದ್ದೇವೆ. ಇದಕ್ಕೆ ಮಂಡ್ಯದಲ್ಲಿ ನಡೆದ ಹೆಣ್ಣುಭ್ರೂಣ ಹತ್ಯಾ ಪ್ರಕರಣವೇ ಸಾಕ್ಷಿಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದ ಅವರು, 'ಹತ್ಯೆಕೋರರಿಗೆ ತಕ್ಕ ಶಿಕ್ಷೆ ಆಗಬೇಕು' ಎಂದು ಆಗ್ರಹಿಸಿದರು.

'ಯಾವುದನ್ನು ನಾವು ಸಾಮಾಜಿಕ ಸಮಸ್ಯೆಗಳು ಎಂದು ಕರೆಯುತ್ತೇವೆಯೋ ಅದೇ ಹಲವು ಮಂದಿಗೆ ಬದುಕು. ಬದುಕನ್ನು ಕಟ್ಟಿಕೊಟ್ಟಂಥವನ್ನು ಸಾಮಾಜಿಕ ಸಮಸ್ಯೆಗಳು ಎಂದು ಕರೆಯಲು ಸಾಧ್ಯವೇ? ಯಾರ ಬದುಕನ್ನೂ ಯಾರೂ ಅಗೌರವದಿಂದ ನೋಡಬಾರದು' ಎಂದು ಜಂಗಮ ಕನೆಕ್ಟೀವ್‌ನ ಸದಸ್ಯ ಕೆ.ಪಿ. ಲಕ್ಷ್ಮಣ ಹೇಳಿದರು.

'ಲೈಂಗಿಕ ಕಾರ್ಯಕರ್ತೆಯರಿಗೆ ಚಾಕುವಿನಿಂದ ಇರಿದು ಗಾಯಗೊಳಿಸುವ ಘಟನೆಗಳು ನಡೆಯುತ್ತಿವೆ. ನಾವು ಅದನ್ನು ಸಾಮಾಜಿಕ ಸಮಸ್ಯೆ ಎಂದು ಕರೆಯುತ್ತೇವೆ. ಅದೇ ಬದುಕಾಗಿರುವ ಅವರ ದೇಹದ ಮೇಲಾಗಿರುವ ಗಾಯಗಳನ್ನು ಅಳಿಸಿ ಹಾಕಲು ಸಾಧ್ಯವೇ' ಎಂದು ಮಾರ್ಮಿಕವಾಗಿ ನುಡಿದರು.

'ಎಲ್ಲರ ಊರು ಬೆಂಗಳೂರು'

ಹಲವು ಗೋಷ್ಠಿಗಳ ನಡುವೆ 'ನಮ್ಮ ಬೆಂಗಳೂರು' ಗೋಷ್ಠಿ ಗಮನ ಸೆಳೆಯಿತು.

ಸಿಲಿಕಾನ್ ಸಿಟಿ, ಐಟಿ–ಬಿಟಿ ಖ್ಯಾತಿ ನಗರಿಯನ್ನು ಕೊಂಡಾಡಿದರು. ಇತರೆ ನಗರಕ್ಕೆ ಹೋಲಿಸಿದಾಗ ಬೆಂಗಳೂರಿನ ನಾಗರಿಕರಲ್ಲಿ ಸ್ವೀಕಾರ ಮನೋಭಾವ ಹೆಚ್ಚಿದೆ ಎಂದು ಗೋಷ್ಠಿಯಲ್ಲಿದ್ದವರು ಹೊಗಳಿದರು.

ಲೇಖಕಿ ಶೋಭಾ ನಾರಾಯಣ ಮಾತನಾಡಿ, 'ನಾನು ವಿದೇಶದಲ್ಲಿದ್ದೆ. ಬೆಂಗಳೂರಿಗೆ ಬರಲು ಕಾರಣವಾಗಿದ್ದು ಇಲ್ಲಿನ ಸಂಸ್ಕೃತಿ ಹಾಗೂ ವಾತಾವರಣ. ಬೇರೆ ಕಡೆಯಿಂದ ಬಂದವರಿಗೂ ನಮ್ಮೂರು ಎನಿಸಬೇಕು. ಆ ರೀತಿ ವಾತಾವರಣ ಇಲ್ಲಿದೆ. ಎಲ್ಲರನ್ನೂ ಒಳಗೊಳ್ಳುವ ಊರು ಇದು. ಆತ್ಮೀಯತೆಯಿಂದ ಬರ ಮಾಡಿಕೊಳ್ಳುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಒಂದು ಪ್ರದೇಶಕ್ಕೆ ಸೀಮಿತವಾದ ಬುಡಕಟ್ಟು ಹೀರೊಗಳು'

'ದೇಶಕ್ಕೆ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಬುಡಕಟ್ಟು ಸಮುದಾಯದ ನಾಯಕ ಬಿರ್ಸಾ ಮುಂಡಾ ಸೇರಿದಂತೆ ಅನೇಕ ಬುಡಕಟ್ಟು ನಾಯಕರ ಕೊಡಗೆ ಸ್ಮರಣೀಯ' ಎಂಬ ಅಭಿಪ್ರಾಯ ಭಾರತದ ಬುಡಕಟ್ಟು ಹೀರೊಗಳ ಕುರಿತು ನಡೆದ ಗೋಷ್ಠಿಯಲ್ಲಿ ವ್ಯಕ್ತವಾಯಿತು. ದೇಶದ ಸ್ವಾತಂತ್ರ್ಯ ಹೋರಾಟಗಳಲ್ಲಿ ಹೋರಾಡಿದ್ದರೂ ಅವರ ಕುಟುಂಬಗಳಿಗೆ ಸಣ್ಣ ಸೌಲಭ್ಯಗಳೂ ಸಿಕ್ಕಿಲ್ಲ. ಹೀರೊಗಳ ಕುಟುಂಬದ ಸದಸ್ಯರು ನರಳುತ್ತಿದ್ದಾರೆ ಎಂದು ಗೋಷ್ಠಿಯಲ್ಲಿ ಪಾಲ್ಗೊಂಡಿದ್ದವರು ವಿಶ್ಲೇಷಿಸಿದರು.

ಮನುಷ್ಯರ ಪಾಡು ಚಿತ್ತಾಲಕಾವ್ಯದ ಹಾಡು: ವಿಮರ್ಶಕ ರಾಜೇಂದ್ರ ಚೆನ್ನಿ

● ರೂಪಾ ಕೆ.ಎಂ.

ಬೆಂಗಳೂರು: 'ಕನ್ನಡ ಕಾವ್ಯದಲ್ಲಿ ಹೊಸ ಪಾತಳಿಯನ್ನೇ ಸೃಷ್ಟಿಸಿದವರು ಗಂಗಾಧರ ವಿ. ಚಿತ್ತಾಲರು. ಬದುಕಿನ ಘಟನೆಗಳಿಗೆ, ಮೂಲಭೂತ ಪ್ರಶ್ನೆಗಳಿಗೆ ಕಾವ್ಯದ ಮೂಲಕ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದವರು ಚಿತ್ತಾಲರು. ಹಾಗಾಗಿ ಇವರ ಕಾವ್ಯದ ಓದು ಎಂದೆಂದಿಗೂ ಪ್ರಸ್ತುತ' ಎಂದು ವಿಮರ್ಶಕ ಪ್ರೊ. ರಾಜೇಂದ್ರ ಚೆನ್ನಿ ಅಭಿಪ್ರಾಯಪಟ್ಟರು.



ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಗಂಗಾಧರ ವಿ. ಚಿತ್ತಾಲರ ಕಾವ್ಯದ ಕುರಿತು ರಾಜೇಂದ್ರ ಚೆನ್ನಿ ಮಾತನಾಡಿದರು. ಎಸ್‌. ದಿವಾಕರ್ ಇದ್ದಾರೆ

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಶನಿವಾರ ನಡೆದ ಗಂಗಾಧರ ವಿ. ಚಿತ್ತಾಲರ ಜನ್ಮಶತಮಾನೋತ್ಸವದ ಹಿನ್ನೆಲೆಯಲ್ಲಿ ಅವರ ಕಾವ್ಯ–ಕೃತಿಗಳ ಕುರಿತುಚರ್ಚಿಸಿದರು.


ಆದಿ ಮತ್ತು ಅಂತ್ಯದ ಬಗ್ಗೆ ಅರಿವಿಲ್ಲದ ಮನುಷ್ಯನ ಮಧ್ಯಂತರದಲ್ಲಿ ನಡೆಯುವ ಘಟನೆಗಳ ಬಗ್ಗೆಯೇ ಚಿತ್ತಾಲರು ಎತ್ತಿರುವ ಪ್ರಶ್ನೆಗಳು ಬಹಳ ಸಹಜವಾಗಿವೆ. ಅದು ಸ್ವಾನುಭವದಿಂದ ಕೂಡಿವೆ ಎಂದು ವಿಶ್ಲೇಷಿಸಿದರು.

ಒಂದು ಕಡೆ ಮನುಷ್ಯ ಪ್ರಯತ್ನವೇ ಮುಖ್ಯ ಎಂದು ಪ್ರತಿಪಾದಿಸಿದ ಚಿತ್ತಾಲರು ಎಲ್ಲವನ್ನೂ ಮೀರಿದ ವಿಧಿಯ ಬಗ್ಗೆಯೂ ಉಲ್ಲೇಖಿಸಿದ್ದಾರೆ. ಅರ್ಥವಾಗದೇ ಇರುವ, ವಿನಾಕಾರಣವಾಗಿರುವ ನೋವನ್ನು ಹೇಗೆ ಎದುರಿಸಬೇಕು ಎಂಬುದನ್ನು ಕಾವ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ ಎಂದು ಹೇಳಿದರು. ಸಾಮಾಜಿಕ ಎನಿಸುವ ಪದ್ಯಗಳನ್ನೂ ಅವರು ಬರೆದಿದ್ದಾರೆ. ತಮ್ಮ ಹೆಂಡತಿಯ ಕುರಿತ ಪದ್ಯ, ಆಧುನಿಕ ಬ್ಯುರೋಕ್ರಸಿಯನ್ನು ಬಿಂಬಿಸುವ 'ಫೈಲುಗಳು' ಎನ್ನುವ ಪದ್ಯ – ಹೀಗೆ ನಾನಾ ಜೀವಾನುಭವಗಳನ್ನು ಕಾವ್ಯಕ್ಕೆ ಧಾರೆಯೆರೆದರು ಎಂದು ತಿಳಿಸಿದರು.

ಚೆನ್ನಿ ಅವರ ಮಾತಿಗೆ ದನಿಗೂಡಿಸಿದ ಕತೆಗಾರ ಎಸ್‌. ದಿವಾಕರ್, 'ಗಂಗಾಧರ ಚಿತ್ತಾಲರ ಕಾವ್ಯದಲ್ಲಿ ಅಪರೂಪಕ್ಕೆ ವಸ್ತುಪ್ರತಿರೂಪವಿತ್ತು. ಅನುಭವಕ್ಕೆ ತೀರಾ ಬದ್ಧರಾಗಿದ್ದರು. ಅನುಭವವೆಂಬ ವಾಸ್ತವವನ್ನು ಇಟ್ಟುಕೊಂಡು ಕಾವ್ಯ ರಚಿಸಿದರು' ಎಂದು ಹೇಳಿದರು.

ತಮ್ಮ ನೋವನ್ನು ಓದುಗರೂ ಅನುಭವಿಸುವಷ್ಟು ತೀವ್ರವಾಗಿ ಬರೆದರು. ಅವರು ತಮ್ಮ ಕೆಲವು ಕವಿತೆಗಳಲ್ಲಿಯೇ ಬೃಹತ್ ವಿಶ್ವವನ್ನು ತೆರೆದಿಟ್ಟರು. ಅದು ನೋವಿನ ವಿಶ್ವ. ಈ ಬದುಕಿಗೆ ಅರ್ಥವೇನು? ಅದು ಹೇಗೆ ಕೊನೆ ಮುಟ್ಟುತ್ತದೆ. ಮುಟ್ಟಬೇಕೇ? ಎನ್ನುವ ಜಿಜ್ಞಾಸೆಯಲ್ಲಿಯೇ ಪದ್ಯರಚನೆ ಮಾಡಿದರು. ಅವರ ಕಾವ್ಯದ ಜೀವಾಳವೇ ಮನುಷ್ಯನ ಪಾಡು ಮತ್ತು ನೋವು. ಅವುಗಳ ಮೂಲಕವೇ ಜೀವನದರ್ಶನವನ್ನು ಹುಡುಕುತ್ತಿದ್ದರು' ಎಂದು ಬಣ್ಣಿಸಿದರು.

'ಚಿತ್ತಾಲ ಕಾವ್ಯ ಭಾಷೆಯ ಬಗ್ಗೆ ಮಾತನಾಡುವುದಾದರೆ ಅದು ಗ್ರಾಂಥಿಕವಾಗಿದೆ. ಕವನದ ಒಟ್ಟು ಆಶಯಕ್ಕೆ ತಕ್ಕಂತೆ ಲಯವೈವಿಧ್ಯ, ಧ್ವನಿ ವೈವಿಧ್ಯಗಳನ್ನು ತಂದಿದ್ದಾರೆ. ಆದರೆ, ಅವರ ಕವಿತೆಗಳು ವ್ಯಂಗ್ಯಕ್ಕೆ ವಿಮುಖವಾಗಿಯೇ ಇವೆ. ವ್ಯಂಗ್ಯದ ಗೈರುಹಾಜರಿಯೇ ಅವರ ಕಾವ್ಯದ ಅನನ್ಯತೆಯನ್ನು ತೆರೆದಿಡುತ್ತದೆ' ಎಂದು ತಿಳಿಸಿದರು.



ಪುಸ್ತಕ ಖರೀದಿ

ನಗರದ ಅಶೋಕ ಹೋಟೆಲ್‌ನಲ್ಲಿ ಶನಿವಾರ 12ನೇ ಬೆಂಗಳೂರು ಸಾಹಿತ್ಯ ಉತ್ಸವ ಕಾರ್ಯಕ್ರಮದಲ್ಲಿ ಜನರು ಪುಸ್ತಕಗಳನ್ನು ಖರೀದಿಸುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಸಂಬಂಧಗಳು ಬೂಂದಿ, ಪ್ರೀತಿಯೇ ಸಕ್ಕರೆ: ಸುಧಾಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಬಂಧಗಳೆಂಬುದು ಬೂಂದಿ ಇದ್ದ ಹಾಗೆ. ಪ್ರೀತಿಯೆಂಬ ಸಕ್ಕರೆ ಇದ್ದರಷ್ಟೆ ಬೂಂದಿ ಕಾಳಿಗೆ ರುಚಿ. ಹಾಗೆಯೇ ಹೃದಯಗಳ ನಡುವೆ ಪ್ರೀತಿಯೆಂಬುದು ಸೇತುವೆ' ಎಂದು ಲೇಖಕಿ ಸುಧಾಮೂರ್ತಿ ಅಭಿಪ್ರಾಯಪಟ್ಟರು.

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಶನಿವಾರ ತಮ್ಮ ಕೃತಿ 'ಕಾಮನ್ ಯೆಟ್ ಅನ್‌ಕಾಮನ್' ಕುರಿತು ಮಾತನಾಡಿದರು.

'ಈ ಕೃತಿಯಲ್ಲಿ ಒಟ್ಟು 14 ಕತೆಗಳಿವೆ. ಬಂಡಲ್ ಬಿಂದು, ಲಂಚ್‌ಬಾಕ್ಸ್ ನಳಿನಿ, ಅಂಗಡಿ ಮಾಲೀಕ ಜಯಂತ್, ಹೇಮಾ, ಭಾಗೀರಥಿ - ಹೀಗೆ ವಿಶಿಷ್ಟ ಎನಿಸುವ ಪಾತ್ರಗಳಿವೆ. ಇವೆಲ್ಲವೂ ನಾನು ಬದುಕಿದ ಪರಿಸರದಿಂದ ಪ್ರೇರಣೆ ಪಡೆದು ರೂಪಿಸಿದ ಪಾತ್ರಗಳೇ. ಅದರಲ್ಲಿಯೂ ಲಂಚ್‌ಬಾಕ್ಸ್ ನಳಿನಿ ಎಂಬ ಪಾತ್ರ ನನ್ನ ಬಗ್ಗೆಯೇ ಆಗಿದೆ' ಎಂದು ಪಾತ್ರಗಳನ್ನು ವಿವರಿಸಿದರು.

'ನಾನೇನೂ ದೊಡ್ಡ ಪಾಕಪ್ರವೀಣೆಯಲ್ಲ. ಆದರೆ, ಊಟದ ಬಗ್ಗೆ ವಿಶೇಷ ಆಸಕ್ತಿ ಇದೆ. ಮೊದಲಿನಿಂದಲೂ ಗೆಳತಿಯರ, ಬಂಧುಗಳ, ಊರಿನವರ ಮನೆಗಳಿಗೆ ಕರೆದರೆ ಊಟಕ್ಕೆ ಹೋಗುವ ಅಭ್ಯಾಸವಿದೆ. ಆಹ್ವಾನಿಸಿದ ಆಪ್ತರ ಮನೆಯಲ್ಲಿ ಊಟ ಮಾಡುತ್ತ, ಇಷ್ಟದ ಪದಾರ್ಥಗಳನ್ನು ಲಂಚ್‌ಬಾಕ್ಸ್‌ನಲ್ಲಿ ಕಟ್ಟಿಕೊಳ್ಳುತ್ತಿದ್ದೆ. ಹೀಗೆ ರಾಶಿ ಲಂಚ್‌ಬಾಕ್ಸ್ ಸಂಗ್ರಹಗೊಳ್ಳುತ್ತಿತ್ತು. ಇದನ್ನೇ 'ಲಂಚ್‌ಬಾಕ್ಸ್ ನಳಿನ' ಪಾತ್ರವಾಗಿ ಸೃಷ್ಟಿಸಿದ್ದೇನೆ' ಎಂದು ತಿಳಿಸಿದರು.

'ಊಟ ಬೇಕೆಂದರೆ ಜೊಮ್ಯಾಟೊ, ಸ್ವಿಗ್ಗಿಯಲ್ಲಿ ಖರೀದಿಸಬಹುದು. ಬೇಕೆಂದ ಹೋಟೆಲ್‌ನಲ್ಲಿಯೂ ಮಾಡಬಹುದು. ಆದರೆ ದ್ವೀಪಗಳಾಗಿ ಬದುಕುತ್ತಿರುವ ನಮಗೆ ಆಪ್ತರನ್ನು ಮತ್ತೆ ಭೇಟಿಯಾಗಲು 'ಲಂಚ್‌ಬಾಕ್ಸ್' ಎಂಬುದು ಒಂದು ಸಿಹಿ ನೆವವಷ್ಟೆ. ಇಂಥ ಸಣ್ಣಪುಟ್ಟ ವಿಚಾರಗಳೇ ಬದುಕಿನ ಮೌಲ್ಯವನ್ನು ಹೆಚ್ಚಿಸುತ್ತದೆ. ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದುಕೊಂಡು ಬದುಕಿಗೊಂದು ಘನತೆ ಒದಗಿಸಿದವರೆಲ್ಲರೂ ಇಲ್ಲಿ ಪಾತ್ರಗಳಾಗಿದ್ದಾರೆ' ಎಂದು ಹೇಳಿದರು.

'ಬಂಗಾಳಿಗಳಲ್ಲಿ ಬಹುತೇಕರು ಚಂದದ ಹೆಸರು ಇಟ್ಟುಕೊಂಡಿರುತ್ತಾರೆ. ಅದಕ್ಕೆ ವಿರುದ್ಧ ಎನ್ನುವಂತೆ ಕೆಟ್ಟ ಅಡ್ಡಹೆಸರುಗಳನ್ನೂ ಇಟ್ಟುಕೊಂಡಿರುತ್ತಾರೆ. ಉತ್ತರ ಕರ್ನಾಟಕದಲ್ಲಿಯೂ ಹೀಗೆ ಇದೆ. ಪರಿಮಳ ಇದ್ದರೆ ಪರಿ ಎಂದೂ, ಪ್ರಹ್ಲಾದವಿದ್ದರೆ ಪಲ್ಯವೆಂದು ಕರೆಯಲಾಗುತ್ತದೆ' ಎಂದಾಗ ನೆರೆದಿದ್ದವರೆಲ್ಲ ನಗೆಗಡಲಿನಲ್ಲಿ ತೇಲಿದರು.



ಸಾಹಿತ್ಯೋತ್ಸವದಲ್ಲಿ ಸುಧಾಮೂರ್ತಿ ಅವರೊಂದಿಗೆ ಮಕ್ಕಳು ಮಾತನಾಡಿದರು

ಸಂಕ್ಷಿಪ್ತ ಸುದ್ದಿ

ಶ್ರೀರಾಮ್ ಘೋಷಣೆಗೆ ಒತ್ತಡ: ಬಿಎಸ್‌ಪಿ ಖಂಡನೆ

ಬೆಂಗಳೂರು: ಕೊಪ್ಪಳದ ಗಂಗಾವತಿ ನಗರದಲ್ಲಿ ವೃದ್ಧ ಹುಸೇನ್ ಸಾಬ್ ಅವರನ್ನು ಅಡ್ಡಗಟ್ಟಿ, ಶ್ರೀರಾಮ್ ಘೋಷಣೆ ಕೂಗುವಂತೆ ಒತ್ತಡ ಹಾಕಿರುವುದನ್ನು ಬಹುಜನ ಸಮಾಜ ಪಾರ್ಟಿ ಖಂಡಿಸಿದೆ.

'ಹಲ್ಲೆ ನಡೆಸಿದ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಅವರು ಮತ್ತು ಅವರ ಸಂಘಟನೆಯ ವಿರುದ್ಧ ಗೂಂಡಾ ಕಾಯ್ದೆಯಡಿ ಕೇಸು ದಾಖಲಿಸಿ, ರಾಜ್ಯದಿಂದ ಗಡಿ ಪಾರು ಮಾಡಬೇಕು' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಒತ್ತಾಯಿಸಿದ್ದಾರೆ.

'ಸಂತ್ರಸ್ತ ಹುಸೇನ್ ಸಾಬ್ ಅವರಿಗೆ ಪರಿಹಾರ ನೀಡಿ, ಅವರಿಗೆ ಸರ್ಕಾರ ರಕ್ಷಣೆ ನೀಡಬೇಕು. ಬಿಜೆಪಿ ಆಡಳಿತದಲ್ಲಿದ್ದ ಕೋಮುವಾದಿಗಳ ಅಟ್ಟಹಾಸ, ದೌರ್ಜನ್ಯ ಕಾಂಗ್ರೆಸ್ ಆಳ್ವಿಕೆ ಕಾಲದಲ್ಲೂ ಮುಂದುವರೆದಿರುವುದು ಖಂಡನೀಯ' ಎಂದು ಮುನಿಯಪ್ಪ ಹೇಳಿದ್ದಾರೆ.

ಫಿಲಿಪ್ಪಿನ್ಸ್‌ನಲ್ಲಿ ಪ್ರಬಲ ಭೂಕಂಪ: ಸುನಾಮಿ ಭಯವಿಲ್ಲ

ಮನಿಲಾ (ಎಪಿ): ದಕ್ಷಿಣ ಫಿಲಿಪ್ಪಿನ್ಸ್‌ನ ಕರಾವಳಿಯಲ್ಲಿ ಶನಿವಾರ ರಾತ್ರಿ 7.6 ತೀವ್ರತೆಯ ಪ್ರಬಲ ಭೂಕಂಪ ಉಂಟಾಗಿದೆ. ಅಧಿಕಾರಿಗಳು ಸುನಾಮಿ ಎಚ್ಚರಿಕೆ ನೀಡಿದ್ದು, ಹಲವು ಗ್ರಾಮಗಳ ಜನ ಮಧ್ಯರಾತ್ರಿಯಲ್ಲೂ ಊರು ತೊರೆದು ಸುರಕ್ಷಿತ ಪ್ರದೇಶಗಳಿಗೆ ತೆರಳಿದ್ದಾರೆ.

ಫಿಲಿಪ್ಪಿನ್ಸ್ ಕರಾವಳಿಯ 32 ಕಿ.ಮೀ ಆಳದಲ್ಲಿ ಕಂಪನದ ಕೇಂದ್ರ ಬಿಂದುವನ್ನು ಅಮೆರಿಕದ ಭೂ ವಿಜ್ಞಾನ ಇಲಾಖೆ ಗುರುತಿಸಿದೆ. ದೊಡ್ಡ ಮಟ್ಟದಲ್ಲಿ ನಷ್ಟ ಸಂಭವಿಸಿದ ಬಗ್ಗೆ ಅಥವಾ ಪ್ರಾಣಹಾನಿ ಉಂಟಾದ ಬಗ್ಗೆ ಈವರೆಗೆ ವರದಿಯಾಗಿಲ್ಲ.

'ಪೆಸಿಫಿಕ್ ಸುನಾಮಿ ಎಚ್ಚರಿಕಾ ಕೇಂದ್ರ'ವು ಭೂಕಂಪನದ ತೀವ್ರತೆಯನ್ನು ಆಧರಿಸಿ ಆರಂಭದಲ್ಲಿ ದಕ್ಷಿಣ ಫಿಲಿಪ್ಪಿನ್ಸ್, ಇಂಡೋನೇಷ್ಯಾದ ಕೆಲ ಭಾಗ, ಪಾಲೌ ಮತ್ತು ಮಲೇಷ್ಯಾಕ್ಕೆ ಸುನಾಮಿ ಎಚ್ಚರಿಕೆ ನೀಡಿತ್ತು. ನಂತರ ಸುನಾಮಿ ಎಚ್ಚರಿಕೆಯನ್ನು ಕೇಂದ್ರವು ಹಿಂಪಡೆಯಿತು.

ಭೂಕಂಪದ ವಿಷಯ ತಿಳಿಯುತ್ತಲೇ ಸುನಾಮಿ ಭೀತಿಯಿಂದ ಜಪಾನ್ ಕೂಡ ಕರಾವಳಿ ಭಾಗದ ತನ್ನ ನಾಗರಿಕರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವ ಕೆಲಸ ಆರಂಭಿಸಿತ್ತು. ಒಕಿನಾವ ಸೇರಿದಂತೆ ಇಡೀ ಕರಾವಳಿಯಲ್ಲಿ ಜನರನ್ನು ಬೇರೆಡೆಗೆ ಸಾಗಿಸಿತ್ತು.

₹300 ಕೋಟಿ ಬಿಲ್ ಬಿಡುಗಡೆಗೆ ಒತ್ತಾಯ

ಕಿಯೊನಿಕ್ಸ್ ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ಒಕ್ಕೂಟ ವತಿಯಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಕಿ ಇರುವ ₹ 300 ಕೋಟಿ ಬಿಲ್ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿ ಕಿಯೊನಿಕ್ಸ್ ಗುತ್ತಿಗೆದಾರರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಕಿಯೊನಿಕ್ಸ್ ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ಒಕ್ಕೂಟ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ಹಲವು ಜಿಲ್ಲೆಗಳ ಗುತ್ತಿಗೆದಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಸರ್ಕಾರದ ಎಲ್ಲ ಇಲಾಖೆಗಳಿಗೆ ಕಂಪ್ಯೂಟರ್ ಹಾಗೂ ಅದಕ್ಕೆ ಸಂಬಂಧಪಟ್ಟ ಎಲೆಕ್ಟ್ರಾನಿಕ್ ವಸ್ತುಗಳನ್ನು ಹಲವು ವರ್ಷಗಳಿಂದ ಪೂರೈಸುತ್ತಿದ್ದೇವೆ. ಕಿಯೊನಿಕ್ಸ್ ರೂಪಿಸಿರುವ ಎಲ್ಲ ನಿಯಮಗಳನ್ನು ಪಾಲಿಸಿ ಟೆಂಡರ್ ಮೂಲಕ ಕೆಲಸಗಳನ್ನು ಗುತ್ತಿಗೆ ಪಡೆದು ಕಾರ್ಯನಿರ್ವಹಣೆ ಮಾಡುತ್ತಿದ್ದೇವೆ' ಎಂದು ಒಕ್ಕೂಟದ ಅಧ್ಯಕ್ಷ ವಸಂತ್ ಬಂಗೇರಾ 'ಪ್ರಜಾವಾಣಿ'ಗೆ ತಿಳಿಸಿದರು.

'ಕರ್ನಾಟಕ ವಿದ್ಯುನ್ಮಾನ ನಿಗಮದಲ್ಲಿ (ಕಿಯೊನಿಕ್ಸ್) 450 ಗುತ್ತಿಗೆದಾರರು ನೋಂದಣಿ ಮಾಡಿಕೊಂಡಿದ್ದಾರೆ. ಕಿಯೊನಿಕ್ಸ್ ವತಿಯಿಂದ ಹಲವು ಗುತ್ತಿಗೆಗಳನ್ನು ಪಡೆದುಕೊಂಡು ಇಲಾಖೆಗಳಿಗೆ ವಸ್ತುಗಳನ್ನು ಪೂರೈಕೆ ಮಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ಗುತ್ತಿಗೆದಾರರಿಗೆ ₹ 300 ಕೋಟಿಯಿಂದ ₹ 350 ಕೋಟಿ ಸಂದಾಯ ಆಗಬೇಕು. ಆದರೆ, ಇದುವರೆಗೂ ಬಾಕಿ ಹಣ ನೀಡಿಲ್ಲ' ಎಂದು ದೂರಿದರು.

'ಕಿಯೊನಿಕ್ಸ್ ಸಂಸ್ಥೆಯಲ್ಲಿ ಈ ಹಿಂದೆ ವ್ಯವಸ್ಥಾಪಕ ನಿರ್ದೇಶಕರಾಗಿದ್ದವರು, ಶೇ 12ರಷ್ಟು ಕಮಿಷನ್ ಕೇಳಿದ್ದರು. ಅದನ್ನು ಕೊಡದಿದ್ದಕ್ಕೆ ಬಿಲ್ ಪಾವತಿ ಮಾಡಿಲ್ಲ. ಕಿಯೊನಿಕ್ಸ್ ಅಕ್ರಮ ಸಂಬಂಧ ತನಿಖೆ ನಡೆದಿದೆ. ತನಿಖೆ ಹೆಸರಿನಲ್ಲೂ ಗುತ್ತಿಗೆದಾರರಿಗೆ ಕಿರುಕುಳ ನೀಡಲಾಗುತ್ತಿದೆ' ಎಂದು ಅವರು ಹೇಳಿದರು.

'ಗುತ್ತಿಗೆದಾರರ 4ಜಿ ವಿನಾಯಿತಿ ರದ್ದುಗೊಳಿಸಿ, ಕಿಯೊನಿಕ್ಸ್ ಮುಚ್ಚುವ ಹುನ್ನಾರ ನಡೆದಿದೆ. ಇದಕ್ಕೆ ನಾವು ಆಸ್ಪದ ನೀಡುವುದಿಲ್ಲ. ಕೂಡಲೇ ಬಾಕಿ ಬಿಲ್ ಹಣ ಪಾವತಿ ಮಾಡಬೇಕು. ಮೊದಲಿನ ರೀತಿಯಲ್ಲಿ ಕಾರ್ಯನಿರ್ವಹಣೆಗೆ ಅವಕಾಶ ನೀಡಬೇಕೆಂದು ಆಗ್ರಹಿಸಿ ಸಾಂಕೇತಿಕ ಪ್ರತಿಭಟನೆ ನಡೆಸಲಾಗುತ್ತಿದೆ. ಬೇಡಿಕೆ ಈಡೇರದಿದ್ದರೆ, ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲೂ ಪ್ರತ್ಯೇಕ ಪ್ರತಿಭಟನೆ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದು ಅವರು ಕೋರಿದರು.



ಕಿಯೊನಿಕ್ಸ್ ಗುತ್ತಿಗೆದಾರರು ತಮ್ಮ ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

'ಸಂಸ್ಕೃತಿಯ ಲೋಕಕ್ಕೆ ಪುಸ್ತಕಗಳು ತಾಯಿಬೇರು'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಸಂಸ್ಕೃತಿಯ ಲೋಕಕ್ಕೆ ಪುಸ್ತಕಗಳು ತಾಯಿ ಬೇರಿದ್ದಂತೆ. ವ್ಯಕ್ತಿಯ ಭಾವನೆ, ಮಾನಸಿಕ ಸಂಘರ್ಷಗಳ ಸೂಕ್ಷ್ಮತೆಯನ್ನು 'ಸಿಕ್ಕು' ಕಾದಂಬರಿಯಲ್ಲಿ ಮನೋಜ್ಞವಾಗಿ ವಿವರಿಸಿದ್ದಾರೆ' ಎಂದು ಕಾದಂಬರಿಗಾರ್ತಿ ಸಾಯಿಸುತೆ ತಿಳಿಸಿದರು.

8ನೇ ಮೈಲಿ ಹತ್ತಿರದ ಅಸೆಂಟ್ ಪದವಿ ಪೂರ್ವ ಕಾಲೇಜಿನಲ್ಲಿ ಸನಾತನಿ ವೇದಿಕೆ ಮತ್ತು ಧ್ಯಾನ ಪ್ರಕಾಶನ ವತಿಯಿಂದ ಆಯೋಜಿಸಿದ್ದ ಕಾದಂಬರಿಗಾರ್ತಿ ಮಮತಾ ವಾರನಹಳ್ಳಿ ಅವರ 'ಸಿಕ್ಕು' ಕಾದಂಬರಿ ಬಿಡುಗಡೆ ಮಾಡಿ ಮಾತನಾಡಿದರು.

'ವಿಸ್ಮಯ ಜಗತ್ತಿನ ಮನುಷ್ಯ ಸಂಬಂಧಗಳ ತೊಳಲಾಟವನ್ನು ಮನಮುಟ್ಟುವಂತೆ ಮಮತಾ ಅವರು ಕಟ್ಟಿಕೊಟ್ಟಿದ್ದಾರೆ' ಎಂದರು.

ಮಾಜಿ ಸಚಿವ ಎನ್.ಮಹೇಶ್, 'ಮಹಿಳೆ ತಮ್ಮ ಭಾವನೆಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಗೊಳಿಸುತ್ತಾಳೆ. ಪ್ರತಿಯೊಬ್ಬರ ಜೀವನದಲ್ಲೂ ಸಿಕ್ಕು, ಒಗಟುಗಳು ಇರುತ್ತವೆ. ಅದನ್ನು ವಿವೇಚನೆ ಮತ್ತು ವ್ಯವಧಾನದಿಂದ ಬಿಡಿಸಿಕೊಂಡರೆ ಬದುಕು ಸುಂದರವಾಗುತ್ತದೆ' ಎಂದು ಹೇಳಿದರು.

ಶಾಸಕ ಎಸ್.ಮುನಿರಾಜು, 'ವಿದ್ಯಾಭ್ಯಾಸದ ಜೊತೆಗೆ ಒಳ್ಳೊಳ್ಳೆ ಪುಸ್ತಕಗಳನ್ನು ಓದುವಂತಹ, ಬರೆಯು ವಂತಹ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ವಿಮರ್ಶಕಿ ಪಿ.ಚಂದ್ರಿಕಾ, ಕತೆಗಾರ ಕಂನಾಡಿಗಾ ನಾರಾಯಣ, ಕಾಲೇಜಿನ ಪ್ರಾಂಶುಪಾಲ ಬಿ.ಎಂ.ವೆಂಕಟೇಶ್, ಸಾಹಿತಿ ವೈ.ಬಿ.ಎಚ್. ಜಯದೇವ್, ಕಾದಂಬರಿಗಾರ್ತಿ ಮಮತಾ ವಾರನ ಹಳ್ಳಿ, ಗಾಯಕ ಎನ್.ಡಿ.ಕೃಷ್ಣಮೂರ್ತಿ, ಗಾಯಕಿ ಬಿ.ಎಂ. ಪ್ರಮೀಳಾ, ರಾಜೇಂದ್ರ ಕೊಣ್ಣೂರ, ಲತಾ ಕುಂದರಗಿ ಇದ್ದರು.



ಮಮತಾ ವಾರನಹಳ್ಳಿ ಅವರ 'ಸಿಕ್ಕು' ಕಾದಂಬರಿಯನ್ನು ಕಾದಂಬರಿಗಾರ್ತಿ ಸಾಯಿಸುತೆ ಅವರು ಬಿಡುಗಡೆ ಮಾಡಿದರು. ಕತೆಗಾರ ಕಂನಾಡಿಗಾ ನಾರಾಯಣ, ಶಾಸಕ ಎಸ್‌. ಮುನಿರಾಜು, ಮಾಜಿ ಸಚಿವ ಎನ್‌. ಮಹೇಶ್, ಸಾಹಿತಿ ಜಯದೇವ್, ಕಾದಂಬರಿಗಾರ್ತಿ ಮಮತಾ ವಾರನಹಳ್ಳಿ, ಪ್ರಾಂಶುಪಾಲ ಬಿ.ಎಂ. ವೆಂಕಟೇಶ್ ಇದ್ದರು

ಎನ್‌ಪಿಎಸ್ ಸಂಘದ ಅಧ್ಯಕ್ಷರ ವಿರುದ್ಧ ದೂರು

ಬೆಂಗಳೂರು: ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ಹಣ ದುರುಪಯೋಗ ಪಡಿಸಿಕೊಂಡ ಸಂಬಂಧ ಹಾಲಿ ಅಧ್ಯಕ್ಷ ಶಾಂತರಾಮ್ ವಿರುದ್ಧ ನಗರದ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎನ್‌ಪಿಎಸ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಎ.ನಾಗನಗೌಡ ದೂರು ನೀಡಿದ್ದಾರೆ.

'2017ರಿಂದ 2020ರ ಅವಧಿಯಲ್ಲಿ ಶಾಂತಾರಾಮ್ ಅವರು ಖರ್ಚು, ವೆಚ್ಚಗಳ ಬಿಲ್‌ಗಳಿಗೆ ನನ್ನ ಸಹಿ ನಕಲು ಮಾಡಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ. ನಕಲಿ ದಾಖಲೆ ಸೃಷ್ಟಿಸಿದ್ದಾರೆ' ಎಂದು ಆರೋಪಿಸಿ ದೂರು ನೀಡಿದ್ದಾರೆ.

'ದಾಖಲಾತಿಗಳನ್ನು ನಕಲಿಯಾಗಿ ಸೃಷ್ಟಿಸಿ ಅವುಗಳನ್ನೇ ಅಸಲಿ ಬಿಲ್ ಎಂದು ತೋರಿಸಿದ್ದಾರೆ. ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದಾರೆ' ಎಂದು ದೂರಿನಲ್ಲಿ ಹೇಳಿದ್ದಾರೆ.

ಹಾಸ್ಟೆಲ್‌ನಲ್ಲಿ ಅಧಿಕಾರಿಗಳ ನೃತ್ಯ: ತೀವ್ರ ಆಕ್ಷೇಪ

ಪ್ರಜವಾಣಿ ವಾರ್ತೆ

ತುಮಕೂರು: ಮಹಿಳೆಯರ ಹಾಸ್ಟೆಲ್‌ನಲ್ಲಿ ರಾತ್ರಿ ವೇಳೆ ಅಧಿಕಾರಿಗಳು ನೃತ್ಯ ಮಾಡಿರುವ ವಿಡಿಯೊ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿದೆ. ಇದಕ್ಕೆ ಸಾರ್ವಜನಿಕರ ವಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ನಗರದ ಹೊರ ವಲಯದ ಗೆದ್ದಲಹಳ್ಳಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮಹಿಳಾ ಹಾಸ್ಟೆಲ್‌ನಲ್ಲಿ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಸಮ್ಮುಖದಲ್ಲಿ ತಹಶೀಲ್ದಾರ್ ಸಿದ್ದೇಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ನೃತ್ಯ ಮಾಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿದೆ.

'ಮಹಿಳೆಯರ ಹಾಸ್ಟೆಲ್‌ನಲ್ಲಿ ರಾತ್ರಿ ವೇಳೆ ಯುವತಿಯರ ಜತೆ ನೃತ್ಯ ಮಾಡುವ ಅಗತ್ಯವೇನಿತ್ತು. ಅಂತಹ ಕೆಟ್ಟ ಹಾಡುಗಳಿಗೆ ಅಧಿಕಾರಿಗಳು ನೃತ್ಯ ಮಾಡಿ ಸಮಾಜಕ್ಕೆ ಎಂಥ ಸಂದೇಶ ನೀಡುತ್ತಾರೆ' ಎಂದು ನೆಟ್ಟಿಗರು ಪ್ರಶ್ನಿಸಿದ್ದಾರೆ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. 'ಹೆಣ್ಣು ಮಕ್ಕಳ ಎದುರು ಅಶ್ಲೀಲವನ್ನು ಧ್ವನಿಸುವಂತಹ ಹಾಡಿಗೆ ಅಧಿಕಾರಿಗಳು ನೃತ್ಯ ಮಾಡಿದ್ದಾರೆ. ಹೆಣ್ಣು ಮಕ್ಕಳ ಮಧ್ಯದಲ್ಲಿ ಕುಣಿದ್ದಾರೆ. ಅದೂ ಅಲ್ಲದೆ ನಗರದ ಹೊರ ಭಾಗದಲ್ಲಿ ಇರುವ ಮಹಿಳೆಯರ ಹಾಸ್ಟೆಲ್ ಏಕೆ ಆಯ್ಕೆ ಮಾಡಿಕೊಂಡರು. ಇಷ್ಟೊಂದು ಕೀಳುಮಟ್ಟಕ್ಕೆ ಇಳಿದಿದ್ದಾರೆಯೆ? ಜಿಲ್ಲಾಧಿಕಾರಿ ಸಮ್ಮುಖದಲ್ಲೇ ನಡೆದಿರುವುದನ್ನು ನೋಡಿದರೆ ಇದು ಏನನ್ನು ಸೂಚಿಸುತ್ತದೆ' ಎಂದು ಕುಟುಕಿದ್ದಾರೆ.

'ದೀಪಾವಳಿ ಹಬ್ಬ ಆಚರಣೆ ಮಾಡಿದ್ದಾರೆ. ನಾನು ನೃತ್ಯಮಾಡಿಲ್ಲ. ಮಕ್ಕಳ ಜತೆಗೆ ಅಧಿಕಾರಿಗಳು ಖುಷಿ ಹಂಚಿಕೊಂಡಿದ್ದಾರೆ' ಎಂದು ಡಿ.ಸಿ ಕೆ.ಶ್ರೀನಿವಾಸ್ ಪ್ರತಿಕ್ರಿಯಿಸಿದ್ದಾರೆ.

ಅಂಬೇಡ್ಕರ್ ಜಯಂತ್ಯುತ್ಸವದಲ್ಲಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ

ವೈಚಾರಿಕ, ವೈಜ್ಞಾನಿಕ ಶಿಕ್ಷಣ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಚಾರಿಕ, ವೈಜ್ಞಾನಿಕ ಶಿಕ್ಷಣದಿಂದ ಮಾತ್ರ ಸಮಾಜ ಉದ್ಧಾರವಾಗಲು ಸಾಧ್ಯ ಎಂದು ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಹೇಳಿದರು.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತ್ಯುತ್ಸವ, ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಾವು ಏನು ತಿನ್ನಬೇಕು, ಯಾವ ಬಟ್ಟೆ ತೊಡಬೇಕು, ಯಾರ ಹತ್ತಿರ ಮಾತನಾಡಬೇಕು ಎಂಬುದನ್ನು ನಾವೇ ನಿರ್ಧರಿಸುವ ಹಕ್ಕನ್ನು ಸಂವಿಧಾನ ನೀಡಿದೆ. ಆದರೆ, ಅದು ತಿನ್ನಬಾರದು, ಆ ಬಟ್ಟೆ ಹಾಕಬಾರದು ಎಂದೆಲ್ಲ ನಿಯಂತ್ರಿಸುವವರೇ ಹೆಚ್ಚಾಗಿದ್ದಾರೆ. ಅವರಿಗೂ ಸಂವಿಧಾನದ ಅರಿವಿಲ್ಲ, ಅವರ ಮಾತುಗಳನ್ನು ಪಾಲಿಸುವವರಿಗೂ ಅರಿವಿಲ್ಲ' ಎಂದು ತಿಳಿಸಿದರು.

'ಸಮಾನತೆ ಇಲ್ಲದ ಸ್ವಾತಂತ್ರ್ಯವು ಸ್ವಾತಂತ್ರ್ಯವೇ ಇಲ್ಲ. ಅದಕ್ಕಾಗಿಯೇ ಅಂಬೇಡ್ಕರ್ ಅವರು ಸ್ವಾತಂತ್ರ್ಯಕ್ಕೆ ನೀಡಿದ್ದಷ್ಟೇ ಪ್ರಾಮುಖ್ಯವನ್ನು ಸಮಾನತೆಗೆ ನೀಡಿದ್ದಾರೆ. ಸಂವಿಧಾನವೂ ಸೇರಿದಂತೆ ಎಲ್ಲವನ್ನು ಅಧ್ಯಯನ ಮಾಡಿದರೆ ಸಮಾಜವನ್ನು ಮುಂದಕ್ಕೆ ಒಯ್ಯಲು ಸಾಧ್ಯ' ಎಂದು ಹೇಳಿದರು.

ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷ ನ್ಯಾ. ಎಲ್. ನಾರಾಯಣ ಸ್ವಾಮಿ ಮಾತನಾಡಿ, 'ಅಂಬೇಡ್ಕರ್ ಅವರು ಮಹಡ್ ಕೆರೆ ನೀರು ಮುಟ್ಟುವ ಮೂಲಕ ಕ್ರಾಂತಿಕಾರಕ ಹೆಜ್ಜೆ ಇಟ್ಟಿದ್ದರು. ನಾಸಿಕದ ಕಾಳರಾಂ ದೇವಸ್ಥಾನ ಪ್ರವೇಶಿಸುವ ಚಳವಳಿ ಮಾಡಿದ್ದರು. ಆದರೆ, ಈಗಲೂ ದೇವಸ್ಥಾನ ಪ್ರವೇಶಿಸಿದ ಕಾರಣಕ್ಕೆ, ದೇವರ ಕೋಲು ಮುಟ್ಟಿದ್ದಕ್ಕೆ, ಅಂತರಜಾತಿ ವಿವಾಹವಾಗಿದ್ದಕ್ಕೆ ಕೊಲೆ, ಹಲ್ಲೆಗಳು ನಡೆಯುತ್ತಲೇ ಇವೆ' ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಉಜ್ವಲ್ ಕುಮಾರ್ ಘೋಷ್ ಅಧ್ಯಕ್ಷತೆ ವಹಿಸಿದ್ದರು. ಮಹಾಬೋಧಿ ಸೊಸೈಟಿಯ ಮಹಾಬೋಧಿ ಬಿಕ್ಕು ಮತ್ತು ಅವರ ಶಿಷ್ಯರು ತ್ರಿಚರಣ ಮತ್ತು ಪಂಚಶೀಲ ದಮ್ಮ ಪದ ಸಂದೇಶ ಪಠಣ, ಬುದ್ಧವಂದನೆ, ಸಂವಿಧಾನ ಪೀಠಿಕೆ ಪಠಣ ನಡೆಸಿಕೊಟ್ಟರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಡಾ.ಬಿ.ಆರ್‌. ಅಂಬೇಡ್ಕರ್ ಜಯಂತಿ ಮತ್ತು ಸಂವಿಧಾನ ದಿನಾಚರಣೆ' ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಉಜ್ವಲ್ ಕುಮಾರ್ ಘೋಷ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್‌.ಸಿ. ಮಹದೇವಪ್ಪ, ಕರ್ನಾಟಕ ರಾಜ್ಯ ಮಾನವಹಕ್ಕು ಆಯೋಗದ ಅಧ್ಯಕ್ಷ ನ್ಯಾ. ಎಲ್‌. ನಾರಾಯಣಸ್ವಾಮಿ ಮತ್ತು 'ಮಹಾಬೋಧಿ ಸೊಸೈಟಿ'ಯ ಮಹಾಬೋಧಿ ಬಿಕ್ಕು ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

'ಸಿ.ಎಂ ಕುರ್ಚಿ ಖಾಲಿ ಆಗಲ್ಲ'

ಬೆಂಗಳೂರು: 'ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳು ಇರಬಹುದು. ಆದರೆ, ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಯಾವ ಕಾರಣಕ್ಕೂ ಮುಖ್ಯಮಂತ್ರಿ ಕುರ್ಚಿ ಖಾಲಿ ಆಗುವುದೇ ಇಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಸದ್ಯ ಮುಖ್ಯಮಂತ್ರಿ. ಹೀಗಿರುವಾಗ, ಯಾಕೆ ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆ ಉದ್ಭವಾಗುತ್ತದೆ' ಎಂದರು.

'ಸಿದ್ದರಾಮಯ್ಯಗೆ ಮೊದಲಿದ್ದ ಸ್ವಾತಂತ್ರ್ಯ ಈಗ ಇದ್ದಂತಿಲ್ಲ. 2013 ಸುವರ್ಣ ಯುಗವಾಗಿತ್ತು' ಎಂಬ ಮಾಜಿ ಸಚಿವ ಆಂಜನೇಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಅವರಿಗೆ ಯಾಕೆ ಸ್ವಾತಂತ್ರ್ಯ ಇಲ್ಲ. ಅವರು ಯಾವಾಗಲೂ ಸ್ವಾತಂತ್ರ್ಯ ಇರುವ ವ್ಯಕ್ತಿ. ಸ್ವಾತಂತ್ರ್ಯ ಕಳೆದುಕೊಂಡು ಅವರು ಎಂದೂ ಆಡಳಿತ ನಡೆಸುವುದಿಲ್ಲ. ಅವರ ಕೈ ಕಟ್ಟಿ ಹಾಕಿದ್ದರೆ ಸಹಿ ಯಾಕೆ ಹಾಕುತ್ತಾರೆ. ಆದರೆ, ಆಂಜನೇಯ ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ' ಎಂದು ಹೇಳಿದರು.

ಬಾಂಬ್ ಬೆದರಿಕೆ: ವಿದೇಶಿ ಕಂಪನಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಹಾಗೂ ಗ್ರಾಮಾಂತರ ವಿಭಾಗದ 68 ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಇ–ಮೇಲ್ ನಿರ್ವಹಣೆ ಮಾಡುತ್ತಿದ್ದ ವಿದೇಶಿ ಕಂಪನಿಗೆ ಪತ್ರ ಬರೆದಿದ್ದಾರೆ.

ಬಾಂಬ್ ಬೆದರಿಕೆ ಆರೋಪಿ ಪತ್ತೆಗಾಗಿ ಹೆಚ್ಚುವರಿ ಪೊಲೀಸ್ ಕಮಿಷನರ್ ಸತೀಶ್‌ಕುಮಾರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ. ಸೈಬರ್ ಕ್ರೈಂ ಠಾಣೆ ಪೊಲೀಸರು ತಂಡದಲ್ಲಿದ್ದು, ತಾಂತ್ರಿಕ ಪುರಾವೆ ಆಧರಿಸಿ ತನಿಖೆ ಮುಂದುವರಿಸಿದ್ದಾರೆ.

'khariijites@beeble.com ಹಾಗೂ khharijites@beeble.com ಇ–ಮೇಲ್‌ಗಳಿಂದ ಬೆದರಿಕೆ ಸಂದೇಶ ಬಂದಿತ್ತು. ಸೈಪ್ರಸ್ ಸರ್ವರ್ ನಿರ್ವಹಣೆ ಕಂಪನಿಯಲ್ಲಿ ಎರಡೂ ಇ–ಮೇಲ್‌ಗಳು ನೋಂದಣಿ ಆಗಿರುವ ಮಾಹಿತಿ ಲಭ್ಯವಾಗಿದೆ. ಹೀಗಾಗಿ, ಇ–ಮೇಲ್ ನೋಂದಣಿ ಯಾರ ಹೆಸರಿನಲ್ಲಿದೆ? ವಿಳಾಸವೇನು? ಎಂಬುದನ್ನು ತಿಳಿಯಲು ಸೈಪ್ರಸ್ ಕಂಪನಿಗೆ ಪತ್ರ ಬರೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಹಲವು ಆಯಾಮಗಳಲ್ಲಿ ತನಿಖೆ ನಡೆಸಲಾಗಿದೆ. ಸ್ಥಳೀಯರು ಕೃತ್ಯ ಎಸಗಿರುವ ಅನುಮಾನ ವಿದ್ದು, ಪುರಾವೆಗಳು ಇಲ್ಲ. ಆದರೆ, ವಿದೇಶದಿಂದ ಸಂದೇಶ ಬಂದಿರುವುದಕ್ಕೆ ಪುರಾವೆಗಳು ಇವೆ. ಅದೇ ಪುರಾವೆ ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲು ಪ್ರಯತ್ನಿಸಲಾಗುತ್ತಿದೆ' ಎಂದು ತಿಳಿಸಿದರು.

ವಿಪಿಎನ್, ಐಪಿ ಪರಿಶೀಲನೆ: 'ಬೆದರಿಕೆ ಸಂದೇಶ ಬಂದಿದ್ದ ಇ–ಮೇಲ್‌ಗಳ ವರ್ಚುವಲ್ ಪ್ರೈವೆಟ್ ನೆಟ್‌ವರ್ಕ್ (ವಿಪಿಎನ್) ಹಾಗೂ ಇಂಟರ್‌ನೆಟ್ ಪ್ರೋಟೊಕಾಲ್ (ಐ.ಪಿ) ವಿಳಾಸದ ಬಗ್ಗೆ ಮಾಹಿತಿ ಕಲೆಹಾಕಲಾಗಿದೆ. ಅವೆರಡೂ 'ರಿಪಬ್ಲಿಕ್ ಆಫ್ ಸೈಪ್ರಸ್' ಲೊಕೇಷನ್ ತೋರಿಸುತ್ತಿವೆ' ಎಂದು ಹೇಳಿದರು.

'ವಿಪಿಎನ್ ಹಾಗೂ ಐ.ಪಿ ನಕಲು ಮಾಡಿ ಸ್ಥಳೀಯ ವ್ಯಕ್ತಿಗಳೇ ಸಂದೇಶ ಕಳುಹಿಸಿರುವ ಸಾಧ್ಯತೆಯೂ ಇದೆ. ಸೈಪ್ರಸ್ ಕಂಪನಿಯಿಂದ ಉತ್ತರ ಬಂದ ನಂತರವೇ ನಿಖರ ಮಾಹಿತಿ ತಿಳಿಯಲಿದೆ' ಎಂದು ತಿಳಿಸಿದರು.

2022ರಲ್ಲೂ ಬೆದರಿಕೆ: 2022ರ ಏಪ್ರಿಲ್ 8ರಂದು ನಗರದ 16 ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿತ್ತು. ತನಿಖೆ ನಡೆಸಿದ್ದ ಪೊಲೀಸರು, ವಿದೇಶದಿಂದ ಇ–ಮೇಲ್ ಬಂದಿದ್ದನ್ನು ಪತ್ತೆ ಮಾಡಿದ್ದರು. ಇ–ಮೇಲ್ ಬಗ್ಗೆ ಮಾಹಿತಿ ಕೋರಿ ವಿದೇಶಿ ಕಂಪನಿಗೆ ಪತ್ರ ಬರೆದಿದ್ದರು. ಆದರೆ, ಇದುವರೆಗೂ ಕಂಪನಿಯಿಂದ ಉತ್ತರ ಬಂದಿಲ್ಲ. ಹೀಗಾಗಿ, ಹಳೇ ಪ್ರಕರಣದ ತನಿಖೆ ಅರ್ಧಕ್ಕೆ ನಿಂತಿದೆ. ಇದರ ಬೆನ್ನಲ್ಲೇ ಇದೀಗ 68 ಶಾಲೆಗಳಿಗೆ ಪುನಃ ಬೆದರಿಕೆ ಸಂದೇಶ ಬಂದಿದೆ.

'2022ರಲ್ಲಿ ತಮಿಳುನಾಡಿನ ಬಾಲಕನೊಬ್ಬ ಅಭಿವೃದ್ಧಿಪಡಿಸಿದ್ದ ಸಾಫ್ಟ್‌ವೇರ್ ಖರೀದಿಸಿದ್ದ ವಿದೇಶಿ ಪ್ರಜೆಯೊಬ್ಬ ಇ–ಮೇಲ್ ಕಳುಹಿಸಿದ್ದ ಬಗ್ಗೆ ಮಾಹಿತಿ ಇತ್ತು. ಆದರೆ, ಆ ಬಾಲಕ ಹಾಗೂ ವಿದೇಶಿ ಪ್ರಜೆ ಇದುವರೆಗೂ ಪತ್ತೆ ಆಗಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಭಯ ಹುಟ್ಟಿಸಲು ಕೃತ್ಯ: 'ಶಾಲೆ ಮಕ್ಕಳು, ಪೋಷಕರು ಹಾಗೂ ಶಿಕ್ಷಕರನ್ನು ಭಯಗೊಳಿಸಿ ಸಮಾಜದಲ್ಲಿ ಅಶಾಂತಿ ವಾತಾವರಣ ಸೃಷ್ಟಿಸಲು ಆರೋಪಿಗಳು ಕೃತ್ಯ ಎಸಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸೈಬರ್ ಅಪರಾಧ: ಆನೇಕಲ್‌ನಲ್ಲಿ ದಂಪತಿ ವಿಚಾರಣೆ

ಆನೇಕಲ್: ಸೈಬರ್ ಅಪರಾಧಕ್ಕೆ ಸಂಬಂಧಿಸಿದಂತೆ ರಾಜ್ಯ ಪೊಲೀಸ್ ಗುಪ್ತಚರ ಇಲಾಖೆ ಮತ್ತು ಆನೇಕಲ್ ಪೊಲೀಸ್ ಉಪ ವಿಭಾಗದ ಪೊಲೀಸರು ಶುಕ್ರವಾರ ರಾತ್ರಿಯಿಂದ ಪಟ್ಟಣದಲ್ಲಿ ವಾಸವಾಗಿರುವ ದಂಪತಿಯ ವಿಚಾರಣೆ ನಡೆಸುತ್ತಿದ್ದಾರೆ.

ಉದ್ಯೋಗದ ನಿಮಿತ್ತ ಆನೇಕಲ್‌ನಲ್ಲಿರುವ ಉತ್ತರ ಕರ್ನಾಟಕದ ದಂಪತಿ ಪಟ್ಟಣದ ಕೃಷಿ ಇಲಾಖೆ ಸಮೀಪದ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದಾರೆ.

ಸುಮಾರು 20ಕ್ಕೂ ಹೆಚ್ಚು ಪೊಲೀಸರು ಶುಕ್ರವಾರ ರಾತ್ರಿ 10ಗಂಟೆಯಿಂದ ಶನಿವಾರದವರೆಗೂ ವಿಚಾರಣೆ ನಡೆಸಿದ್ದಾರೆ. ಸೈಬರ್ ಅಪರಾಧಕ್ಕೆ ಸಂಬಂಧಿಸಿದಂತೆ ಈ ತನಿಖೆ ನಡೆದಿದೆ ಎಂದು ಪೊಲೀಸ್ ಇಲಾಖೆಯ ಮೂಲಗಳು ತಿಳಿಸಿವೆ. ತನಿಖೆ ಇನ್ನೂ ಪ್ರಗತಿಯಲ್ಲಿರುವ ಕಾರಣ ಮಾಹಿತಿ ನೀಡಲು ಪೊಲೀಸ್ ಅಧಿಕಾರಿಗಳು ನಿರಾಕರಿಸಿದ್ದಾರೆ.

ಬೆಂಗಳೂರು ಮತ್ತು ಆನೇಕಲ್ ಸುತ್ತಮುತ್ತಲಿನ ಶಾಲೆಗಳಿಗೆ ಶುಕ್ರವಾರ ಹುಸಿ ಬಾಂಬ್ ಬೆದರಿಕೆ ಇ–ಮೇಲ್ ಸಂದೇಶ ಕಳಿಸಿದ ಐ.ಪಿ ವಿಳಾಸ ಆನೇಕಲ್‌ನಲ್ಲಿ ಪತ್ತೆಯಾಗಿದೆ ಎಂಬ ವದಂತಿ ದಟ್ಟವಾಗಿದೆ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ದಂಪತಿಯ ವಿಚಾರಣೆ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಲು ಪೊಲೀಸರು ನಿರಾಕರಿಸಿದ್ದಾರೆ. ಸೈಬರ್ ಅಪರಾಧ ಪ್ರಕರಣದ ತನಿಖೆ ನಡೆಯುತ್ತಿದೆ ಎಂದು ಚುಟುಕಾಗಿ ಉತ್ತರಿಸಿದ್ದಾರೆ.

ಸುರಕ್ಷತಾ ನೀತಿ ಕಡ್ಡಾಯಕ್ಕೆ ಒತ್ತಾಯ

ಬೆಂಗಳೂರು: ಎಲ್ಲಾ ಶಾಲೆಗಳಲ್ಲೂ ಮಕ್ಕಳ ಸುರಕ್ಷತಾ ನೀತಿ ಕಡ್ಡಾಯಗೊಳಿಸಬೇಕು ಎಂದು ಮಕ್ಕಳ ಹಕ್ಕುಗಳ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ ಶುಕ್ರವಾರ ಭಯಭೀತರಾದ ಶಾಲೆಗಳಿಗೆ ಬಾಂಬ್ ಬೆದರಿಕೆಯ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ 'ಚೈಲ್ಡ್ ರೈಟ್ಸ್ ಟ್ರಸ್ಟ್' ಪತ್ರ ಬರೆದಿದೆ.

ಮಕ್ಕಳ ಸುರಕ್ಷತಾ ನೀತಿಯನ್ನು ಕಡ್ಡಾಯಗೊಳಿಸಿ 2016ರಲ್ಲಿ ಆದೇಶ ಹೊರಡಿಸಿದ್ದರೂ, ಶಾಲೆಗಳು ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಟ್ರಸ್ಟ್‌ನ ನಾಗಸಿಂಹ ಜಿ.ರಾವ್ ಹೇಳಿದ್ದಾರೆ.

ಮಕ್ಕಳಿಗೆ ಆಘಾತದಿಂದ ಹೊರಬರಲು, ಶಿಕ್ಷಕರಿಗೆ ವಿಪತ್ತು ನಿರ್ವಹಣಾ ತರಬೇತಿ ನೀಡಲು ಸಹಾಯ ಶಾಲಾ ಆಡಳಿತ ಮಂಡಳಿಗಳು ತರಬೇತಿ ಆಯೋಜಿಸಲು ಸೂಚಿಸಬೇಕು ಎಂದು ಒತ್ತಾಯಿಸಿದ್ದಾರೆ.


ಪಾಕ್ ಪರ ಘೋಷಣೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳ ನಡುವೆ ಕ್ರಿಕೆಟ್ ಪಂದ್ಯ ನಡೆಯುತ್ತಿದ್ದ ಸಂದರ್ಭದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದ ಇಬ್ಬರು ಆರೋಪಿಗಳನ್ನು ಜೆ.ಪಿ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಇನಾಯತ್ ಉಲ್ಲಾ ಖಾನ್ ಹಾಗೂ ಸೈಯದ್ ಮುಬಾರಕ್ ಬಂಧಿತರು. ಮೊಹಾಲಿಕಾ ಪಬ್ ವ್ಯವಸ್ಥಾಪಕ ನೀಡಿದ್ದ ದೂರು ಆಧರಿಸಿ ಇಬ್ಬರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜೆ.ಪಿ.ನಗರ 2ನೇ ಹಂತದಲ್ಲಿರುವ ಮೊಹಾಲಿಕಾ ಪಬ್‌ನಲ್ಲಿ ಭಾರತ–ಆಸ್ಟ್ರೇಲಿಯಾ ನಡುವಿನ ಟಿ–20 ಕ್ರಿಕೆಟ್ ಪಂದ್ಯ ವೀಕ್ಷಣೆಗಾಗಿ ಶುಕ್ರವಾರ ವ್ಯವಸ್ಥೆ ಮಾಡಲಾಗಿತ್ತು. ಪಬ್‌ಗೆ ಹೋಗಿದ್ದ ಆರೋಪಿಗಳು ಪಾಕಿಸ್ತಾನದ ಪರ ಘೋಷಣೆ ಕೂಗಿದ್ದರು. ಆರೋಪಿಗಳನ್ನು ತರಾಟೆಗೆ ತೆಗೆದುಕೊಂಡಿದ್ದ ಸ್ಥಳೀಯರು ಪೊಲೀಸರಿಗೆ ವಿಷಯ ತಿಳಿಸಿದ್ದರು. ಸ್ಥಳಕ್ಕೆ ತೆರಳಿದ್ದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರು. ಇಬ್ಬರನ್ನೂ ನ್ಯಾಯಾಂಗ ವಶಕ್ಕೆ ನೀಡಲಾಗಿದೆ.



ಸೈಯದ್ ಮುಬಾರಕ್



ಇನಾಯತ್ ಉಲ್ಲಾ ಖಾನ್

ಪ್ಯಾಲೆಸ್ಟೀನ್ ಪರ ಪ್ರತಿಭಟನೆ

ಬೆಂಗಳೂರು: 'ಹಮಾಸ್ ಉಗ್ರರ ದಾಳಿಯನ್ನು ನೆಪವಾಗಿಟ್ಟುಕೊಂಡು ಪ್ಯಾಲೆಸ್ಟೀನ್ ಜನರ ಮೇಲೆ ಇಸ್ರೇಲ್ ದಾಳಿ ಮಾಡುತ್ತಿದೆ. ಇಸ್ರೇಲ್ ವರ್ತನೆಯನ್ನು ಭಾರತ ಸರ್ಕಾರ ಖಂಡಿಸಬೇಕು' ಎಂದು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು.

ಸಾಹಿತಿ ಪುರುಷೋತ್ತಮ ಬಿಳಿಮಲೆ ಮಾತನಾಡಿದರು.


ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ: 'ಪ್ಯಾಲೆಸ್ಟೀನ್ ಪರ ಕಾರ್ಯಕ್ರಮ ಹಮ್ಮಿಕೊಳ್ಳಲು ಸರ್ಕಾರ, ಪೊಲೀಸರು ಅನುಮತಿ ನೀಡುತ್ತಿಲ್ಲ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ' ಎಂದು ಪ್ರತಿಭಟನಕಾರರು ದೂರಿದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು ಪ್ಯಾಲೆಸ್ಟೀನ್ ಪರ ಫಲಕಗಳನ್ನು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಮಂಡ್ಯ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ನಟರಾಜ್

ಬೆಂಗಳೂರು: ಮಂಡ್ಯ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ನಟರಾಜ್ ಅವರು ಬೆಂಗಳೂರಿನಲ್ಲಿರುವ ತಮ್ಮ ಮನೆಯಲ್ಲಿ ಶುಕ್ರವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಕುಣಿಗಲ್‌ನ ನಟರಾಜ್ ಮಂಡ್ಯ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಗ್ಯ ಸಮಸ್ಯೆಯಿಂದಾಗಿ ರಜೆ ಪಡೆದಿದ್ದ ಅವರು ಬೆಂಗಳೂರಿನ ಮನೆ ಯಲ್ಲಿ ಹಲವು ದಿನಗಳಿಂದ ಉಳಿದುಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ನಟರಾಜ್ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದಾರೆ. ಸ್ಥಳದಲ್ಲಿ ಯಾವುದೇ ಮರಣ ಪತ್ರ ಸಿಕ್ಕಿಲ್ಲ. ಆರೋಗ್ಯ ಸಮಸ್ಯೆಯಿಂದಾಗಿ ನೊಂದು ಅವರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಕುಟುಂಬಸ್ಥರು ಹೇಳಿಕೆ ನೀಡಿದ್ದಾರೆ' ಎಂದು ತಿಳಿಸಿದರು.

ನಟರಾಜ್ ಅವರು ಈ ಹಿಂದೆಯೂ ಎರಡು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದರೆಂದು ಗೊತ್ತಾಗಿದೆ. 'ಮಂಡ್ಯದಲ್ಲಿ ನಡೆದಿದ್ದ ಭ್ರೂಣ ಹತ್ಯೆ ಪ್ರಕರಣಕ್ಕೂ ನಟರಾಜ್ ಆತ್ಮಹತ್ಯೆಗೂ ಸಂಬಂಧವಿರುವುದಾಗಿ ಸುದ್ದಿಗಳು ಹರಿದಾಡುತ್ತಿವೆ. ಆದರೆ, ಇದಕ್ಕೆ ಸಂಬಂಧಪಟ್ಟ ಯಾವುದೇ ಪುರಾವೆಗಳು ಸದ್ಯಕ್ಕೆ ಸಿಕ್ಕಿಲ್ಲ.

'ನನ್ನ ವಿರುದ್ಧ ಸುಳ್ಳು ಆರೋಪ'

ಮಂಡ್ಯ: 'ನಟರಾಜ್ ಆತ್ಮಹತ್ಯೆಗೂ ನನಗೂ ಸಂಬಂಧವಿಲ್ಲ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮೋಹನ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ವಿರುದ್ಧ ಸುಳ್ಳು ಆರೋಪ ಮಾಡಲಾಗಿದೆ. ನಟರಾಜ್ ನಮ್ಮ ಕಚೇರಿಗೆ ಬಂದು 3 ತಿಂಗಳಾಗಿದೆ. ನ.2ರಂದು ಹೃದಯಾಘಾತವಾಗಿದೆ ಎಂದು ರಜೆ ಕೇಳಿದ್ದರು. ರಜೆ ನೀಡಲಾಗಿತ್ತು. ನ.17ರಂದು ಪತ್ರ ಬರೆದು, ಹಿಂದೆ ಕೆಲಸ ಮಾಡಿದ್ದ ಸ್ಥಳಕ್ಕೆ ವರ್ಗಾವಣೆಗೆ ಕೋರಿದ್ದರು. ನಟರಾಜ್ ಖಿನ್ನತೆಗೆ ಒಳಗಾಗಿದ್ದರು. ನಾಲ್ಕೈದು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದರು' ಎಂದರು.

ವಕೀಲನ ಮೇಲೆ ಹಲ್ಲೆ ಪ್ರಕರಣಕ್ಕೆ ತಿರುವು: ಪೊಲೀಸರ ಪ್ರತಿಭಟನೆ

ಚಿಕ್ಕಮಗಳೂರು: ವಕೀಲ ಪ್ರೀತಮ್ ಮೇಲೆ ಪೊಲೀಸರು ಹಲ್ಲೆ ನಡೆಸಿದ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ. ಶನಿವಾರ ರಾತ್ರಿ ಪೊಲೀಸರೇ ಪ್ರತಿಭಟನೆಗೆ ಇಳಿದಿದ್ದು, 'ನಮಗೂ ನ್ಯಾಯ ಬೇಕು' ಎಂದು ಪಟ್ಟು ಹಿಡಿದಿದ್ದಾರೆ.

ವಕೀಲ ಪ್ರೀತಮ್ ನೀಡಿದ್ದ ದೂರಿನ ಮೇರೆಗೆ ದಾಖಲಿಸಿದ್ದ ಪ್ರಕರಣ ಆಧರಿಸಿ ಕಾನ್‌ಸ್ಟೆಬಲ್ ಗುರುಪ್ರಸಾದ್ ಬಂಧನಕ್ಕೆ ಅಧಿಕಾರಿಗಳು ಮುಂದಾದರು. ಈ ಮಾಹಿತಿ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡುತ್ತಿದ್ದಂತೆ ಹನುಮಂತಪ್ಪ ಸರ್ಕಲ್‌ಬಳಿ ಜಮಾಯಿಸಿದರು. ಸ್ವಲ್ಪ ಹೊತ್ತಿನಲ್ಲೇ ಗುರುಪ್ರಸಾದ್ ಅವರನ್ನು ಬಂಧಿಸಲಾಗಿದೆ ಎಂಬುವುದು ಖಚಿತವಾಗಿ ಪೊಲೀಸರು, ಸಮವಸ್ತ್ರ ಸಹಿತ ಧರಣಿ ನಡೆಸಿ ವಕೀಲರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಕೀಲ ಪ್ರೀತಮ್ ಪೊಲೀಸರ ಮೇಲೆ ನಡೆಸಿದ ದೌರ್ಜನ್ಯವನ್ನು ಯಾರೂ ಪರಿಗಣಿಸುತ್ತಿಲ್ಲ. ಪೊಲೀಸರೇ ಕಳ್ಳರೆಂದು ಬಿಂಬಿಸಲಾಗುತ್ತಿದೆ. ನಮಗೂ ನ್ಯಾಯ ಸಿಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾನಿರತ ಪೊಲೀಸರನ್ನು ಸಮಾಧಾನಪಡಿಸಲು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೃಷ್ಣಮೂರ್ತಿ ಯತ್ನಿಸಿದರು. ಆದರೆ, ಒಪ್ಪದ ಪೊಲೀಸರು ಧರಣಿ ಮುಂದುವರಿಸಿದರು. ಪೊಲೀಸರ ಕಪಾಳಕ್ಕೆ ಹೊಡೆದ ವಕೀಲ ಪ್ರೀತಮ್ ವಿರುದ್ಧ ಮೊಕದ್ದಮೆ ದಾಖಲಿಸಬೇಕು ಎಂದು ಪಟ್ಟು ಹಿಡಿದರು.

ಐಜಿ ಭೇಟಿ: ರಾತ್ರಿ 10 ಗಂಟೆ ವೇಳೆಗೆ ಸ್ಥಳಕ್ಕೆ ಭೇಟಿ ನೀಡಿದ ಐಜಿ ಚಂದ್ರಗುಪ್ತ ಅವರು, 'ಇಲಾಖೆ ತನಿಖೆಯ ವೇಳೆಗೆ ಪರಿಶೀಲನೆ ನಡೆಸುತ್ತೇವೆ, ಸಿಬ್ಬಂದಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ' ಎಂದು ಭರವಸೆ ನೀಡಿದರು. ಆದರೆ ಇದಕ್ಕೂ ಬಗ್ಗದ ಪೊಲೀಸರು, 'ನಿಮ್ಮ ಮೇಲೆ ನಮಗೆ ವಿಶ್ವಾಸವಿಲ್ಲ' ಎಂದು ಪ್ರತಿಭಟನೆ ಮುಂದುವರಿಸಿದರು.

ಕುಟುಂಬದವರ ಪ್ರತಿಭಟನೆ: ಅಮಾನತುಗೊಂಡಿರುವ ಪೊಲೀಸರ ಕುಟುಂಬದವರು ಶನಿವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿ, ಕಣ್ಣೀರು ಹಾಕಿದರು. 'ಪೊಲೀಸರ ಕಪಾಳಕ್ಕೆ ಪ್ರೀತಮ್ ಹೊಡೆದಿದ್ದು, ಅವರ ವಿರುದ್ಧವೂ ಕ್ರಮ ಜರಗಿಸಬೇಕು' ಎಂದು ಒತ್ತಾಯಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ: ಬೆಂಅಪ್ರಾ/ವಿಭೂಸ್ವಾಅ–4/ಡಾ॥ ಎಸ್.ಕೆ.ಎಲ್/346/2023–24
ದಿನಾಂಕ: 01.12.2023

ಸಾರ್ವಜನಿಕ ಪ್ರಕಟಣೆ

ವಿಷಯ: ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಜಾರಕ್ ಬಂಡೆ ಕಾವಲ್ ಗ್ರಾಮದ ಸರ್ವೆ ನಂ. 64/4 ರಿಂದ 64/9 ಜಮೀನುಗಳನ್ನು ಪ್ರಾಧಿಕಾರದ ಡಾ॥ ಶಿವರಾಮಕಾರಂತ ಬಡಾವಣೆಗೆ ಭೂಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಪರಿಹಾರ ಪಾವತಿಸುವ ಬಗ್ಗೆ.

ಉಲ್ಲೇಖ: (1) ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ ಯುಡಿಡಿ/553/ ಎಂಎನ್‌ಎಕ್ಸ್/2018, ದಿನಾಂಕ: 30.10.2016 ಕರ್ನಾಟಕ ರಾಜ್ಯ ಪತ್ರ ಪ್ರಕಟಣೆ ದಿನಾಂಕ: 01.11.2018. (2) ಈ ಕಛೇರಿಯ ಅಂತಿಮ ನೋಟೀಸ್ ದಿನಾಂಕ: 24.11.2023.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ **M/s. SVS Properties India Pvt. Ltd.,** Mr. G Prashanth Raju, No. 216/13, Suraj Towers, 4th Floor, 27th Cross, 3rd Block, Jayanagar, Bengaluru-560011 ಆದ ನೀವು ಜಾರಕ ಬಂಡೆ ಕಾವಲು ಗ್ರಾಮದ ಸರ್ವೆ ನಂ. 64/4 ರಿಂದ 64/9ರವರೆಗೆ ಆಕ್ಷೇಪಣೆ ಸಲ್ಲಿಸಿರುತ್ತೀರಿ. ತಮಗೆ ವಿಚಾರಣೆಗೆ ಹಾಜರಾಗುವಂತೆ ಉಲ್ಲೇಖದಂತೆ ಅಂತಿಮ ನೋಟೀಸ್ ಮೂಲಕ ತಿಳಿಸಲಾಗಿರುತ್ತದೆ. ತಮಗೆ ಕಳುಹಿಸಿದ ಅಂತಿಮ ನೋಟಿಸ್‌ಗಳು ಕಛೇರಿಗೆ ವಾಪಸ್ಸು ಬಂದಿರುತ್ತದೆ. ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಯುತ್ತಿರುತ್ತದೆ. ಆದ್ದರಿಂದ ಸದರಿ ಪ್ರಕಟಣೆಯನ್ನು **'ಅಂತಿಮ ನೋಟಿಸ್'** ಎಂದು ಭಾವಿಸಿ, ತಮ್ಮಲ್ಲಿ ಇರುವ ದಾಖಲಾತಿಗಳೊಂದಿಗೆ **ದಿನಾಂಕ: 04.12.2023ರಂದು ಮಧ್ಯಾಹ್ನ 3.30ಕ್ಕೆ** ವಿಚಾರಣೆಗೆ ಹಾಜರಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದೆಂದು ಈ ಮೂಲಕ ತಿಳಿಯಪಡಿಸಿದೆ. ತಪ್ಪಿದಲ್ಲಿ ಹಾಲಿ ಲಭ್ಯವಿರುವ ಭೂದಾಖಲೆಗಳಂತೆ ಸಂಬಂಧಪಟ್ಟವರಿಗೆ ಭೂ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಸಹಿ/–ವಿಶೇಷ ಭೂಸ್ವಾಧೀನಾಧಿಕಾರಿಗಳು–4,
ಡಾ॥ ಕೆ.ಶಿವರಾಮಕಾರಂತ ಬಡಾವಣೆ, ಬೆಂ.ಅ.ಪ್ರಾ., ಬೆಂಗಳೂರು.

ಪುರಸಭಾ ಕಾರ್ಯಾಲಯ ಮಾಗಡಿ

ದೂರವಾಣಿ : 080 –27745221 ಫ್ಯಾಕ್ಸ್ : 080–27745199
ಇಮೇಲ್: tmc_2007magadi@yahoo.co.in ವೆಬ್‌ಸೈಟ್: www.magaditown.gov.in

ಸಂಖ್ಯೆ : ಪು.ಕಾ.ಮಾ./ಕಿ.ಅ./ಟೆಂಡರ್/ಸಿಆರ್/01/23–24 ದಿನಾಂಕ : 27–11–2023

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮಾಗಡಿ ಪುರಸಭಾ ವ್ಯಾಪ್ತಿಯಲ್ಲಿ 2023–24 ನೇ ಸಾಲಿನ ಎಸ್.ಎಫ್.ಸಿ. (ಕು.ನೀ.) ಅನುದಾನದಡಿ 2023–24 ನೇ ಸಾಲಿನ 15 ನೇ ಹಣಕಾಸು ಅನುದಾನ ಮತ್ತು 2023–24 ನೇ ಸಾಲಿನ ಎಸ್.ಎಫ್.ಸಿ. ಶೇ. 24.10 ಯೋಜನೆಯ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಅನುದಾನದಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳಾದ 1) DMA/2023-24/OW/WORK_INDENT7734, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 14.00, ಇ.ಎಂ.ಡಿ. ಮೊತ್ತ : 35,000/– ನಿರ್ವಹಿಸಲು, 2) DMA/2023-24/OW/WORK_INDENT7727, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 7.80, ಇ.ಎಂ.ಡಿ. ಮೊತ್ತ : 9,750/–, 3) DMA/2023-24/RD/WORK_INDENT7737, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 20.25, ಇ.ಎಂ.ಡಿ. ಮೊತ್ತ : 25,313/–, 4) DMA/2023-24/WS/WORK_INDENT7742, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 25.60, ಇ.ಎಂ.ಡಿ. ಮೊತ್ತ : 51,200/–, 5) DMA/2023-24/WS/WORK_ INDENT7543, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 9.50, ಇ.ಎಂ.ಡಿ. ಮೊತ್ತ : 11,875/–, 6) Development Work of Sanitary Landfill at Solid Waste Disposal Landfill Site in Magadi Town, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 35.10, ಇ.ಎಂ.ಡಿ. ಮೊತ್ತ : 70,200/–, 7) DMA/2023-24/RD/WORK_INDENT7759, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 2.98, ಇ.ಎಂ.ಡಿ. ಮೊತ್ತ : 7,450–, 8) DMA/2023-24/WS/WORK_INDENT 7763, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 1.34, ಇ.ಎಂ.ಡಿ. ಮೊತ್ತ : 3,350/–, 9) DMA/2023-24/WS/WORK_INDENT6789, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 1.50, ಇ.ಎಂ.ಡಿ. ಮೊತ್ತ : 3,750/–, ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು 2000 ರಂತೆ ಕರ್ನಾಟಕ ಲೋಕೋಪಯೋಗಿ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಗುತ್ತಿಗೆದಾರರು / ಏಜನ್ಸಿರವರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : https://www.kppp.karnataka.gov.in ಪೋರ್ಟ್‌ಲ್‌ನಲ್ಲಿ ಕೆ.ಡಬ್ಲ್ಯೂ–1 & ಕೆ.ಡಬ್ಲ್ಯೂ–2 ರ ನಿಯಮಗಳಂತೆ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದು. ಕಾಮಗಾರಿಗಳ ವಿವರ ಹಾಗೂ ಪ್ರಕಟಣೆ ವಿವರಗಳನ್ನು ಜಿಲ್ಲಾ ಟೆಂಡರ್ ಬುಲೆಟಿನ್, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ ಹಾಗೂ ಪುರಸಭೆ ಮಾಗಡಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ : https://www.magaditown.mrc.gov.in ನಲ್ಲಿ ವೀಕ್ಷಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 14–12–2023 ರ ಸಂಜೆ 5.30 ಗಂಟೆಗೆ, ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ತೆರೆಯುವ ದಿನಾಂಕ : 16–12–2023 ರ ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.

ಸಹಿ/– ಆಡಳಿತಾಧಿಕಾರಿ, ಪುರಸಭೆ, ಮಾಗಡಿ.
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಮಾಗಡಿ.
ಡಿಐಪಿಆರ್/ರಾಮನಗರ/322/ಮಣಿಪಾಲ್/2023–24

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು – 562110
ದೂರವಾಣಿ: 080–29599998 e-mail : forest.brzp@gmail.com

ಸಂ: ಎ3/ಬಿಯುಡಿ/ಟೆಂಡರ್/ಸಿಆರ್–32/2022–23 ದಿನಾಂಕ: 01.12.2023

ಇ–ಟೆಂಡರ್ ಪ್ರಕಟಣೆ

2023–24ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಮುಂಗಡ ಕಾಮಗಾರಿ, ಸಾರ್ವಜನಿಕರಿಗೆ ವಿತರಣೆಗೋಸ್ಕರ ಸಸಿ ಬೆಳೆಸುವ (ಆರ್.ಎಸ್.ಪಿ.ಡಿ.) ಯೋಜನೆಯಡಿ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸುವ ಕಾಮಗಾರಿ ಮತ್ತು ರಾಷ್ಟ್ರೀಯ ಕೃಷಿ ವಿಕಾಸ (ಆರ್.ಕೆ.ವಿ.ವೈ.) ಯೋಜನೆಯಡಿ ನರ್ಸರಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪೋರ್ಟಲ್ http://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 16–12–2023 ಅಪರಾಹ್ನ 5.00 ರವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 18–12–2023ರ ಅಪರಾಹ್ನ 5.00 ಗಂಟೆಗೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳನ್ನು ಪೂರೈಸದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 19.12.2023 ರಂದು ಅಪರಾಹ್ನ 5.00 ಗಂಟೆಗೆ ತೆರೆಯಲಾಗುವುದು.

ಮೇಲ್ಕಂಡ ದಿನಾಂಕಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ ಇದೇ ಪ್ರಕಟಣೆಯ ಷರತ್ತುಗಳಿಗೊಳಪಟ್ಟು ದಿನಾಂಕ: 30.12.2023ರ ಅಪರಾಹ್ನ 4.00 ಗಂಟೆವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು. ತಾಂತ್ರಿಕ ಬಿಡ್‌ನ್ನು ದಿನಾಂಕ: 01.01.2024ರಂದು ಅಪರಾಹ್ನ 5.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 02.01.2024ರಂದು ಅಪರಾಹ್ನ 5.00 ಗಂಟೆಗೆ ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ವಿಭಾಗ
ಬೆಂಗಳೂರು ಗ್ರಾಮಾಂತರ

ವಾಸಾಸಂಇ/ವಾಪ್ರ/2369/ಆಕಾರ್/2023–24

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಅಗ್ರಹಾರ ಟ್ಯಾಂಕ್‌ಬಂಡ ರಸ್ತೆ. ಬಿನ್ನಿಪೇಟೆ, ಬೆಂಗಳೂರು–560023
ಜಿಲ್ಲೆ: ಬೆಂಗಳೂರು ರಾಜ್ಯ: ಕರ್ನಾಟಕ
ಇ–ಮೇಲ್: apmcfv@rediffmail.com ದೂರವಾಣಿ: 080–26704150, 26707575

ಸಂ: ಹಹೂಮತ(ವಿ)ಕೃಉಮಾಸ(ಬೆಂ)/1867/2023–24 ದಿನಾಂಕ: 02.12.2023

ಪ್ರಕಟಣೆ

ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಪತ್ರ ಸಂ: ಕೃಮಾಇ/ಅಭಿವಿ–1/ಇ.ಆ.20118/2023 ದಿ:01–12–2023ರಲ್ಲಿ ಹಂಚಿಕೆಗೆ ಅನುಮತಿ ನೀಡಿದರನ್ವಯ, ಸಮಿತಿಯ ವ್ಯಾಪ್ತಿಯ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಈ ಕೆಳಕಂಡ ಅಂಗಡಿ–ವ–ಗೋದಾಮುಗಳನ್ನು ಗರಿಷ್ಠ 55 ತಿಂಗಳ ಅವಧಿಗೆ, 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳಿಗೊಮ್ಮೆ ಪ್ರತಿಶತ 5 ರಷ್ಟು ಲೀವ್–ಅಂಡ್–ಲೈಸೆನ್ಸ್ ದರಗಳನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಲೀವ್–ಅಂಡ್–ಲೈಸನ್ಸ್ ಆಧಾರದ ಮೇಲೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಾವಳಿ 2004ರ ನಿಯಮ–13 ರನ್ವಯ ಹಂಚಿಕೆ ಮಾಡಲು ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಪರವಾನಗಿ ಪಡೆದು ಅಧಿಸೂಚಿಸಲ್ಪಟ್ಟ ವಿವಿಧ ಹಣ್ಣುಗಳ ವ್ಯಾಪಾರ ವಹಿವಾಟು ನಡೆಸುತ್ತಿರುವ ಹಾಗೂ ಸದರಿ ಮಾರುಕಟ್ಟೆ ಪ್ರಾಂಗಣದಲ್ಲಿ ವಹಿವಾಟು ನಡೆಸಲು ಅರ್ಹತೆ ಹೊಂದಿರುವ ಹಣ್ಣುಗಳ ವ್ಯಾಪಾರ ವಹಿವಾಟು ನಡೆಸುವ ಇಲಾಖೆಯಿಂದ ಲೈಸನ್ಸ್ ಪಡೆದ ಅರ್ಹ ಪೇಟೆಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಅಂಗಡಿ–ವ–ಗೋದಾಮುಗಳ ಸಂಖ್ಯೆ	ನಿವೇಶನ ಸಹಿತ ಕಟ್ಟಡದ ವಿಸ್ತೀರ್ಣ (ಚ.ಅಡಿ)	ಅಂಗಡಿ–ವ–ಗೋದಾಮುಗಳ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ (ರೂ.ಗಳಲ್ಲಿ)	ಅಂಗಡಿ–ವ–ಗೋದಾಮುಗಳ ಲೀವ್ ಅಂಡ್ ಲೈಸನ್ಸ್ ಶುಲ್ಕದ 02 ತಿಂಗಳುಗಳ ಮುಂಗಡ ಮೊತ್ತ (ರೂ.ಗಳಲ್ಲಿ)
1.	ಎಫ್–56	1400.00	33,600–00	67,200–00
2.	ಇ–32	765.00	26,500–00	53,000–00

ಷರತ್ತು ಮತ್ತು ನಿಬಂಧನೆಗಳು:–

1. ಅಂಗಡಿ–ವ–ಗೋದಾಮುನ್ನು ಲೀವ್ & ಲೈಸನ್ಸ್ ಆಧಾರದ ಮೇಲೆ ಹಂಚಿಕೆ ಪಡೆಯಲು ಇಚ್ಚಿಸುವ ಲೈಸನ್ಸ್ ಹೊಂದಿರುವ ಹಾಗೂ ಸದರಿ ಮಾರುಕಟ್ಟೆ ಪ್ರಾಂಗಣದಲ್ಲಿ ವಹಿವಾಟು ನಡೆಸಲು ಅರ್ಹತೆ ಹೊಂದಿರುವ ಹಣ್ಣುಗಳ ವ್ಯಾಪಾರ ವಹಿವಾಟು ನಡೆಸುವ ಇಲಾಖೆಯಿಂದ ಲೈಸನ್ಸ್ ಪಡೆದ ಅರ್ಹ ಪೇಟೆಕಾರ್ಯಕರ್ತರುಗಳು **ದಿನಾಂಕ: 15–12–2023 ರಂದು ಸಂಜೆ 4.30** ಗಂಟೆಯೊಳಗಾಗಿ ನೋಂದಣಿ ಶುಲ್ಕ ರೂ.500/– ಗಳಿಗೆ (ರೂ. ಐದು ನೂರು ಮಾತ್ರ) **(ಮರುಪಾವತಿಸಲಾಗುವುದಿಲ್ಲ) "ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ(ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು".** ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. ಈ ಹಿಂದೆ ಸಮಿತಿಯಲ್ಲಿ ನೋಂದಾಯಿಸಿಕೊಂಡವರು ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.
2. ನೊಂದಾಯಿತ ಅರ್ಹ ಪೇಟೆಕಾರ್ಯಕರ್ತರು ಶೇ.18 ರಂತೆ ಜಿ.ಎಸ್.ಟಿ. ಸೇರಿ ಒಟ್ಟು ಅರ್ಜಿ ಶುಲ್ಕ ರೂ.1180–00 (ರೂ. ಒಂದು ಸಾವಿರದ ನೂರ ಎಂಬತ್ತು ಮಾತ್ರ) ಗಳನ್ನು **(ಮರುಪಾವತಿಸಲಾಗುವುದಿಲ್ಲ) "ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ(ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು".** ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಸಲ್ಲಿಸಿ ನಮೂನೆ–III ರ ಫಾರಂನ್ನು ಪಡೆದು, ಭರ್ತಿ ಮಾಡಿದ ನಮೂನೆ–III ರೊಂದಿಗೆ ಲೀವ್–ಅಂಡ್–ಲೈಸನ್ಸ್ ಶುಲ್ಕದ **02 ತಿಂಗಳ ಲೀವ್–ಅಂಡ್–ಲೈಸನ್ಸ್ ಶುಲ್ಕ** ಮುಂಗಡ ಮೊತ್ತವನ್ನು ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ(ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇವರ ಹೆಸರಿಗೆ ಡಿ.ಡಿ. ಪಡೆದು ಸದರಿ ಡಿ.ಡಿ. ಹಾಗೂ ನಿಗಧಿ ಪಡಿಸಿದ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಲು ಕೊನೆಯ **ದಿ: 22–12–2023ರಂದು ಸಂಜೆ 4.00** ಗಂಟೆಯವರೆಗೆ.
3. ಅಂಗಡಿ–ವ–ಗೋದಾಮು ಹಂಚಿಕೆ ಕೋರಿ ಸಲ್ಲಿಸಿದ ಅರ್ಜಿಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿನ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004 ನಿಯಮ 8ರಲ್ಲಿ ನಿಗಧಿಪಡಿಸಿರುವಂತೆ ಲೈಸನ್ಸ್ ಅರ್ಹತೆ ಮತ್ತು ಮಾರುಕಟ್ಟೆ ಶುಲ್ಕ / ಬಳಕೆದಾರರ ಶುಲ್ಕ ಪಾವತಿಯ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು.
4. ಕಳೆದ ಮೂರು ವರ್ಷಗಳ ಅಂದರೆ, 2020–2021, 2021–2022 ಮತ್ತು 2022–2023ನೇ ಸಾಲಿನಲ್ಲಿ ಸಮಿತಿಗೆ ಪಾವತಿಸಿರುವ ಮಾರುಕಟ್ಟೆ ಶುಲ್ಕ / ಬಳಕೆದಾರರ ಶುಲ್ಕದ ವಿವರಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಸಮಿತಿಯಿಂದ ದಲ್ಲಾಲರ ಪರವಾನಗಿ ಪಡೆದ ಬಗ್ಗೆ ವಿವರಗಳೊಂದಿಗೆ ಲೈಸನ್ಸ್ ಪ್ರತಿಯನ್ನು ಲಗತ್ತಿಸತಕ್ಕದ್ದು.
5. ಏಕವ್ಯಕ್ತಿ ಅಥವಾ ಪಾಲುದಾರಿಕೆ ಸಂಸ್ಥೆಯಾದರೆ ಒಂದೇ ಸಂಸ್ಥೆಗೆ ಒಂದಕ್ಕಿಂತ ಹೆಚ್ಚಿಗೆ ಮಳಿಗೆ / ನಿವೇಶನ ಹಂಚಿಕೆ ಮಾಡಲಾಗುವುದಿಲ್ಲ. ನಿವೇಶನಕ್ಕಾಗಿ ಅರ್ಜಿ ಸಲ್ಲಿಸುವವರು ಪ್ರಾಂಗಣದಲ್ಲಿ ಯಾವುದೇ ಮಳಿಗೆ / ನಿವೇಶನವನ್ನಾಗಲೀ ಹೊಂದಿರಬಾರದು ಹಾಗೂ ಮಳಿಗೆ / ನಿವೇಶನವನ್ನಾಗಲೀ ಹೊಂದಿರುವ ಸಂಸ್ಥೆಯಲ್ಲಿ ಪಾಲುದಾರರಾಗಿದ್ದರೂ ಹಂಚಿಕೆಗೆ ಪರಿಗಣಿಸಲಾಗುವುದಿಲ್ಲ.
6. ಅರ್ಜಿದಾರರು ಹಂಚಿಕೆಗೆ ಕೋರಿರುವ ಮಳಿಗೆ ಸಂಖ್ಯೆ ಹಂಚಿಕೆಗೆ ಲಭ್ಯವಾಗದಿದ್ದಲ್ಲಿ, ಅನ್ವಯಿಸುವ ಬೇರೆ ಅಂಗಡಿ–ವ–ಗೋದಾಮು ಹಂಚಿಕೆಗೆ ಪರಿಗಣಿಸಲಾಗುವುದು. ಈ ಕುರಿತು ಅರ್ಜಿದಾರರು ಅಫಿಡವಿಟ್ ಸಲ್ಲಿಸತಕ್ಕದ್ದು.
7. ಸಮಿತಿಯು ಅಂಗಡಿ–ವ–ಗೋದಾಮು ಹಂಚಿಕೆಯನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
8. ಅಂಗಡಿ–ವ–ಗೋದಾಮನ್ನು ನಿಯಮಾನುಸಾರ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆ ಪಡೆದು ಹಂಚಿಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ
ಸಹಿ/– ಆಡಳಿತಾಧಿಕಾರಿಗಳು
DIPR/CP/2371/SPAN/2023-24


ಹುಬ್ಬಳ್ಳಿಯ ಗೋಪನಕೊಪ್ಪದ ಮಹಾಲಕ್ಷ್ಮಿ ಬಡಾವಣೆಯಲ್ಲಿ ಗೊಂಬೆ ಕುಣಿತ ಕಲಾವಿದರು ವಾಸವಾಗಿರುವ ಜೋಪಡಿಗಳು


ಕಲಬುರ್ಗಿಯಲ್ಲಿ ಗಾರುಡಿ ಗೊಂಬೆ ಕುಣಿತ


ಹಗಲುವೇಷ ಕಲಾವಿದರು

ಬೊಂಬೆಯಾಡಿಸಿ ದಣಿದೋರು...

ವೃತ್ತಿ ಅರಸಿ, ಅತ್ತಿತ್ತ ಓಡಾಡುವುದರಿಂದಲೇ ಅಲೆಮಾರಿ ಕಲಾವಿದರಿಗೆ ವಾಸಕ್ಕೆ ಮನೆಯ ವ್ಯವಸ್ಥೆ ಮಾಡಿಕೊಳ್ಳಲು ಆಗುವುದಿಲ್ಲ. ಕಾಯಂ ವಿಳಾಸದ ಕೊರತೆ, ಓದು ಬರೆಹದ ಕೊರತೆಯಿಂದಾಗಿ ಸರ್ಕಾರದ ಯಾವ ಯೋಜನೆಗಳೂ ಇವರ ಬಳಿ ತಲುಪುತ್ತಿಲ್ಲ

ಒಂದನೇ ಪುಟದಿಂದ...

ಮೈಸೂರು ದಸರಾ ಮೆರವಣಿಗೆಯಲ್ಲೂ ಕುಣಿಯುವ ಇವರೆಲ್ಲ ಒಂದು ತಿಂಗಳು ಊರ ಹೊರಗೆ ಬಿಡಾರ ಹಾಕಿ, ಒಲೆ ಹೂಡಿ ತಮ್ಮ ಹೊಟ್ಟೆಪಾಡು ನೋಡಿಕೊಳ್ಳುತ್ತಾರೆ. ಸುತ್ತಲಿನ ಗ್ರಾಮಗಳಲ್ಲಿ ವೇಷಧರಿಸಿ ಹೋಗಿ, ಕಾಳು ಕಡಿ ಸಂಗ್ರಹಿಸಿಕೊಂಡು ಬರುತ್ತಾರೆ. ಈಗ ಜನರು ಕಾಳು ಕಡಿ, ದವಸ ಧಾನ್ಯಗಳನ್ನೆಲ್ಲ ಕೊಡುವುದಿಲ್ಲ. ಒಂದೆರಡು ರೂಪಾಯಿ ನಾಣ್ಯವೊ, ಐದೋ ಹತ್ತೋ ರೂಪಾಯಿಗಳನ್ನೋ ನೀಡುತ್ತಾರೆ. ಇದರಿಂದ ದಿನ ಕಳೆಯುವುದು ಕಷ್ಟವಾಗುತ್ತದೆ' ಎನ್ನುತ್ತಲೇ ಲೆಕ್ಕಾಚಾರದಲ್ಲಿ ತೊಡಗುತ್ತಾರೆ.

ಯಾವ ಕಾರ್ಯಕ್ರಮಗಳೂ ಇರದಿದ್ದಾಗ ಪುರುಷರು ಬಟ್ಟೆ ವ್ಯಾಪಾರ ಮಾಡುತ್ತಾರೆ. ಮೊದಲೆಲ್ಲಾ ಹಳ್ಳಿಗಳಲ್ಲಿ ಬಟ್ಟೆ ಅಂಗಡಿಗಳಿರುತ್ತಿರಲಿಲ್ಲ. ಇವರು ಹೀಗೆ ಮಾರುವುದನ್ನು ಗಂಟಿನ ಬಟ್ಟೆ ಎಂದೇ ಕರೆಯುತ್ತಿದ್ದರು. ದಿನದ ಅಗತ್ಯಗಳಾದ ಒಳ ಉಡುಪು, ಕೈವಸ್ತ್ರ, ಅಂಗವಸ್ತ್ರಗಳೆಲ್ಲ ಇವರೇ ಮಾರಾಟ ಮಾಡುತ್ತಿದ್ದರು. ಇದೀಗ ಹೋಬಳಿಗೆ ಹಲವು ಬಟ್ಟೆ ಅಂಗಡಿಗಳಾಗಿರುವುದರಿಂದ ಇವರನ್ನೇ ಅವಲಂಬಿಸುವವರು ಕಡಿಮೆಯಾಗಿದ್ದಾರೆ. ನಗರೀಕರಣದ ಪರಿಣಾಮವೆಂದರೆ ಇಂಥ ತಳಸಮುದಾಯಗಳ ದಿನದ ರೊಟ್ಟಿಯನ್ನು ಕಸಿದಿರುವುದು.

ತಾವು ಬಿಡಾರ ಬಿಟ್ಟಿರುವ ಅಥವಾ ಸದ್ಯಕ್ಕೆ ನೆಲೆಯೂರಿರುವ (ಹುಬ್ಬಳ್ಳಿಯಲ್ಲಿ ಮೂರು ದಶಕಗಳಿಂದಲೂ ಅಲೆಮಾರಿಗಳು ಗೋಪನಕೊಪ್ಪದ ಮಹಾಲಕ್ಷ್ಮಿ ಬಡಾವಣೆಯಲ್ಲಿ ಖಾಸಗಿ ಜಮೀನೊಂದರಲ್ಲಿ ಒಂದಷ್ಟು ಗುಡಿಸಲುಗಳನ್ನು ಹಾಕಿಕೊಂಡು ನೆಲೆಸಿದ್ದಾರೆ.) ಸುತ್ತಮುತ್ತಲಿನ ಹಳ್ಳಿಗಳನ್ನು ಹಂಚಿಕೊಳ್ಳುತ್ತಾರೆ. ಆ ಹಳ್ಳಿಗಳಲ್ಲಿ ಹಗಲುವೇಷ ಧರಿಸಿ, ರಾಮಾಯಣದ ಕತೆಗಳನ್ನು ಹಾಡಿ, ಆಡಿ ಬರುತ್ತಾರೆ. ಊರವರು ನೀಡುವ ಹಣವೇ ಇವರಿಗೆ ಆಧಾರ.

ನೆಲೆಯೂರುವುದು ಎಂದರೆ ಶಿಸ್ತಿನ ಮನೆಗಳಿವೆ ಅಂತಲ್ಲ, ಇಲ್ಲಿ ನೆಲಹಾಸು ಇರುವುದಿಲ್ಲ. ಮಣ್ಣಿನ ಗೋಡೆಗಳಿಗೆ ಹುಲ್ಲಿನ ಚಾವಣಿ ಹಾಕಿರುತ್ತಾರೆ. ಬಿಸಿಲಿನ ಝಳ ತಡೆಯಬಹುದು. ಮಳೆ ಬಂದರೆ ಬದುಕಲಾಗದು. ಹತ್ತಿರದ ಗುಡಿಗಳಲ್ಲಿ ಆಶ್ರಯ ಪಡೆಯುತ್ತಾರೆ. ಸೋರುವ ಈ ಸೂರುಗಳಲ್ಲಿ ಮಲಗುವುದು ಸಾಧ್ಯವೇ ಇಲ್ಲ. ಕೂಡಿಟ್ಟ ಸೌದೆಯೂ ತೊಯ್ದು ಅಡುಗೆ ಮಾಡುವುದೇ ಹರಸಾಹಸವಾಗುತ್ತದೆ. ಊರೆಲ್ಲ ಓಡಾಡಿ, ಪಾತ್ರೆ ಮಾರಾಟ ಮಾಡುವ ಇವರ ಸಂಸಾರ ಮಾತ್ರ ನಾಲ್ಕಾರು ಪಾತ್ರೆಗಳಲ್ಲಿಯೇ ಮುಗಿದುಹೋಗುತ್ತದೆ.

ವೃತ್ತಿ ಅರಸಿ, ಅತ್ತಿತ್ತ ಓಡಾಡುವುದರಿಂದಲೇ ವಾಸಕ್ಕೆ ಮನೆಯ ವ್ಯವಸ್ಥೆ ಮಾಡಿಕೊಳ್ಳಲು ಆಗುವುದಿಲ್ಲ. ಪಡಿತರ ಚೀಟಿ ಇಲ್ಲದೇ ಇರುವುದು, ಕಾಯಂ ವಿಳಾಸದ ಕೊರತೆ, ಓದು ಬರೆಹದ ಕೊರತೆಯಿಂದಾಗಿ ಸರ್ಕಾರದ ಯಾವ ಯೋಜನೆಗಳೂ ಇವರ ಬಳಿ ತಲುಪುವುದಿಲ್ಲ. ಇವರ ಬಳಿ ಆಧಾರ್ ಕಾರ್ಡ್‌ಗಳಿವೆ. ವೋಟರ್ ಐಡಿಗಳಿವೆ. ಮತಕೇಳಲು ಬರುವ ನಾಯಕರು ಇವರನ್ನು ಭೇಟಿಯಾಗುವುದು ತಪ್ಪಿಸುವುದೇ ಇಲ್ಲ. ಮೆರವಣಿಗೆಗಳಿಗೆ ಕರೆದು ಅಂಗೈನಲ್ಲಿ ಒಂದಷ್ಟು ಸಾವಿರದಷ್ಟು ನೋಟುಗಳನ್ನು ಮುಚ್ಚಿಡುತ್ತಾರೆ. ಅದನ್ನು ಇಡೀ ತಂಡ ಹಂಚಿಕೊಳ್ಳಬೇಕು.

ಮತ ಪಡೆದ ನಾಯಕರು ಮತ್ತೆ ಮತ ಕೇಳಲು ಬಂದಾಗಲೇ ಮುಖಾಮುಖಿ ಮಾತುಗಳಾಗುತ್ತವೆ. ಕಲಾವಿದರನ್ನು ಗುರುತಿಸಿ ಪ್ರದರ್ಶನಕ್ಕೆ ಅವಕಾಶ ನೀಡುವುದು, ಇತರ ಅನುಕೂಲಗಳನ್ನು ಮಾಡಿಕೊಡುವುದಾಗಿಯೂ ಭಾಷೆ ನೀಡುತ್ತಾರೆ. ಹೇಳಿದ ಎಲ್ಲವನ್ನೂ ಸ್ಥಳೀಯ ನಾಯಕರು ಮಾಡುವುದಿಲ್ಲ. ಕೆಲವೊಮ್ಮೆ ಸಾಲ ಮಾಡಿಕೊಂಡು ಉತ್ಸವಗಳಿಗೆ ಹೋಗುತ್ತಾರೆ. ಗಾಡಿಖರ್ಚು, ಊಟ ಇತ್ಯಾದಿಗಳನ್ನು ಕಳೆದು, ಹೋಗಿ ಬರುವ ಖರ್ಚಿಗೆ ಮಾಡಿದ ಸಾಲ ತೀರಿಸುವುದರಲ್ಲಿಯೇ ಕೈಖಾಲಿಯಾಗಿರುತ್ತದೆ.

ಶಾಸಕರು, ಸಂಸದರು ಇವರಿಗೆಲ್ಲ ಮನೆ ನೀಡುವ ಭರವಸೆ ನೀಡುತ್ತಾರೆಯೇ ಹೊರತು ಯಾವುದೂ ಕಾರ್ಯಗತವಾಗಿಲ್ಲ. ಹೀಗಾಗಿ ಎಲ್ಲೂ ಇವರಿಗೆ ಪಕ್ಕಾಮನೆಯಿಲ್ಲ. ತಾತ್ಕಾಲಿಕ ಮನೆಯೇ ಇವರಿಗೆ 'ಕಾಯಂ' ಆಗಿದೆ.

ಯಾರಿವರು, ಎಲ್ಲಿಂದ ಬಂದರು? ಸಾಹಿತ್ಯದ ಮೂಲವೇನು? ಎಂಬ ಪ್ರಶ್ನೆಗಳನ್ನಿರಿಸಿಕೊಂಡು ಸಾಕಷ್ಟು ಅಧ್ಯಯನಗಳು ಹಂಪಿ ವಿಶ್ವವಿದ್ಯಾಲಯದಲ್ಲಿ ನಡೆದಿವೆ.

ತೆಲುಗುಮಿಶ್ರಿತ ಕನ್ನಡ ಭಾಷೆಯಲ್ಲಿ ಮಾತನಾಡುವ ಇವರು ತೆಲುಗು ಮೂಲದ ಮಹಾಕಾವ್ಯಗಳನ್ನು ಕನ್ನಡಕ್ಕೆ ಅನುವಾದಿಸಿ ಹಾಡುತ್ತಾರೆ. ಪಾತ್ರವಾಡುತ್ತಾರೆ. ಬೊಂಬೆಯನ್ನು ಹೊತ್ತುಕೊಂಡೂ ಮೆರವಣಿಗೆಯಲ್ಲಿ ನಡೆಯುತ್ತಾರೆ. ಮಹಾಕಾವ್ಯವನ್ನು ಹಾಡುವವರು, ನಟಿಸುವವರು ಹಗಲುವೇಷಗಾರರು ಎಂದೆನಿಸಿಕೊಳ್ಳುತ್ತಾರೆ. ಬೊಂಬೆ ಹೊರುವವರು ಗಾರುಡಿಗರು ಎಂದೂ, ಬೇಟೆಯಾಡುವವರು, ಕತ್ತಿವರಸೆ ಮಾಡುವವರು ವೇಷಗಾರರು ಎಂದೂ ಕರೆಯಿಸಿಕೊಳ್ಳುತ್ತಾರೆ. ಒಟ್ಟಾರೆಯಾಗಿ ಈ ಅಲೆಮಾರಿ ಬುಡಕಟ್ಟನ್ನು ಬುಡ್ಗ ಜಂಗಮ ಎಂದೂ ಕರೆಯಲಾಗುತ್ತದೆ.

> **ನಮ್ಮ ಜೋಪಡಿಗಳಿಗೆ ವಿದ್ಯುತ್ ಸಂಪರ್ಕ ಇಲ್ಲ. ಪಡಿತರ ಸೀಮೆಎಣ್ಣೆಯನ್ನೂ ನಿಲ್ಲಿಸಿದ್ದಾರೆ. ಮೇಣದಬತ್ತಿ ಹಚ್ಚಿಕೊಂಡು ರಾತ್ರಿ ಕಳೆಯಬೇಕು. ಬೇರೆಯವರ ಜಾಗದಾಗ ಜೋಪಡಿ ಕಟ್ಟೇವಿ. ಅವರು ಖಾಲಿ ಮಾಡಿಸಿದ್ರ ಬೇರೆ ಕಡೆ ಹೋಗಬೇಕು. ವೋಟು ಕೇಳಾಕ ಎಲ್ಲಾರೂ ಬರ್ತಾರ್ರೀ.. ಕಷ್ಟ ಕೇಳಾಕ ಬರೂದಿಲ್ರೀ**
> **ಯಲ್ಲಮ್ಮ,** ಅಲೆಮಾರಿ ಸಮುದಾಯದ ಮಹಿಳೆ



> **ನಮಗೆ ಭೂಮಿ ಇಲ್ಲ. ಅಲೆಮಾರಿ ಜೀವನ. ಕಲೆ ಬಿಟ್ಟು ಬೇರೆ ಜಗತ್ತು ಗೊತ್ತಿಲ್ಲ. ಮಾಸಾಶನ, ಗೌರವಧನ ಸರಿಯಾಗಿ ತಲುಪುತ್ತಿಲ್ಲ. ಬೆರಳೆಣಿಕೆಯಷ್ಟಿರುವ ಸಮುದಾಯವನ್ನು ರಕ್ಷಿಸಬೇಕು. ಅಲೆಮಾರಿಗಳಲ್ಲಿ 115 ಜಾತಿಗಳಿವೆ. ಪರಿಶಿಷ್ಟ ಜಾತಿಯಲ್ಲಿ ಬರುವ ಬುಡ್ಗ ಜಂಗಮ ಸಮುದಾಯವೂ ಸೇರಿದಂತೆ ಕಲೆಯನ್ನು ನಂಬಿರುವವರಿಗೆ ಸರ್ಕಾರ ನೆರವಾಗಬೇಕು.**
> **ಅಮರೇಶ ಹಸಮಕಲ್,** ಮಸ್ಕಿ, ರಾಯಚೂರು



'ಬುಡ್ಗ ಜಂಗಮ ದರ್ಶಿನಿ' ಎಂಬ ಕೃತಿ ರಚಿಸಿರುವ ಬುಡಕಟ್ಟು ಅಧ್ಯಯನ ವಿಭಾಗದ ಪ್ರೊ.ಕೆ.ಎಂ.ಮೇತ್ರಿ ಅವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಹಗಲುವೇಷಗಾರರ ಕುರಿತಂತೆ ಸಾಕಷ್ಟು ಕೆಲಸ ಮಾಡಿದ್ದಾರೆ ಹಾಗೂ ಈ ಸಮುದಾಯದಲ್ಲೇ ಹುಟ್ಟಿ, ಬೆಳೆದ ಪ್ರೊ. ಅಶ್ವರಾಮು ಅವರಂತಹ ಯುವ ಉತ್ಸಾಹಿಗಳಿಗೆ ಉನ್ನತ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಹಗಲುವೇಷಗಾರರ ಕುರಿತಂತೆ ವಿಶ್ವವಿದ್ಯಾಲಯದಿಂದ ಪರಿಚಯ, ನಿಘಂಟಿನ ಕೆಲಸ ನಡೆಯದಿದ್ದರೂ, ಹಲವು ಅಧ್ಯಯನ ಗ್ರಂಥಗಳು ಪ್ರಕಟಗೊಂಡಿವೆ.

ಎಳನಾಡು ಅಂಜನಪ್ಪ ಅವರ 'ಹಗಲುವೇಷಧಾರಿಗಳ ಸಾಂಸ್ಕೃತಿಕ ಅಧ್ಯಯನ', ಬಿ.ಎಂ.ಹೊಸಮನಿ ಅವರ 'ಕರ್ನಾಟಕದಲ್ಲಿ ವೇಷಗಾರರು– ಒಂದು ಸಾಂಸ್ಕೃತಿಕ ಅಧ್ಯಯನ', ಹಿ.ಚಿ. ಬೋರಲಿಂಗಯ್ಯ ಅವರ 'ಕರ್ನಾಟಕ ಜನಪದ ಕಲೆಗಳ ಕೋಶ', ವೆಂಕನಗೌಡ ಅವರ 'ಬಳ್ಳಾರಿ ಮತ್ತು ಆಂಧ್ರ ಗಡಿ ಭಾಗದ ಹಗಲುವೇಷಧಾರಿಗಳು– ಒಂದು ಅಧ್ಯಯನ', ಪ್ರೊ.ಅಶ್ವರಾಮು ಅವರ 'ಬುಡ್ಗ ಜಂಗಮರು–ಒಂದು ಅಧ್ಯಯನ', ಪ್ರತಾಪ ಬಹುರೂಪಿ ಮತ್ತು ಬಾಲಗುರುಮೂರ್ತಿ ಅವರ 'ಬುಡ್ಗ ಜಂಗಮರು' ಕೃತಿಗಳನ್ನು ಓದಿದರೆ ಹಗಲುವೇಷಗಾರರ ಬದುಕು, ಸಂಸ್ಕೃತಿಯ ಆಳ ಅಗಲವನ್ನು ತಿಳಿದುಕೊಳ್ಳಬಹುದು.

1982ರಲ್ಲಿ ಎಚ್.ಎಲ್.ನಾಗೇಗೌಡರು ಜಾನಪದ ಅಕಾಡೆಮಿ ಅಧ್ಯಕ್ಷರಾಗಿದ್ದ ವೇಳೆ ಹಗಲುವೇಷಗಾರ ರಾಮಣ್ಣ ಅವರಿಗೆ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು. ಈ ಸಮುದಾಯವನ್ನು ಗುರುತಿಸುವ ಪ್ರಥಮ ಪ್ರಯತ್ನ ಇದು. ಹಂಪಿ ವಿರೂಪಾಕ್ಷ ಬುಡ್ಗ ಜಂಗಮ ಸಾಂಸ್ಕೃತಿಕ ಹಗಲುವೇಷ ಕಲಾವಿದರ ಸಂಘವನ್ನು ಕಟ್ಟಿ, ಮುನ್ನಡೆಸುತ್ತಿರುವ ಕೆ.ರಾಮು ಕಡ್ಡಿರಾಂಪುರ ಅವರು 2014ರಿಂದ ಮೂರು ವರ್ಷಗಳ ಕಾಲ ಜಾನಪದ ಅಕಾಡೆಮಿಯ ಸದಸ್ಯರಾಗಿದ್ದರು. ಈ ಸಮುದಾಯಕ್ಕೆ ದೊರೆತ ಮೊದಲ ದೊಡ್ಡ ಪ್ರಾತಿನಿಧ್ಯ ಅದಾಗಿತ್ತು. ಪ್ರೊ.ಕೆ.ಎಂ.ಮೇತ್ರಿ ಅವರು ದರೋಜಿ ಬುರ್ರಕಥಾ ಈರಮ್ಮ ಹೆಸರಲ್ಲಿ ದತ್ತಿನಿಧಿ ಸ್ಥಾಪಿಸಿದ್ದಾರೆ. ಅಲೆಮಾರಿ ಸಮುದಾಯಗಳಿಗಾಗಿಯೇ ಪ್ರತ್ಯೇಕ ಅಕಾಡೆಮಿ ಸ್ಥಾಪಿಸಿದರೆ ಮಾತ್ರ ಅವರ ಸಂಸ್ಕೃತಿ ಉಳಿಸುವ ಕೆಲಸ ನಡೆಯುತ್ತದೆ ಎನ್ನುವುದು ಈ ಸಮುದಾಯವನ್ನು ಅಧ್ಯಯನ ಮಾಡಿದವರ ಅಭಿಪ್ರಾಯವಾಗಿದೆ.

ಅಧ್ಯಯನ, ಸಂಶೋಧನೆಗಳಿಂದ ಸಮುದಾಯಗಳ ಬದುಕು ಬದಲಾಯಿತೆ? ಇಲ್ಲವೇ ಇಲ್ಲ. ಈಗಲೂ ಈ ಸಮುದಾಯದ ಮಹಿಳೆಯರು ಊರಲ್ಲಿ ಓಡಾಡಿ, ಕೂದಲು ಸಂಗ್ರಹಿಸಿ, ಪಿನ್ನು ಟಿಕಳಿ, ಪ್ಲಾಸ್ಟಿಕ್ ವಸ್ತುಗಳ ಮಾರಾಟ ಮಾಡುತ್ತಾರೆ. ಮನೆಗೆಲಸವನ್ನೆಲ್ಲ ಪೂರೈಸಿ, ಈ ತಿರುಗಾಟ ಶುರುವಾದರೆ ಬಿಸಿಲು ನೆತ್ತಿಗೇರುವಾಗ ಮನೆಗೆ ಮರಳುತ್ತಾರೆ.

ಹದಿನೈದರಿಂದ ಇಪ್ಪತ್ತೈದು ಕೆಜಿ ಭಾರ ಇರುವ ಗಾರುಡಿ ಗೊಂಬೆ ಹೊತ್ತು ನಡೆಯುವುದು, ಮೈ ತುಂಬ ಬಣ್ಣ ಬಳಿದುಕೊಂಡು, ಪಾತ್ರಕ್ಕೆ ತಕ್ಕ ವೇಷ ಧರಿಸಿ, ಕತೆ ಹೇಳುವುದು; ಇದೆಲ್ಲವೂ ನೋಡಿದಷ್ಟು ಸಲೀಸಲ್ಲ.


ಹುಬ್ಬಳ್ಳಿಯ ಗೋಪನಕೊಪ್ಪದ ಮಹಾಲಕ್ಷ್ಮಿ ಬಡಾವಣೆಯಲ್ಲಿ ಗೊಂಬೆಗಳನ್ನು ಸ್ವಚ್ಛಗೊಳಿಸುವ ದೃಶ್ಯ

ಅತಿ ಭಾರದ ಮುಖವಾಡ, ಪಾತ್ರಕ್ಕೆ ತಕ್ಕುದಾದ ವೇಷ ಧರಿಸಿದಾಗ ಒಳಗಿದ್ದವರಿಗೆ ಬೆವರು ಮಳೆಯ ಹನಿಗಳಂತೆ ತೊಟ್ಟಿಕ್ಕುತ್ತದೆ. ನೀರು ಕುಡಿಯಲೂ ಕಷ್ಟ ಪಡಬೇಕು. ಕೆಲವೊಮ್ಮೆ ರಾಜಕಾರಣಿಗಳು ನಿಗದಿತ ಸಮಯಕ್ಕಿಂತ ತಡವಾಗಿ ಬಂದು, ಕಾರ್ಯಕ್ರಮ ಅಥವಾ ಮೆರವಣಿಗೆ ತಡವಾದರೆ ಇವರ ಜೀವ ಬಾಯಿಗೆ ಬಂದಿರುತ್ತದೆ ಎಂದು ಹುಬ್ಬಳ್ಳಿಯ ಹನುಮಂತಪ್ಪ ಲದ್ದಲ್ ಹೇಳುವರು.

ಈ ಬೊಂಬೆಗಳನ್ನು ಕೇರಳದಿಂದ ಮಾಡಿಸಿ ತರಿಸುತ್ತಾರೆ. ಒಂದು ಗೊಂಬೆ ಮಾಡಿಸಿದರೆ ಒಂದೊಂದು ತಲೆಮಾರೂ ತಮ್ಮ ಜೀವನ ನಿಭಾಯಿಸುತ್ತವೆ. ಸದ್ಯ 20 ಸಾವಿರ ಮೌಲ್ಯದ ಈ ಗೊಂಬೆಗಳನ್ನು ಕೊಳ್ಳಲು ಅವರು ಎಲ್ಲರೂ ಸೇರಿ ಹಣ ಹೂಡಿ ತರುತ್ತಾರೆ. ಕೆಲವೊಮ್ಮೆ ಅಗತ್ಯ ಇರುವಷ್ಟು ಹಣ ಕೂಡದಿದ್ದಾಗ ಎಲ್ಲಾದರೂ ಕೈಸಾಲ ಪಡೆಯುತ್ತಾರೆ. ಬಡ್ಡಿಗೆ ಸಾಲ ಪಡೆಯುವುದರಿಂದ ಬಂದ ಗೌರವಧನವನ್ನೆಲ್ಲ ಮೊದಲು ಸಾಲ ತೀರಿಸಲು ನೀಡಲಾರಂಭಿಸುತ್ತಾರೆ.

ದಿನಗೂಲಿಗೆ ಹೋದವರು ಬಹಳಷ್ಟು ಜನ ತಮ್ಮ ಕಲೆಯಿಂದ ವಿಮುಖರಾಗುತ್ತಿದ್ದಾರೆ. ಆದರೆ ಹೂವಿನ ಹಡಗಲಿಯ ಮೈಲಾರಪ್ಪ ಮತ್ತು ಅವರ ಕುಟುಂಬ, ಈ ಬಗ್ಗೆ ಸ್ಪಷ್ಟವಾಗಿ ಹೇಳುವುದು ಇಷ್ಟು, 'ಹಲವಾರು ತಲೆಮಾರುಗಳಿಂದ ಅನ್ನ ನೀಡಿದ ಕಲೆ ಇದು. ಗಾರುಡಿ ಗೊಂಬೆಗಳಾದರೆ ನಮ್ಮನ್ನು ಕಾಯುತ್ತವೆ ಎನ್ನುವ ನಂಬಿಕೆಯೊಂದಿಗೆ ಬದುಕುತ್ತೇವೆ. ರಾಮಾಯಣದ ಪಾತ್ರಗಳನ್ನು ಆಡುವಾಗ, ಆ ಪಾತ್ರಗಳೇ ನಾವಾದಂತೆ ಇರ್ತೀವಿ. ಇದನ್ನು ಕೈಬಿಟ್ಟರೆ ನಮ್ಮ ಇರುವಿಕೆಗೆ ಏನು ಅರ್ಥವಿದೆ? ನಮ್ಮ ಗುರುತೇ ಈ ಕಲೆ. ಕಲೆ ಬಿಟ್ಟರೆ ಬೇರೆ ಯಾವುದೂ ನಮ್ಮ ಕೈ ಹಿಡಿಯುವುದಿಲ್ಲ. ಕೊನೆಯುಸಿರು ಇರುವವರೆಗೂ ನಮ್ಮ ಮನೆತನದ ಮಕ್ಕಳಿಗೆ ಕಲಿಸುತ್ತಲೇ ಇರುತ್ತೇವೆ. ಜೀವನಕ್ಕೆ ಆಗದಿದ್ದರೂ, ಸೇವೆಗೆ, ಆರಾಧನೆಗಂತೂ ಇದು ಗೊತ್ತಿರಲೇಬೇಕು' ಇದು ಮೈಲಾರಪ್ಪನವರ ಮಾತು ಆದರೂ ಪ್ರತಿ ಕಲಾವಿದ ಇದನ್ನೇ ಹೇಳುತ್ತಾರೆ.

ಸರ್ಕಾರ ಏನು ಕ್ರಮಕೈಗೊಂಡಿದೆ?: ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಈ 2022–23ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 'ಮೂಲ ಸಂಸ್ಕೃತಿ– ಕನ್ನಡ ಸಂಸ್ಕೃತಿ' ಶೀರ್ಷಿಕೆಯಡಿ ತಳ ಸಮುದಾಯದ ವಿಶಿಷ್ಟ ಕಲೆಗಳ ಕುರಿತು ಯುವಕರಿಗೆ 20 ದಿನಗಳ ತರಬೇತಿ ನೀಡಲಾಗಿತ್ತು. ಅದಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಐದು ಕಲಾ ಪ್ರಕಾರ ಗುರುತಿಸಲಾಗಿತ್ತು. ಈ ಭಾಗದಲ್ಲಿ ಹಗಲುವೇಷ ಕಲೆ ಸಮೃದ್ಧವಾಗಿದೆ. ಆದರೆ, ಹಗಲುವೇಷ ಕಲಾವಿದರಿಗೆ ತರಬೇತಿ ದಕ್ಕಿದ್ದು ಬಳ್ಳಾರಿ ಜಿಲ್ಲೆಯಲ್ಲಷ್ಟೇ. ಇದಿಷ್ಟು ಬಿಟ್ಟರೆ, ಸರ್ಕಾರದಿಂದ ಯಾವ ಬೆಂಬಲವೂ ಸಿಕ್ಕಿಲ್ಲ.

'ಬೆಂಗಳೂರು–ತುಮಕೂರು ಹಾಗೂ ಹಾವೇರಿ ಭಾಗದಿಂದ ಗಾರುಡಿ ಗೊಂಬೆಗಳನ್ನು ತಂದು ಕಲೆ ಪ್ರದರ್ಶಿಸುತ್ತಿದ್ದೇವೆ. ಸಿಗುತ್ತಿರುವ ಆದಾಯ ಅಷ್ಟಕ್ಕಷ್ಟೇ. ಈಗ ಬೇರೆ ಉದ್ಯೋಗ ಅನಿವಾರ್ಯ' ಎನ್ನುತ್ತಾರೆ ಗಾರುಡಿಗೊಂಬೆ ಕಲಾವಿದರಾದ ಕಲಬುರಗಿಯ ತಿಪ್ಪಣ್ಣ ವಾಲೀಕಾರ ಹಾಗೂ ವಡಗೇರಾದ ರೆಡ್ಡಿ ಪೂಜಾರಿ. 'ಬೀದರ್ ಜಿಲ್ಲೆಯಲ್ಲಿ ಹಿಂದೆ ಬೊಂಬೆ ಕುಣಿತ ನಡೆಯುತ್ತಿತ್ತು. ಈಗ ಇಲ್ಲಿ ಆ ಕಲೆ ಸಂಪೂರ್ಣ ನಶಿಸಿ ಹೋಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಅದನ್ನು ಬೆಳೆಸಲು ಕ್ರಮ ಕೈಗೊಳ್ಳಬೇಕಿದೆ' ಎನ್ನುತ್ತಾರೆ ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ಅಧ್ಯಕ್ಷ ವಿಜಯಕುಮಾರ ಸೋನಾರೆ.

'ಬೊಂಬೆ ಹಬ್ಬ ಅಂತ ದಕ್ಷಿಣದೊಳಗ ಮನಿಮನಿಯಾಗ ಗೊಂಬಿ ಕುಂದರ್ಸಿ ಪೂಜಾ ಮಾಡ್ತಾರಂತ್ರಿ. ಪ್ರತಿ ಪೂಜಾದಾಗೂ ನಾವೇ ಗೊಂಬಿಯಾಗಿ ಕುಣೀತೀವಿ. ದೇವರಂತೂ ಕಲ್ಲದಾನ. ಅಂವಾ ಇಟ್ಟಂಗ ಇರ್ತೀವಿ. ಕೊನೀತನಾನೂ ಕುಣೀತೀವಿ. ಆದ್ರ ವ್ಯವಸ್ಥೆಯೊಳಗಂತೂ ಮನಷಾರೆ ಅದಾರಲ್ರಿ. ನಮಗೂ ಮನಷಾರಹಂಗ ನೋಡಿದ್ರ, ನಾವೂ ಉಳೀತೀವಿ, ನಮ್ಮ ಕಲೆನೂ ಉಳೀತದ್ರಿ. ಇಲ್ಲಾಂದ್ರ ನಮ್ಮಜೊತಿಗೆ ಮಣ್ಣಾಗ್ತದ್ರಿ. ಮಂದಿ ನಮಗ ಕಣ್ಣರಳಿಸಿ ನೋಡ್ತಾರ. ಸರ್ಕಾರ, ಅಧಿಕಾರಿಗಳು ಕಣ್ತೆರೆದು ನೋಡಿದ್ರ, ನಮ್ಮ ಬಾಳೂ ಹಸನಾದೀತು ಅಂತನಿಸ್ತದ್ರಿ' ಮೈಲಾರಪ್ಪನವರ ಈ ಮಾತು ವ್ಯವಸ್ಥೆಯ ಕಣ್ತೆರೆಸಬೇಕಿದೆ.

ಸಂಘರ್ಷದ ಬದುಕನ್ನೂ ತನ್ನ ಪಾಡು ತನಗಿರಲಿ, ಹಾಡಷ್ಟೇ ನಿಮಗೆ ಸಮರ್ಪಿಸುವೆ ಎಂಬಂತೆ ಈ ಸಮುದಾಯ ಬದುಕುತ್ತಿದೆ. ಮನರಂಜನೆಗೆ, ಮೆರವಣಿಗೆಗೆ ಮೆರುಗು ತರುವ ಈ ಗಾರುಡಿ ಗೊಂಬೆ, ಹಗಲುವೇಷಗಾರರು, ದಲಪಟಾ ಕಲಾವಿದರು, ಬುಡ್ಗ ಜಂಗಮರು ಹೀಗೆ ವಿವಿಧ ಹೆಸರುಗಳಿಂದ ಕರೆಯಲಾಗುವ ಈ ಕಲಾವಿದರ ಬದುಕು ಹಸನಾಗಬೇಕು. ಆ ಕಲೆಯನ್ನೂ ಶಾಶ್ವತವಾಗಿ ಉಳಿಯುವಂತೆ ವಿಶ್ವವಿದ್ಯಾಲಯಗಳಲ್ಲಿ ಪಾಠ ಹೇಳುವಂತಾಗಬೇಕು. ಬೊಂಬೆ ತಯಾರಿ, ರಿಪೇರಿಗಳ ತರಬೇತಿಯೂ ಆಗಬೇಕು ಎನ್ನುವುದು ಸಂಶೋಧಕರ ಅಭಿಪ್ರಾಯ.

ಪೂರ್ವಜರು ಆಂಧ್ರದಿಂದ ಬಂದರು ಎಂದು ಹೇಳುವ ಈ ಅಲೆಮಾರಿಗಳು ಕನ್ನಡದ ಕತೆಗಳಿಗೆ ಧ್ವನಿಯಾಗಿದ್ದಾರೆ. ಕನ್ನಡ ಜನಪದ ಲೋಕದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಅಲಕ್ಷ್ಯದಿಂದ, ನಿರ್ಲಕ್ಷ್ಯದಿಂದ ಇವರೆಲ್ಲ ಇತಿಹಾಸದ ಪುಟ ಸೇರುವಮುನ್ನ ಜನಪದವನ್ನು ಉಳಿಸಬೇಕಿದೆ.

ಬೀದಿಕಲೆಯಲ್ಲ, ಮೌಲ್ಯಗಳ ಗುಚ್ಛ

'ಹಗಲುವೇಷ ಉತ್ತರ ಕರ್ನಾಟಕದೆಲ್ಲಡೆ ಕಾಣಬಹುದು. ಈ ಆಧುನಿಕ ಕಾಲದಲ್ಲೂ ಈ ಕಲೆಗಳ ಬಗ್ಗೆ ಗ್ರಾಮೀಣ ಭಾಗದಲ್ಲಿ ಆಸಕ್ತಿಯಿದೆ. ಆದರೆ, ಪ್ರೋತ್ಸಾಹ ಕಡಿಮೆಯಾಗಿದೆ. ಶಿಷ್ಟ ಕಲಾಪ್ರಕಾರಗಳ ಕಲಾವಿದರಿಗೆ ಸಿಗುವ ಗೌರವ–ಸಮ್ಮಾನ, ಸಂಭಾವನೆ ಇವರಿಗೆ ಸಿಗುವುದಿಲ್ಲ. ಇವೆಲ್ಲ ಬೀದಿ ಕಲೆ ಎಂಬ ಅಸಡ್ಡೆ ಇದಕ್ಕೆಲ್ಲ ಕಾರಣ. ಹೀಗಾಗಿ ಸಮೃದ್ಧ ಕಲೆಗಳೀಗ ಅಳಿವಿನಂಚಿನಲ್ಲಿವೆ' ಎನ್ನುತ್ತಾರೆ ಅಲೆಮಾರಿ ಬುಡಕಟ್ಟು ಜನಪದ ಕಲೆಗಳ ಸಂಶೋಧಕರಾದ ವಿಜಯನಗರದ ದರೋಜಿ ಗ್ರಾಮದ ಪ್ರೊ.ಅಶ್ವರಾಮು.

'ಹಗಲುವೇಷದಲ್ಲಿ ಕಲಾವಿದರು ಬರೀ ಬಣ್ಣಹಾಕಿ ನಟಿಸಲ್ಲ, ಅವರೆಲ್ಲ ಬಹುಮುಖಿ ಕಲಾವಿದರು. ಅವರಲ್ಲಿ ಸಂಗೀತ, ಸಾಹಿತ್ಯ, ಸಂಸ್ಕೃತಿ ಎಲ್ಲವೂ ಮಿಳಿತವಾಗಿದೆ. ಅವರೇ ತಬಲಾ, ಹಾರ್ಮೋನಿಯಂ ನುಡಿಸುತ್ತಾರೆ, ತಮಟೆ ಬಾರಿಸುತ್ತಾರೆ. ಸ್ವಯಂ ಸಂಭಾಷಣೆಯನ್ನೂ ಹೇಳುತ್ತಾರೆ. ಖುದ್ದು ಮೇಕಪ್ ಮಾಡಿಕೊಳ್ಳುತ್ತಾರೆ' ಎನ್ನುತ್ತಾರೆ ಅವರು.

'ಯಾರು ಕಲೆಯನ್ನು ಪ್ರಧಾನ ವೃತ್ತಿಯಾಗಿಸಿಕೊಂಡಿದ್ದಾರೋ ಅಂಥ ಕಲಾವಿದರನ್ನು ಸರ್ಕಾರ ಗುರುತಿಸಿ, ಅವರಿಗೆ ಪ್ರತ್ಯೇಕ ಯೋಜನೆ ರೂಪಿಸಬೇಕು. ಪ್ರಾಥಮಿಕ ಶಾಲೆ–ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ರಂಗ ಶಿಕ್ಷಕರನ್ನಾಗಿ ನೇಮಿಸಬೇಕು. ಅದರಿಂದ ಕಲಾವಿದರಿಗೆ ಜೀವನೋಪಾಯ ಸಿಗುತ್ತದೆ. ವಿದ್ಯಾರ್ಥಿಗಳಿಗೂ ರಾಮ–ಲಕ್ಷ್ಮಣರ ರೂಪ, ಭಾವ, ಗುಣ, ಮೌಲ್ಯಗಳ ಪರಿಚಯವಾಗುತ್ತದೆ' ಎಂಬುದು ಅವರ ಪ್ರತಿಪಾದನೆ.

ನಮ್ಮ ಮಾತೃಭಾಷೆ ತೆಲುಗು. ಭೀಮಾಂಜನೇಯ ಯುದ್ಧ, ಮೋಹಿನಿ– ಭಸ್ಮಾಸುರ, ಸುಂದ– ಉಪಸುಂದರ ವಧೆ, ಜಟಾಸುರ ವಧೆ, ರಾಮಾಯಣ, ಶೂರ್ಪನಖಿ ಗರ್ವಭಂಗ ಸೇರಿದಂತೆ ಎಲ್ಲ ಪ್ರಸಂಗಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿ ಆಡುತ್ತೇವೆ. ಮಹಿಳೆಯರು ಬುರ್ರಾಕಥಾ, ಗಂಗೆ–ಗೌರಿ ಗಾಯನ ಮಾಡಿ ಜೀವನ ಮಾಡುತ್ತಾರೆ. ವೇದಿಕೆಗಳಲ್ಲಿ 25 ನಿಮಿಷಗಳ ಕಲಾ ಪ್ರದರ್ಶನ ನೀಡುವ ಕಲಾವಿದರಿಗೆ ಸಿಗುವ ದೊಡ್ಡ ಮಟ್ಟದ ಸಂಭಾವನೆ, ದಸರಾ ಜಂಬೂಸವಾರಿ ವೇಳೆ ಬಿಸಿಲಿನಲ್ಲಿ ಸಾಗುವ ಕಲಾವಿದರಿಗೆ ಸಿಗುವುದೇ ಇಲ್ಲ. ಜಿಲ್ಲಾ ಕೇಂದ್ರಕ್ಕೆ ಮಾತ್ರ ಪ್ರಯಾಣ ಭತ್ಯೆ ನೀಡಲಾಗುತ್ತದೆ. ಅಲ್ಲಿಂದ ಮತ್ತೆ ತಮ್ಮ ಹಳ್ಳಿಗಳಿಗೆ ತೆರಳಬೇಕೆಂದರೆ ತಮ್ಮ ಹಣವನ್ನೇ ಬಳಸಬೇಕು.

ಪೂರಕ ಮಾಹಿತಿ: ಎಂ.ಜಿ. ಬಾಲಕೃಷ್ಣ, ಸತೀಶ ಬಿ, ಬಸೀರ್ ಅಹ್ಮದ್ ನಗಾರಿ, ಮೋಹನ್ ಕುಮಾರ ಸಿ. **ಚಿತ್ರಗಳು:** ಗುರು ಹಬೀಬ್

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 3-12-1998

● ಬಾಬಾಬುಡನ್‌ಗಿರಿ: ಯಥಾಸ್ಥಿತಿ ರಕ್ಷಣೆಗೆ ಕೇಂದ್ರ ಭರವಸೆ

ನವದೆಹಲಿ, ಡಿ. 2– ಗುರು ದತ್ತಾತ್ರೇಯ ಬಾಬಾಬುಡನ್‌ಗಿರಿ ಸ್ವಾಮಿ ಪುಣ್ಯ ಕ್ಷೇತ್ರವು ಕೋಮು ಸೌಹಾರ್ದತೆಯ ಸಂಕೇತವಾಗಿದ್ದು, ಈಗಿನ ಯಥಾಸ್ಥಿತಿಯನ್ನು ಬದಲಾಯಿಸಲು ಮತ್ತು ಕಾನೂನು ವ್ಯವಸ್ಥೆಗೆ ಧಕ್ಕೆ ಉಂಟು ಮಾಡಲು ಅವಕಾಶ ನೀಡುವುದಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿತು.

ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗ ದಳವು ದತ್ತಾತ್ರೇಯ ಪೀಠದ ವಿಮೋಚನೆಗೆಂದು ನಾಳೆ ರಥಯಾತ್ರೆಯನ್ನು ಗಿರಿಗೆ ತೆಗೆದುಕೊಂಡು ಹೋಗುವ ಬಗೆಗೆ ಸಂಸತ್‌ನ ಉಭಯ ಸದನಗಳಲ್ಲೂ ವ್ಯಕ್ತವಾದ ಕಳವಳದ ಹಿನ್ನೆಲೆಯಲ್ಲಿ ಗೃಹ ಸಚಿವ ಲಾಲ್ ಕೃಷ್ಣ ಅಡ್ವಾಣಿ ರಾಜ್ಯಸಭೆಯಲ್ಲಿ ಹೇಳಿಕೆ ನೀಡಿದರು.

50 ವರ್ಷಗಳ ಹಿಂದೆ

ಸೋಮವಾರ, 3-12-1973

● ರಷ್ಯಾ ಜೊತೆ ಒಪ್ಪಂದ: ಆಸಕ್ತ ಜನರ ಟೀಕೆಗೆ ಪ್ರಧಾನಿ ಖಂಡನೆ

ಹರಿದ್ವಾರ, ಡಿ–2 ರಷ್ಯಾದ ಜೊತೆ ಈಗ ಹೊಸದಾಗಿ ಮಾಡಿಕೊಂಡ ದೀರ್ಘಾವಧಿ ಆರ್ಥಿಕ ಸಹಕಾರ ಒಪ್ಪಂದವನ್ನು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಪ್ರಬಲವಾಗಿ ಸಮರ್ಥಿಸಿಕೊಂಡರು.

ಈ ಒಪ್ಪಂದದಿಂದ ರಾಷ್ಟ್ರದ ಸ್ವಾತಂತ್ರ್ಯವನ್ನು ಮಾರಾಟ ಮಾಡಿದಂತಾಗಲಿದೆ ಎಂಬ ಕೆಲವು ಆಸಕ್ತ ಜನರ ಟೀಕೆಯನ್ನು ಪ್ರಧಾನಿ ಅವರು ಖಂಡಿಸಿದರು. ಚಂಡೀಘಾಟ್‌ನಲ್ಲಿ ಗಂಗಾನದಿಗೆ ನಿರ್ಮಿಸುವ ಸೇತುವೆಯ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಭಾರಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಅವರು, ರಷ್ಯಾ ಜೊತೆಗಿನ ಒಪ್ಪಂದದ ವಿಷಯ ಪ್ರಸ್ತಾಪಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಡಿಸೆಂಬರ್ 3, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಷಷ್ಠಿ ಗಂ. 19-28 ನಕ್ಷತ್ರ: ಆಶ್ಲೇಷ ಗಂ. 21-36 ಯೋಗ: ಐಂದ್ರ ಗಂ 20-56 ಕರಣ: ವಣಿಜ ಗಂ. 19-28, ವೃಶ್ಚಿಕ ಮಾಸದ 17 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 1.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-42 ಸೂರ್ಯಾಸ್ತ : 05-58 ಮುಸ್ಲಿಂ ದಿನಾಂಕ : 18
ಜುಮಾದುಲ್ಲಾವಲ್ ದಿನ ವಿಶೇಷ : ಅಡ್ವೆಂಟ್ ಮೊದಲ ಭಾನುವಾರ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 6, 12

ಮೇಷ: ಕೇವಲ ಯಶಸ್ಸಿನ ಮೇಲೆ ಗಮನವಹಿಸುವುದಕ್ಕಿಂತ ಪರಿಶ್ರಮದ ಮೇಲೂ ಗಮನಹರಿಸಬೇಕು. ನಿಮ್ಮ ಯಾಂತ್ರಿಕ ಬದುಕಿನಿಂದ ತುಸು ವಿರಾಮ ಪಡೆಯಲು ಸಾಧ್ಯವಾಗುತ್ತದೆ. ಮನೆ ಕಡೆಗೂ ಗಮನಹರಿಸಬೇಕು.

ವೃಷಭ: ವಾದ ಮಾಡುವ ಬದಲು ಕುಟುಂಬದ ನೆಮ್ಮದಿಗಾಗಿ ಸೋಲು ಒಪ್ಪಿಕೊಳ್ಳುವುದು ಉತ್ತಮ. ದ್ವಿಚಕ್ರ ವಾಹನಗಳ ಮಾರಾಟಗಾರರು ಭರ್ಜರಿ ವಹಿವಾಟು ನಡೆಸಲಿದ್ದಾರೆ. ಬರಹಗಾರರಿಗೆ ವಿಪುಲ ಅವಕಾಶಗಳಿವೆ.

ಮಿಥುನ: ಕಳೆದು ಹೋದ ಅತಿ ಅಮೂಲ್ಯ ವಸ್ತು ಬಹಳ ದಿನದ ನಂತರ ನಿಮ್ಮ ಕೈ ಸೇರಲಿದೆ. ಮಕ್ಕಳ ಒಡನಾಟದಿಂದ ಹೆಚ್ಚಿನ ಸಂತೃಪ್ತಿ ಸಿಗಲಿದೆ. ಸಾಂಸ್ಕೃತಿಕ ರಂಗದಲ್ಲಿ ಮೇಲ್ಮಟ್ಟದ ಸಾಧನೆ ಮಾಡಬಹುದು.

ಕರ್ಕಾಟಕ: ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ಕಂಡುಬಂದು ಕೃಷಿಕರ ಬಾಳಿನಲ್ಲಿ ಆಶಾಕಿರಣ ಮೂಡಲಿದೆ. ಅಬಕಾರಿ ಗುತ್ತಿಗೆದಾರರಿಗೆ ಉತ್ತಮ ಆದಾಯವಿರಲಿದೆ. ವಿರೋಧಿಗಳ ಉಪಟಳದ ನಡುವೆ ಬದುಕು ಕಷ್ಟ.

ಸಿಂಹ: ಪದೇಪದೇ ಎದುರಾಗುವ ಅಡ್ಡಿ–ಆತಂಕ, ಭೀತಿ, ಮನೋವ್ಯಾಕುಲಗಳಿಗೆ ಹೆದರುವ ಅವಶ್ಯಕತೆ ಇಲ್ಲ. ಪತಿ–ಪತ್ನಿಯರು ತಾಳ್ಮೆ, ಸಮಾಧಾನದಿಂ ಇರುವುದು ಉತ್ತಮ. ಆರ್ಥಿಕ ಪರಿಸ್ಥಿತಿ ಅಷ್ಟೇನು ಉತ್ತಮವಾಗಿರುವುದಿಲ್ಲ.

ಕನ್ಯಾ: ಸ್ನೇಹಿತನ ಮೇಲಿದ್ದ ಸಂಶಯ, ಅಪನಂಬಿಕೆಯ ಮನಸ್ಥಿತಿಗೆ ಪುಷ್ಟಿ ಸಿಗುವ ಸನ್ನಿವೇಶಗಳು ನಡೆಯಲಿದೆ. ರೈಲ್ವೆ ಕಾರ್ಮಿಕರಿಗೆ ವೇತನ ಹೆಚ್ಚಳವಾಗುವ ಸಾಧ್ಯತೆಗಳಿವೆ. ತರಕಾರಿ ಬೆಳೆಗಾರರಿಗೆ ದುಪ್ಪಟ್ಟು ಲಾಭವಾಗಲಿದೆ.

ತುಲಾ: ಜಾಣ್ಮೆಯಿಂದ ವ್ಯವಹರಿಸುವ ಫಲವಾಗಿ ಸಮಾಜದಲ್ಲಿ ಹೆಚ್ಚಿನ ಗೌರವ ಪಡೆಯುವಿರಿ. ವೈಯಕ್ತಿಕ ಪ್ರಗತಿ, ಅಭಿವೃದ್ಧಿಯಿಂದ ಮನಸ್ಸಿಗೆ ಸಂತೋಷವಿರಲಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಶ್ರಮದ ಅಗತ್ಯವಿದೆ.

ವೃಶ್ಚಿಕ: ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಜ್ಞಾನಾರ್ಜನೆಯಾಗುತ್ತದೆ. ಹವ್ಯಾಸಿ ಛಾಯಾಗ್ರಾಹಕರಿಗೆ ಉತ್ತಮ ಅವಕಾಶಗಳು ಸಿಗಲಿವೆ. ಮನೆಯಲ್ಲಿ ಸಡಗರದ ವಾತಾವರಣವಿರುತ್ತದೆ.

ಧನು: ಮಕ್ಕಳ ಭವಿಷ್ಯದ ಮಾರ್ಗ ಗಮನಿಸಿ, ಪ್ರೋತ್ಸಾಹಿಸಬೇಕು. ದಾನ-ಧರ್ಮ ಪ್ರವೃತ್ತಿ ರೂಢಿಸಿಕೊಳ್ಳುವುದರಿಂದ ಕೆಲವು ಶುಭ ಫಲಗಳು ನಿಮ್ಮ ಅನುಭವಕ್ಕೆ ಬರಲಿವೆ. ಹಳೆಯ ಭೀತಿಗಳಿಂದ ಹೊರಬರಲಿದ್ದೀರಿ.

ಮಕರ: ನಿಮ್ಮ ಸಂಗಡಿಗರು ಮಾಡಿದ ತಪ್ಪಿನಿಂದ ನೀವು ಹೊಸ ನಿರ್ಧಾರ ಕೈಗೊಳ್ಳಬೇಕಾಗಲಿದೆ. ಆಸ್ತಿ ಮಾರಾಟಗಳ ವಹಿವಾಟುಗಳಲ್ಲಿ ಎಣಿಕೆಗೂ ಮೀರಿದ ಲಾಭ ಬರಲಿದೆ. ಜವಳಿ ವ್ಯಾಪಾರಿಗಳಿಗೆ ಲಾಭವಾಗಲಿದೆ.

ಕುಂಭ: ಮರದ ವ್ಯವಹಾರ ಮಾಡುವವರಿಗೆ ಉತ್ತಮ ಆರ್ಥಿಕ ಮುನ್ನಡೆ ತೋರಿಬರುತ್ತದೆ. ವೈವಾಹಿಕ ಮಾತುಕತೆಗಳಲ್ಲಿ ಹಿತಕರವಾದ ಬೆಳವಣಿಗೆ ಇರುವುದು. ಪುತ್ರರೊಡನೆ ಕೆಲಸದ ಬಗ್ಗೆ ಸಮಾಲೋಚನೆ ನಡೆಸಬೇಕು.


ಮೀನ: ಹೆಚ್ಚಿನ ಅಧ್ಯಯನಕ್ಕೆ ಮನೆಯವರಿಂದ ಉತ್ತೇಜನ ಸಿಗಲಿದೆ. ತಂದೆ ತಾಯಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಹಣ್ಣುಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗಲಿದೆ. ಸುಬ್ರಮಣ್ಯನ ಸೇವೆ ಮಾಡಿರಿ.

ಪದಬಂಧ 5518

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಮಣಿ ನೋಡಿದ ಕೊಳ (4)
3.ಕರವನ್ನು ತೋರಿಸುತ್ತಿರುವ ಶಿಷ್ಯ (4)
5.ರಾಯರಿಂದ ಬಂದ ನಿರೂಪ (3)
7.ಗುರಾಣಿ ಬಿದ್ದಿರುವ ತಗ್ಗು! (2)
8.ಕತ್ತಲು ಇಲ್ಲಿದೆ (2)
11.ರಭಸದಿಂದ ಹರಿದ ದ್ರವ (2)
13.ಮೀನನ್ನು ಹಿಡಿಯುವ ಕೊಕ್ಕೆ (2)
14.ಈತ ದುಡ್ಡಿಲ್ಲದವನು (3)
16.ಕಲೆಯೊಳಗಿರುವ ಆಹ್ವಾನ (4)
17.ರತ್ನಗಳ ಆಶ್ರಯ ಸ್ಥಾನ (4)

ಮೇಲಿಂದ ಕೆಳಕ್ಕೆ
1.ಪುರದ ಹಿತ ಬಯಸುವ ಪೂಜಾರಿ (4)
2. ರಾಜ ಪತ್ನಿ ಏಕೋ ತಿರುಗಿದ್ದಾಳಲ್ಲಾ! (2)
3.ಕನಸಲ್ಲಿ ಕಾಣಿಸಿದ ಕೊಳೆ (2)
4.ಈಕೆ ತಾರುಣ್ಯ ಹೊಂದಿದವಳು (3)
6.ಕೀರ್ತಿ ಹೀಗೆ ಬಂದಿದೆ (3)
7.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವುದು (4)
9.ಬಟ್ಟೆ ಮಡಿ ಮಾಡುವ ಅಗಸ (4)
10.ಬಡವನ ಮನೆ ಮುಂದಿನರುವ ಕೊಚ್ಚೆ (3)
12. ವರ ನೋಡಿರುವ ಕೊಳ (4)
13.ಈತ ಹಾಡುಗಾರ (3)
14.ಪ್ರಾಣಿ ಪಕ್ಷಿ ಹಿಡಿಯುವ ಸಾಧನ (2)
15.ವಠಾರದ ಹತ್ತಿರ ಕಾಣಿಸಿದ ಮದುವೆ ಗಂಡು (2)



5517ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಅಣ್ಣ 3.ಮಾಸು
5.ನಿರುಪಯೋಗಿ 6.ವಿಕೋಪ
7.ಗುಲಾಬಿ 8.ರಾಷ್ಟ್ರೀಕರಣ
9.ಸುಸಂಧಿ 10.ಕಮಾನು
13.ದುರಭಿಮಾನ 14.ತಲೆ
15.ಗುಟ್ಟು

ಮೇಲಿಂದ ಕೆಳಕ್ಕೆ
1.ಅನುಭವಿ 2.ಶಪಥ
4.ಸುಗಾಡಿಬಿ 5.ನಿರಪರಾಧಿ
7.ಗುಣಕಥನ 9.ಸುಭಾಷಿತ
11.ನುಡಿಗಟ್ಟು 12.ಸಭಿಕ

ಸುಡೊಕು 5904

	7			6			5	
2	4				5		6	
		1	2			4		9
		2					4	
4					6			
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5903 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

₹1,200 ಕೋಟಿಗೂ ಹೆಚ್ಚು ಅವ್ಯವಹಾರ • ಸಿಐಡಿ ತನಿಖೆಯಲ್ಲಿ ಪತ್ತೆ

ಮೂರು ಸಹಕಾರ ಬ್ಯಾಂಕ್ ಹಗರಣ: ಸಿಬಿಐ ತನಿಖೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್, ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟಡ್ ಮತ್ತು ಶ್ರೀ ವಸಿಷ್ಠ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್‌ಗಳಲ್ಲಿ ನಡೆದಿರುವ ಬಹುಕೋಟಿ ರೂಪಾಯಿ ಹಗರಣಗಳನ್ನು ಸಿಬಿಐ ತನಿಖೆಗೆ ವಹಿಸಲಾಗಿದೆ.

ಮೂರೂ ಸಹಕಾರಿ ಸಂಸ್ಥೆಗಳಲ್ಲಿ ಸಾವಿರಾರು ಕೋಟಿ ರೂಪಾಯಿ ಮೊತ್ತದ ಅಕ್ರಮಗಳು ನಡೆದಿವೆ. ಸಿಐಡಿ ಪೊಲೀಸರು ಈ ಪ್ರಕರಣಗಳ ತನಿಖೆ ನಡೆಸುತ್ತಿದ್ದರು. ಸಹಕಾರ ಇಲಾಖೆಯ ಶಿಫಾರಸಿನಂತೆ ಈ ಪ್ರಕರಣಗಳ ತನಿಖೆಯನ್ನು ಸಿಬಿಐಗೆ ವಹಿಸಿ ಗೃಹ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಈ ಮೂರು ಸಹಕಾರಿ ಸಂಸ್ಥೆಗಳ ನಿರ್ದೇಶಕರು, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಮತ್ತು ಸಿಬ್ಬಂದಿ ನಡೆಸಿರುವ ಅಕ್ರಮಗಳ ಕುರಿತು ತನಿಖೆ ನಡೆಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಪ್ರಕರಣಗಳಲ್ಲಿ ಭಾಗಿಯಾಗಿರುವ ಎಲ್ಲ ವ್ಯಕ್ತಿಗಳನ್ನು ಪತ್ತೆ-ಹಚ್ಚುವಂತೆ ಸಿಬಿಐಗೆ ಸೂಚಿಸಲಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದ ದತ್ತಾಂಶ, ಮಾಹಿತಿ ಮತ್ತು ಕಡತಗಳನ್ನು ಸಿಬಿಐ ಅಧಿಕಾರಿಗಳಿಗೆ ಹಸ್ತಾಂತರಿಸುವಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಮೂರು ಸಹಕಾರಿ ಸಂಸ್ಥೆಗಳಲ್ಲಿ ಠೇವಣಿ ಇಟ್ಟು, ನಷ್ಟಕ್ಕೊಳಗಾದವರು ನಿರಂತರ ಹೋರಾಟ ನಡೆಸಿದ್ದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಹೋರಾಟ ತೀವ್ರವಾಗಿತ್ತು. ಆಗಲೂ, ಸಿಬಿಐ ತನಿಖೆಗೆ ವಹಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ, ನೀಡಿರಲಿಲ್ಲ.

₹1,200 ಕೋಟಿ ಹಗರಣ: ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಮತ್ತು ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟಡ್‌ನಲ್ಲಿ ₹1,200 ಕೋಟಿಗೂ ಹೆಚ್ಚು ಮೊತ್ತದ ಹಗರಣ ನಡೆದಿರುವುದು ಸಿಐಡಿ ತನಿಖೆಯಲ್ಲಿ ಪತ್ತೆಯಾಗಿತ್ತು.

ಶಾಸಕ, ಸಂಸದರ ಪಾತ್ರವೂ ತನಿಖೆಯಾಗಲಿ: ಕಾಂಗ್ರೆಸ್

‘ಹಗರಣದಲ್ಲಿ ಯಾವುದೇ ಸಂಸದ, ಶಾಸಕರ ಪಾತ್ರವಿದ್ದರೂ ಸಿಬಿಐ ಪತ್ತೆಹಚ್ಚಿ, ಕಾನೂನು ಕ್ರಮಕ್ಕೆ ಒಳಪಡಿಸಬೇಕು’ ಎಂದು ಕಾಂಗ್ರೆಸ್ ಮುಖಂಡ ಶಂಕರ್ ಗುಹಾ ದ್ವಾರಕನಾಥ್ ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಒಂದು ತಿಂಗಳೊಳಗೆ ಸಂತ್ರಸ್ತರಿಗೆ ನ್ಯಾಯ ಕೊಡಿಸುವುದಾಗಿ ಸಂಸದ ತೇಜಸ್ವಿ ಸೂರ್ಯ ಭರವಸೆ ನೀಡಿದ್ದರು. ಆರು ತಿಂಗಳಾದರೂ ಮಾತನಾಡುತ್ತಿಲ್ಲ’ ಎಂದು ದೂರಿದ್ದಾರೆ.





ಬ್ಯಾಂಕ್ ಅಧ್ಯಕ್ಷ ಕೆ. ರಾಮಕೃಷ್ಣ, ಉಪಾಧ್ಯಕ್ಷರೂ ಆಗಿದ್ದ ಅವರ ಮಗ ಕೆ.ಆರ್. ವೇಣುಗೋಪಾಲ್ ಸೇರಿದಂತೆ 27 ಮಂದಿ ₹920.46 ಕೋಟಿ ಮೊತ್ತದ ಸಾಲ ಪಡೆದು ವಂಚಿಸಿರುವುದು ತನಿಖೆಯಲ್ಲಿ ಕಂಡುಬಂದಿತ್ತು. ಎರಡೂ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗಳ ಹಲವು ಸದಸ್ಯರು, ಅಧಿಕಾರಿಗಳು, ಸಿಬ್ಬಂದಿಯನ್ನು ಬಂಧಿಸಲಾಗಿತ್ತು.

ಶ್ರೀ ವಸಿಷ್ಠ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟಡ್‌ನಲ್ಲಿ ₹85 ಕೋಟಿಗೂ ಹೆಚ್ಚು ಮೊತ್ತದ ಅವ್ಯವಹಾರ ನಡೆದಿರುವ ಆರೋಪವಿದೆ. ಬ್ಯಾಂಕ್ ಅಧ್ಯಕ್ಷ ವೆಂಕಟನಾರಾಯಣ ಮತ್ತು ನಿರ್ದೇಶಕ ಕೃಷ್ಣಪ್ರಸಾದ್ ಈ ಪ್ರಕರಣ-ದಲ್ಲಿ ಜಾಮೀನು ಪಡೆದುಕೊಂಡಿದ್ದರು.

ಈ ಮೂರೂ ಸಹಕಾರ ಸಂಸ್ಥೆಗಳಲ್ಲಿ ನಡೆದಿರುವ ಹಣಕಾಸು ಅವ್ಯವಹಾರಗಳಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆಯನ್ನು ಸಿಬಿಐಗೆ ವಹಿಸುವಂತೆ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಸೇರಿದಂತೆ ಹಲವರು ಆಗ್ರಹಿಸಿದ್ದರು. ವಿಧಾನಮಂಡಲದ ಕಳೆದ ಅಧಿವೇಶನದಲ್ಲೂ ಈ ವಿಷಯ ಪ್ರಸ್ತಾಪವಾ-ಗಿತ್ತು. ಸಿಬಿಐ ತನಿಖೆಗೆ ವಹಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು.

ಈ ಮೂರೂ ಬ್ಯಾಂಕ್‌ಗಳ ಹಗರಣಗಳಿಂದ ಸಂತ್ರಸ್ತರಾದವರ ಪರ ನಾನೂ ಹೋರಾಟ ನಡೆಸಿದ್ದೆ. ಈಗ ಅವರೆಲ್ಲರಿಗೆ ನ್ಯಾಯ ದೊರಕಿಸಲು ಸಿಬಿಐ ತನಿಖೆಗೆ ಆದೇಶಿಸಿದ್ದೇನೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಎತ್ತಿನಹೊಳೆ: ಸೋರಿಕೆ ನೀರಿನ ‘ಪ್ರವಾಹ’

ಒಂದನೇ ಪುಟದಿಂದ...

ಮೋಹನ್, ರಾಜಮಣಿ, ರಾಧಾಕೃಷ್ಣ, ಸಜ್ಜು, ಎಸ್.ವಿ. ಮಂಜುನಾಥ್, ಯಮುನಾ, ಸೀತಮ್ಮ, ಚಂದ್ರಿಕಾ, ನಾರಾಯಣ ಅವರ ಮನೆಗಳು ಜಲಾವೃತಗೊಂಡಿದ್ದವು.

ಕಾಂಕ್ರೀಟ್ ರಸ್ತೆ ಹಾನಿ: 2 ಸಾವಿರ ಎಚ್.ಪಿ. ಪಂಪ್‌ನಿಂದ ಹರಿದ ನೀರು ಭೂಮಿಯೊಳಗಿದ್ದ ಪೈಪ್‌ನಿಂದ ಮೇಲೆ ಚಿಮ್ಮಿ, ಹಾರ್ಲೆ ಕೂಡಿಗೆ-ಕಾಡಮನೆ ಮುಖ್ಯ ರಸ್ತೆಯ ಒಳಭಾಗದಲ್ಲಿ 150 ಅಡಿ ಉದ್ದದ ಸುರಂಗವೇ ಸೃಷ್ಟಿಯಾಗಿದೆ.

ಬಸ್, ಲಾರಿ ಸೇರಿದಂತೆ ವಾಹನಗಳು ಈ ರಸ್ತೆಯಲ್ಲಿ ಚಲಿಸುವುದು ಅಪಾಯಕಾರಿಯಾಗಿದೆ. ರಸ್ತೆಯ ಮೇಲೂ ನೀರು ಹರಿದಿದ್ದರಿಂದ ಒಂದು ಗಂಟೆಗೂ ಹೆಚ್ಚು ಕಾಲ ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ರಸ್ತೆಯ ಬದಿಯಲ್ಲಿ ಕೊರಕಲು ಉಂಟಾಯಿತು.

ಉಪ ವಿಭಾಗಾಧಿಕಾರಿ ಶ್ರುತಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳು ಹಾಗೂ ಗುತ್ತಿಗೆದಾರರನ್ನು ಸ್ಥಳಕ್ಕೆ ಕರೆಸಿ, ಗ್ರಾಮಸ್ಥರ ಎದುರು ವಿಚಾರಣೆ ನಡೆಸಿದರು. ಮನೆಗಳಿಗೆ ಹಾಗೂ ಬೆಳೆಗಳಿಗೆ ಆಗಿರುವ ನಷ್ಟದ ವರದಿ ನೀಡುವಂತೆ ಸೂಚಿಸಿದರು.

ಪ್ರತಿಭಟನೆ: ಮನೆಗಳು, ರಸ್ತೆ, ಕಾಫಿ ತೋಟ ಸೇರಿದಂತೆ ಇಡೀ ಊರಿಗೆ ನೀರು ನುಗ್ಗಿರುವುದರಿಂದ ಆತಂಕಗೊಂಡ ಗ್ರಾಮಸ್ಥರು, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟಿಸಿದರು.

‘ರಾತ್ರಿ ಮಲಗಿದ್ದಾಗ ಏನಾದರೂ ಈ ರೀತಿ ನೀರು ನುಗ್ಗಿದ್ದರೆ, ನಾವೆಲ್ಲಾ ಸಮಾಧಿ ಆಗುತ್ತಿದ್ದೆವು. ನಾವೆಲ್ಲಾ ಕಾರ್ಮಿಕರು. ಬಡವರು ಕಷ್ಟಪಟ್ಟು ಒಂದು ಮನೆ ಕಟ್ಟಿಕೊಂಡಿದ್ದೇವೆ. ಎಲ್ಲಿಗೋ ನೀರು ಬಿಡುತ್ತೇವೆಂದು ನಮ್ಮನ್ನೆಲ್ಲಾ ಹಾಳು ಮಾಡಿಬಿಟ್ಟಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎತ್ತಿನಹೊಳೆ ನೀರು ಗೋಡೆ, ತಳಪಾಯಕ್ಕೆ ಭಾರಿ ರಭಸವಾಗಿ ನುಗ್ಗಿರುವುದರಿಂದ ಗೋಡೆಗಳು, ತಳಪಾಯ ಅಪಾಯದಲ್ಲಿದೆ. ಮಳೆಯಾದರೆ ಬಿದ್ದು ಹೋಗುತ್ತದೆ ಎನ್ನುವ ಆತಂಕ ಶುರುವಾಗಿದೆ

ರಾಧಾ, ಸಂತ್ರಸ್ತೆ

ಪೈಪ್‌ಲೈನ್ ಉದ್ದಕ್ಕೂ ಸೋರಿಕೆ ಆಗುತ್ತಿದೆ. ಒಂದು ಪಂಪ್‌ನಿಂದ ನೀರು ಹರಿಸಿ ಇಷ್ಟು ನಷ್ಟ ಉಂಟಾಗಿದೆ. ಆಗಿರುವ ನಷ್ಟವನ್ನು ಗುತ್ತಿಗೆ ನೀಡಿದ ಕಂಪನಿಯಿಂದಲೇ ಕೊಡಿಸಬೇಕು

ಕ್ಯಾನಗಳ್ಳಿ ಸುಬ್ರಹ್ಮಣ್ಯ, ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ

ಉಪ ಮುಖ್ಯಮಂತ್ರಿ ಅವರು ಚುನಾವಣಾ ಗಿಮಿಕ್‌ಗಾಗಿ ತರಾತುರಿಯಲ್ಲಿ ನೀರು ಹರಿಸಿ 13 ಮನೆಗಳು, ರಸ್ತೆ, ಕಾಫಿ ತೋಟ, ಆಸ್ತಿಗೆ ಹಾನಿ ಮಾಡಿದ್ದಾರೆ

ಎಚ್.ಕೆ. ಕುಮಾರಸ್ವಾಮಿ, ಮಾಜಿ ಶಾಸಕ

ದುರಸ್ತಿ ಮಾಡುವವರೆಗೆ ನೀರು ಹರಿಸದಂತೆ ಸೂಚನೆ ನೀಡಿದ್ದರೂ ಏಕಾಏಕಿ ನೀರು ಹರಿಸಲಾಗಿದೆ. ಕಾಂಗ್ರೆಸ್ ಸರ್ಕಾರದ ದಬ್ಬಾಳಿಕೆ ವಿರುದ್ಧ ಜನರೊಂದಿಗೆ ಹೋರಾಟ ನಡೆಸಲಾಗುವುದು

ಸಿಮೆಂಟ್ ಮಂಜು, ಶಾಸಕ

ಬೆಳಗಾವಿಯಲ್ಲಿ ನಾಳೆಯಿಂದ ಅಧಿವೇಶನ: ಭ್ರಷ್ಟಾಚಾರದ ಸದ್ದು 'ಗದ್ದಲ' ● ಜಂಟಿ ಹೋರಾಟಕ್ಕೆ ಬಿಜೆಪಿ, ಜೆಡಿಎಸ್ ಅಣಿ

ಸದನ ಕಲಹವೋ ಸುಗಮ ಕಲಾಪವೋ?

● ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಆರು ತಿಂಗಳು ಕಳೆದಿದ್ದು, ಸೋಮವಾರದಿಂದ (ಡಿ.3) ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಜಂಟಿಯಾಗಿ ಕಾರ್ಯತಂತ್ರ ಹೆಣೆದಿವೆ.

ಆರು ತಿಂಗಳಿನಲ್ಲಿ ಸರ್ಕಾರದ ಕೆಲವು ತಪ್ಪು ನಡೆ, ಭ್ರಷ್ಟಾಚಾರದ ಕುರುಹುಗಳು ಪ್ರತಿಪಕ್ಷಗಳ ಕೈಗೆ ಅಸ್ತ್ರವಾಗಿ ದಕ್ಕಿವೆ. ಅಧಿವೇಶನದ ಮೊದಲಾರ್ಧದಲ್ಲಿ ಸರ್ಕಾರವನ್ನು ಮುಜುಗರಕ್ಕೆ ಈಡುಮಾಡಲು ವಿಪಕ್ಷಗಳು ಅಣಿಯಾಗಿದ್ದು, ಸುಗಮ ಕಲಾಪ ನಡೆಯುವುದೇ ಅನುಮಾನ. ಭಾರಿ ಸದಸ್ಯ ಬಲದ ಆಡಳಿತ ಪಕ್ಷ ಕಾಂಗ್ರೆಸ್, ವಿಪಕ್ಷದ ನಡೆಯನ್ನು ದಿಕ್ಕೆಡಿಸಲು ತಕ್ಕ ತಂತ್ರಗಾರಿಕೆ ರೂಪಿಸಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಹಾಗೂ ಜೆಡಿಎಸ್ ಸರ್ಕಾರದ ವಿರುದ್ಧ ಜಂಟಿ ಹೋರಾಟ ಹಮ್ಮಿಕೊಂಡಿದ್ದು ಕಡಿಮೆ. ಎನ್‌ಡಿಎ ಮೈತ್ರಿಕೂಟಕ್ಕೆ ಹೆಗಲೆಣೆಯಾಗಿ ನಿಂತಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಸೋಲಿನಿಂದ ಧೃತಿಗೆಟ್ಟಿದ್ದ ಬಿಜೆಪಿಗೆ ಉಸಿರುಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರವನ್ನು ಸಹಿಸಲಾಗದ ಸ್ಥಿತಿಗೆ ತಲುಪಿರುವ ಕುಮಾರಸ್ವಾಮಿ, ಬಿಜೆಪಿಗಿಂತ ಒಂದು ಹೆಜ್ಜೆ ಮುಂದೆ ನಿಂತು, ಆಡಳಿತಾರೂಢರ ನಿದ್ದೆಗೆಡಿಸಲು ಹವಣಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಅಧಿವೇಶನದ ವೇಳೆ, ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲು ಬಿಜೆಪಿಗೆ ಸಾಧ್ಯವಾಗಿರಲಿಲ್ಲ. ಸರ್ಕಾರವನ್ನು ಗುರಿಯಾಗಿಟ್ಟು ಆಕ್ರಮಣ ನಡೆಸಲು ನಾಯಕನೇ ಇರಲಿಲ್ಲ. ಅನುಭವಿ ಶಾಸಕ ಆರ್. ಅಶೋಕ ಈಗ ಅಧಿಕೃತ ವಿಪಕ್ಷದ ಸಾರಥ್ಯ ವಹಿಸಿಕೊಂಡಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ನೇಮಕವಾಗಿರುವುದು ಬಿಜೆಪಿಯಲ್ಲಿ ತುಸು ಜೀವಕಳೆ ತಂದಿದೆ. ಇದು ಕಲಾಪದ ಮೇಲೆ ಪರಿಣಾಮ ಬೀರುವ ಸಾಧ್ಯತೆ ದಟ್ಟವಾಗಿದೆ.

ಭ್ರಷ್ಟಾಚಾರದ ಸದ್ದು: ಬಿಜೆಪಿ ಸರ್ಕಾರದ ಅವಧಿಯ ಭ್ರಷ್ಟಾಚಾರದ ಪ್ರಕರಣ, ಅಸಮರ್ಪಕ ಆಡಳಿತವೇ ಚುನಾವಣೆ ವೇಳೆ ಕಾಂಗ್ರೆಸ್‌ಗೆ ಅನುಕೂಲಕರವಾಗಿತ್ತು. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಭ್ರಷ್ಟಾಚಾರ ಖುಲ್ಲಂಖುಲ್ಲಾ ನಿಂತುಹೋದ ವಾತಾವರಣವೇನೂ ಕಾಣಿಸುತ್ತಿಲ್ಲ. ಕಮಿಷನ್ ಶೇ 40ರಷ್ಟಿದೆ ಎಂದು ತಮ್ಮ ಮೇಲೆ ಆರೋಪ ಮಾಡುತ್ತಿದ್ದ ಕಾಂಗ್ರೆಸಿಗರು, ಈಗ ಶೇ 50ರಷ್ಟು ಕಮಿಷನ್ ಪಡೆಯುತ್ತಿದ್ದಾರೆ ಎಂದು ಬಿಜೆಪಿ ನಾಯಕರು ಆಪಾದಿಸುತ್ತಿದ್ದಾರೆ. ವರ್ಗಾವಣೆಯಲ್ಲಿ ನಡೆಯುತ್ತಿದೆ ಎನ್ನಲಾದ ಭ್ರಷ್ಟಾಚಾರ, ಯತೀಂದ್ರ ಸಿದ್ದರಾಮಯ್ಯ ಅವರ ವಿಡಿಯೊ ವಿಚಾರ ಪ್ರಸ್ತಾಪವಾಗುವ ಸಾಧ್ಯತೆಯೂ ಇದೆ.

ಇದಕ್ಕೆ ತಿರುಗೇಟು ಕೊಡಲು ಸಿದ್ದವಾಗಿರುವ ಸರ್ಕಾರ, 2018ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಯಾದ ದಿನದಿಂದ ಈವರೆಗೆ ಪ್ರತಿವರ್ಷ ಆಗಿರುವ ವರ್ಗಾವಣೆ ಪಟ್ಟಿಯನ್ನು ತಯಾರಿಸುತ್ತಿದೆ. ಅದನ್ನೇ ಸದನದ ಮುಂದಿಟ್ಟು ಪ್ರತಿಪಕ್ಷಗಳ ಕೈ ಕಟ್ಟಿಹಾಕುವ ಪ್ರತಿತಂತ್ರ ಹೆಣೆದಿದೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿನ ಶೇ 40ರ ಕಮಿಷನ್ ಬಗ್ಗೆ ದೂರು ಸಲ್ಲಿಸಿದ್ದು, ಕಾಂಗ್ರೆಸ್‌ಗೆ ಅಸ್ತ್ರವಾಗಿತ್ತು. ಅದರ ಬಗ್ಗೆ ತನಿಖೆಗೆ ಆಯೋಗವನ್ನೂ ರಚಿಸಲಾಗಿದೆ. ಹಿಂದಿನ ಸರ್ಕಾರದ ಅವಧಿಯ ದಾಖಲೆ ಸಲ್ಲಿಸಲು ಆಯೋಗದ ಮುಂದೆ ಹೋಗಿದ್ದ ಕೆಂಪಣ್ಣ, ಈಗಿನ ಕಾಂಗ್ರೆಸ್ ಸರ್ಕಾರದಲ್ಲೂ ಭ್ರಷ್ಟಾಚಾರ ನಡೆಯುತ್ತಿದ್ದು, ಉಪಮುಖ್ಯಮಂತ್ರಿ ಉಸ್ತುವಾರಿಯಲ್ಲಿರುವ ಜಲಸಂಪನ್ಮೂಲ ಇಲಾಖೆ ಹಾಗೂ ಬಿಬಿಎಂಪಿ, ಸಿದ್ದರಾಮಯ್ಯನವರ ಆಪ್ತ ಬಣದಲ್ಲಿರುವ ಬೈರತಿ ಸುರೇಶ್‌ರವರ ಹೊಣೆಯಲ್ಲಿನ ನಗರಾಭಿವೃದ್ಧಿ ಇಲಾಖೆ ಬಗ್ಗೆಯೂ ದೂರು ಸಲ್ಲಿಸಿದ್ದಾರೆ. ಇದನ್ನು ಕಾಂಗ್ರೆಸ್‌ಗೆ ಪ್ರತಿಬಾಣವಾಗಿ ಹೂಡುವ ತಯಾರಿ ಪ್ರತಿಪಕ್ಷದ್ದಾಗಿದೆ.

ಇದಕ್ಕೆ ಪೂರಕವೆಂಬಂತೆ, ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬೆಂಗಳೂರಿನಲ್ಲಿ ನಡೆಸಿದ್ದ ದಾಳಿಯಲ್ಲಿ ₹94 ಕೋಟಿ ನಗದ ಹಾಗೂ ₹8 ಲಕ್ಷ ಮೌಲ್ಯದ ಆಭರಣ ವಶಪಡಿಸಿಕೊಂಡಿದ್ದರು. ಇದು ಯಾರಿಗೆ ಸೇರಿದ್ದೆಂದು ಆದಾಯ ತೆರಿಗೆ ಇಲಾಖೆ ಈವರೆಗೂ ಬಹಿರಂಗಪಡಿಸಿಲ್ಲ. ಗುತ್ತಿಗೆದಾರರ ಮನೆಯಲ್ಲಿ ಈ ಮೊತ್ತ ಸಿಕ್ಕಿದ್ದು, ಕಾಂಗ್ರೆಸ್ ನಂಟಿದೆ ಎಂದು ಬಿಜೆಪಿ ಆರೋಪಿಸಿದೆ. 'ನಿಮ್ಮದು ಭ್ರಷ್ಟ ಸರ್ಕಾರ' ಎಂದು ಹೀಗಳೆಯಲು ಇದು ಪ್ರತಿಪಕ್ಷಕ್ಕೆ ಸಿಕ್ಕಿದ ಹತಾರವಾಗಲಿದೆ.

ಇದರ ಜತೆಗೆ ಬರ ಪರಿಹಾರ, ಬರ ನಿರ್ವಹಣೆಯಲ್ಲಿನ ವೈಫಲ್ಯ, ಹಣಕಾಸು ಪರಿಸ್ಥಿತಿ ಶೋಚನೀಯ, ಗ್ಯಾರಂಟಿಗೆ ಸಿಕ್ಕ ಪ್ರಚಾರದಷ್ಟು ಹಣ ಜನರಿಗೆ ತಲುಪಿಲ್ಲ ಎಂದು ಆಪಾದಿಸುತ್ತಿರುವ ವಿಪಕ್ಷಗಳು ಅದನ್ನೂ ಪ್ರಸ್ತಾಪಿಸುವ ಸಂಭವ ಇದೆ.

ಡಿ.ಕೆ.ಶಿವಕುಮಾರ್, ಚಲುವರಾಯಸ್ವಾಮಿ, ಜಮೀರ್ ಗುರಿ

ತಮ್ಮ ಒಂದು ಕಾಲದ ಸಖ, ಈಗಿನ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮೇಲೆ ಮುಗಿಬಿದ್ದಿರುವ ಕುಮಾರಸ್ವಾಮಿ, ಅಧಿವೇಶನದ ಮೊದಲ ಭಾಗವನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳುವ ಸಂಭವ ಇದೆ. 'ಬೆಂಗಳೂರು ಹೊರ ವಲಯದಲ್ಲಿರುವ ಕೆರೆ ಅಂಗಳದ ಬಹುಕೋಟಿ ಮೌಲ್ಯದ ಜಮೀನನ್ನು ಚಲುವರಾಯಸ್ವಾಮಿ ಒತ್ತುವರಿ ಮಾಡಿಕೊಂಡಿದ್ದಾರೆ' ಎಂಬ ದಾಖಲೆ ಮುಂದಿಟ್ಟು, ಹೋರಾಟ ನಡೆಸಲಿದ್ದಾರೆ.

ಇದರ ಜತೆಗೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲುಲು ಮಾಲ್‌ನ ಜಮೀನನ್ನು ಅಕ್ರಮವಾಗಿ ಸಂಪಾದಿಸಿದ್ದಾರೆ ಎಂದು ಆರೋಪಿಸಿರುವ ಕುಮಾರಸ್ವಾಮಿ, ಈ ದಾಖಲೆಯನ್ನೂ ಸದನದ ಮುಂದೆ ಮಂಡಿಸುವ ತಯಾರಿ ನಡೆಸಿದ್ದಾರೆ. ಜೆಡಿಎಸ್ ಪ್ರಾಬಲ್ಯವಿದ್ದ ರಾಮನಗರ ಹಾಗೂ ಮಂಡ್ಯದಲ್ಲಿನ ತಮ್ಮ ಎದುರಾಳಿಗಳನ್ನು ಹಣಿಯುವುದು ಕುಮಾರಸ್ವಾಮಿಯವರ ಆದ್ಯತೆಯಾದಂತಿದೆ.

'ತೆಲಂಗಾಣ ವಿಧಾನಸಭೆ ಚುನಾವಣೆ ಪ್ರಚಾರ ವೇಳೆ ಕರ್ನಾಟಕದ ಶಾಸಕರಿಗೆ ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಅವಮಾನಿಸಿದ್ದಾರೆ' ಎಂಬ ವಿಷಯ ಮುಂದಿಟ್ಟು, ಹಕ್ಕುಚ್ಯುತಿ ಮಂಡಿಸಲು ಬಿಜೆಪಿ ತಯಾರಿ ಮಾಡಿಕೊಂಡಿದೆ.

ಆದಾಯಕ್ಕೆ ಮೀರಿದ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಶಿವಕುಮಾರ್ ವಿರುದ್ಧ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಸಿದ್ದರಾಮಯ್ಯ ಸರ್ಕಾರ ವಾಪಸ್ ಪಡೆದಿದೆ. ವಿಚಾರಣೆ ಪೂರ್ಣಗೊಳಿಸಿ, ದೋಷಾರೋಪಪಟ್ಟಿ ಸಲ್ಲಿಸುವ ಸಮಯದಲ್ಲಿ ವಾಪಸ್ ಪಡೆದಿರುವುದು ವಿಪಕ್ಷಕ್ಕೆ ಸಿಕ್ಕ ಮತ್ತೊಂದು ಪ್ರಬಲ ಅಸ್ತ್ರವಾಗಿದೆ. ಭ್ರಷ್ಟಾಚಾರದ ತೊಡೆದು ಹಾಕುವುದಾಗಿ ಹೇಳಿ ಅಧಿಕಾರಕ್ಕೆ ಬಂದಿದ್ದ ಕಾಂಗ್ರೆಸ್, ಭ್ರಷ್ಟಾಚಾರದ ಪ್ರಕರಣದ ತನಿಖೆಯ ಅನುಮತಿ ವಾಪಸ್ ಪಡೆದಿರುವುದು, ಹೋರಾಟದ ಹುಮ್ಮಸ್ಸಿನಲ್ಲಿದ್ದ ಬಿಜೆಪಿಗೆ ಹುಗ್ಗಿ ಸಿಕ್ಕಂತಾಗಿದೆ.

ಸುದ್ದಿ 2 ನಿಮಿಷ

'ಅಧಿವೇಶನದ ಬಳಿಕ ಬಿಜೆಪಿ, ಜೆಡಿಎಸ್ ಶಾಸಕರು ಕಾಂಗ್ರೆಸ್‌ಗೆ'

ಹಾವೇರಿ: 'ಬಿಜೆಪಿ, ಜೆಡಿಎಸ್‌ನಿಂದ ನೊಂದ ಹಲವು ಶಾಸಕರು ಕಾಂಗ್ರೆಸ್ ಸೇರಲು ಬಯಸಿದ್ದಾರೆ. ಬೆಳಗಾವಿ ಅಧಿವೇಶನದ ಬಳಿಕ ಹಲವು ಶಾಸಕರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಆಗುವರು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಹೇಳಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾಂಗ್ರೆಸ್ ಶಾಸಕರು ಬಿಜೆಪಿಗೆ ಹೋಗುತ್ತಾರೆ ಎಂದು ಬಿಜೆಪಿಯ ಕೆಲ ನಾಯಕರು ಹಗಲುಗನಸು ಕಾಣುತ್ತಿದ್ದಾರೆ. ನಮಗೆ ಆಪರೇಷನ್ ಹಸ್ತ ಮಾಡಬೇಕು ಅಂತೇನಿಲ್ಲ. ಪಕ್ಷದ ತತ್ವ, ಸಿದ್ಧಾಂತ ಮೆಚ್ಚಿ ಹಲವು ಶಾಸಕರು ಕಾಂಗ್ರೆಸ್ ಸೇರಲು ಒಲವು ತೋರಿದ್ದಾರೆ' ಎಂದರು.

'ಹತ್ತು ವರ್ಷ ಮೋದಿ ಸರ್ಕಾರ ಏನು ಮಾಡಿದೆ ಎಂಬುದನ್ನು ಜನರ ಮುಂದಿಡುತ್ತೇವೆ. 6 ತಿಂಗಳ ಬಳಿಕ ಅತ್ತು ಕರೆದು ಬಿಜೆಪಿಗೆ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಮಾಡಿದ್ದಾರೆ. ವಿಜಯೇಂದ್ರ ಅವರೇ ಮೊದಲು ರಾಜ್ಯಕ್ಕೆ ಬರಬೇಕಾದ ಪರಿಹಾರ ಕೊಡಿಸಿ' ಎಂದು ಆಗ್ರಹಿಸಿದರು.

'ಜನವರಿ ಕೊನೆಯ ವಾರದಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ರಾಜ್ಯದ 28 ಕ್ಷೇತ್ರದ ಅಭ್ಯರ್ಥಿಗಳ ಹೆಸರು ಘೋಷಣೆ ಮಾಡಲಾಗುವುದು' ಎಂದರು.



ಬೆಂಗಳೂರಿನಲ್ಲಿ 23ರಂದು ರೈತರ ರಾಷ್ಟ್ರೀಯ ಮಹಾಅಧಿವೇಶನ

ಮೈಸೂರು: 'ವಿವಿಧ ಬೇಡಿಕೆಗಳ ಈಡೇರಿಕೆಗೆ ಸರ್ಕಾರವನ್ನು ಆಗ್ರಹಿಸಿ, ವಿಶ್ವ ರೈತ ದಿನವಾದ ಡಿ.23ರಂದು ಬೆಂಗಳೂರಿನಲ್ಲಿ ರೈತರ ರಾಷ್ಟ್ರೀಯ ಮಹಾ ಅಧಿವೇಶನ ನಡೆಸಲಾಗುವುದು' ಎಂದು ಸಂಯುಕ್ತ ಕಿಸಾನ್ ಮೋರ್ಚಾ ದಕ್ಷಿಣ ಭಾರತ ಸಂಚಾಲಕ ಕುರುಬೂರು ಶಾಂತಕುಮಾರ್ ಹೇಳಿದರು.

'ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆಯ ರಾಷ್ಟ್ರೀಯ ರೈತ ಮುಖಂಡರ ಸಮ್ಮುಖದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಗಂಭೀರ ಎಚ್ಚರಿಕೆ ನೀಡಲಾಗುವುದು' ಎಂದು ಪತ್ರಿಕಾಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

ಮಹಾಮೇಳಾವ್‌ಗೆ ಅನುಮತಿ ನಿರಾಕರಣೆ

ಪ್ರಜಾವಾಣಿ ವಾರ್ತೆ


ಬೆಳಗಾವಿ: ಇಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಡಿಸೆಂಬರ್ 5 ರಂದು ಮಹಾಮೇಳಾವ್ ಆಯೋಜಿಸಲು ಮುಂದಾಗಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಗೆ ನಗರ ಪೊಲೀಸ್ ಕಮಿಷನರ್ ಎಸ್. ಎನ್.ಸಿದ್ರಾಮಪ್ಪ ಶನಿವಾರ ಅನುಮತಿ ನಿರಾಕರಿಸಿದರು.

ಮಾಜಿ ಶಾಸಕ ಮನೋಹರ ಕಿಣೇಕರ್, ಮಾಲೋಜಿ ಅಷ್ಟೇಕರ್ ನೇತೃತ್ವದ ನಿಯೋಗ ಆಯುಕ್ತರ ಕಚೇರಿಗೆ ಬಂದು, ಮಹಾಮೇಳಾವ್‌ಗೆ ಅನುಮತಿ ನೀಡಬೇಕೆಂದು ಕೋರಿತು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ರಾಮಪ್ಪ, 'ನಾಡವಿರೋಧಿ ಚಟುವಟಿಕೆ ಕೈಗೊಳ್ಳಲು ಅನುಮತಿ ಕೊಡುವುದಿಲ್ಲ. ಒಂದು ವೇಳೆ ನಿಯಮ ಉಲ್ಲಂಘಿಸಿ ಆಯೋಜಿಸಿದರೆ ಶಿಸ್ತು ಕ್ರಮ ಜರುಗಿಸಲಾಗುವುದು' ಎಂದರು.

ಈಗಿರುವುದು 50% ಕಮಿಷನ್ ಸರ್ಕಾರ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಶೇಕಡ 40ರಷ್ಟು ಕಮಿಷನ್ ಹೆಸರಿನಲ್ಲಿ ಸುಳ್ಳು ಆರೋಪ ಮಾಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಈಗ ನೇರವಾಗಿ ಶೇ 50ರಷ್ಟು ಕಮಿಷನ್ ಸರ್ಕಾರ ನಡೆಸುತ್ತಿದೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ರಾಜ್ಯ ಸರ್ಕಾರದ ಎಲ್ಲ ಹಂತದಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಸಣ್ಣಪುಟ್ಟ ಕೆಲಸಗಳಿಗೂ ವಸೂಲಿ ಮಾಡಲಾಗುತ್ತಿದೆ. ವರ್ಗಾವಣೆ ದಂಧೆ ಇನ್ನೂ ನಿಂತಿಲ್ಲ' ಎಂದರು.

ಕಮಿಷನ್ ಆರೋಪದ ಕುರಿತು ತನಿಖೆಗೆ ಸರ್ಕಾರ ಆಯೋಗವನ್ನು ನೇಮಿಸಿದೆ. ಆಯೋಗವು ಪ್ರಾಮಾಣಿಕವಾಗಿ ಎಲ್ಲರ ಅವಧಿಯ ಆರೋಪಗಳ ಬಗ್ಗೆಯೂ ತನಿಖೆ ನಡೆಸಲಿ ಎಂದು ಆಗ್ರಹಿಸಿದರು.

'ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆಯಾಗಿ ಆರು ತಿಂಗಳಾಗಿದೆ. ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳ ಅನುಷ್ಠಾನ ಸರಿಯಾಗಿ ನಡೆಯುತ್ತಿಲ್ಲ. ಆರು ತಿಂಗಳೊಳಗೆ ಈ ಸರ್ಕಾರದ ಬಗ್ಗೆ ಜನರು ಭ್ರಮನಿರಸನಗೊಂಡಿದ್ದಾರೆ. ಗ್ಯಾರಂಟಿ ಹೆಸರಿನಲ್ಲಿ ಪ್ರಚಾರ ಪಡೆಯುವುದಕ್ಕೆ ಸರ್ಕಾರದ ಕೆಲಸ ಸೀಮಿತವಾಗಿದೆ' ಎಂದರು.

ಅನ್ನಭಾಗ್ಯ ಯೋಜನೆಯಡಿ ಪ್ರತಿ ವ್ಯಕ್ತಿಗೆ ತಿಂಗಳಿಗೆ ಹತ್ತು ಕೆ.ಜಿ. ಅಕ್ಕಿ ವಿತರಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರ ಪೂರೈಸುತ್ತಿರುವ ತಲಾ ಐದು ಕೆ.ಜಿ. ಅಕ್ಕಿಯ ವಿತರಣೆಯನ್ನೂ ಸಮರ್ಪಕವಾಗಿ ಮಾಡುತ್ತಿಲ್ಲ. ಅಕ್ಕಿ ಕಾಳಸಂತೆಯ ಪಾಲಾಗುತ್ತಿದೆ ಎಂದು ದೂರಿದರು.

ಗೃಹ ಲಕ್ಷ್ಮಿ ಯೋಜನೆಯಡಿ ಹಣ ಪಾವತಿ ಶೇ 35ರಷ್ಟನ್ನು ದಾಟಿಲ್ಲ. ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಸರಿಯಾಗಿ ವಿದ್ಯುತ್ ಪೂರೈಸುತ್ತಿಲ್ಲ. ಬರ ನಿರ್ವಹಣೆಯಲ್ಲಿ ಸಂಪೂರ್ಣವಾಗಿ ಸರ್ಕಾರ ವಿಫಲವಾಗಿದೆ. ರೈತಪರ ಯೋಜನೆಗಳನ್ನು ಸ್ಥಗಿತಗೊಳಿಸಿ ಅನ್ನದಾತರನ್ನು ಅವಮಾನಿಸಲಾಗುತ್ತಿದೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯ ಸರ್ಕಾರದ ಸಾಲದ ಪ್ರಮಾಣ ಹೆಚ್ಚಾಗಿದೆ. ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗಳ ₹11,000 ಕೋಟಿ ಅನುದಾನವನ್ನೂ ಬೇರೆ ಉದ್ದೇಶಕ್ಕೆ ಬಳಕೆ ಮಾಡಲಾಗುತ್ತಿದೆ. ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಕುರಿತು ಸದನದಲ್ಲೇ ಮಾಹಿತಿ ಒದಗಿಸುವಂತೆ ಆಗ್ರಹಿಸಲಾಗುವುದು ಎಂದು ಹೇಳಿದರು.

ಸರ್ಕಾರದ 60 ತಪ್ಪುಗಳ ಪಟ್ಟಿ ಸಿದ್ಧ: ಆರ್. ಅಶೋಕ



ಆರ್‌.ಅಶೋಕ

ಬೆಂಗಳೂರು: 'ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಆರು ತಿಂಗಳಲ್ಲಿ 60 ತಪ್ಪುಗಳನ್ನು ಮಾಡಿದೆ. ಸರ್ಕಾರದ ತಪ್ಪುಗಳ ಪಟ್ಟಿಯೊಂದಿಗೆ ವಿಧಾನಮಂಡಲದಲ್ಲಿ ಹೋರಾಟಕ್ಕೆ ಸಜ್ಜಾಗಿದ್ದೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಈ ಸರ್ಕಾರ ವರ್ಗಾವಣೆ ದಂಧೆಯ ಅಂಗಡಿಗಳನ್ನು ತೆರೆದಿದೆ. ಆಡಳಿತ ವ್ಯವಸ್ಥೆ ಭ್ರಷ್ಟಾಚಾರದ ಕೂಪದಂತಿದೆ. ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿಯಲ್ಲಿ ಬೆಂಗಳೂರಿನಲ್ಲಿ ₹94 ಕೋಟಿ ನಗದು ಪತ್ತೆಯಾಗಿತ್ತು. ಈ ಸರ್ಕಾರ ನಡೆಸುತ್ತಿರುವ ವರ್ಗಾವಣೆ ದಂಧೆಗೆ ಇದು ಸಾಕ್ಷಿ' ಎಂದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಷಯದಲ್ಲಿ ಸರ್ಕಾರದಿಂದ ರಾಜ್ಯದ ಜನರಿಗೆ ಮೋಸವಾಗಿದೆ. ಈ ಕುರಿತು ಬಿಜೆಪಿಯ 66 ಮತ್ತು ಜೆಡಿಎಸ್‌ನ 19 ಶಾಸಕರು ಒಗ್ಗೂಡಿ ನಿಲುವಳಿ ಸೂಚನೆ ಮಂಡಿಸಲಿದ್ದೇವೆ ಎಂದು ತಿಳಿಸಿದರು.

ಬರ ನಿರ್ವಹಣೆಯಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕೇಂದ್ರ ಸರ್ಕಾರದ ವಿರುದ್ಧ ದೂರುವುದರಲ್ಲೇ ರಾಜ್ಯ ಸರ್ಕಾರ ಕಾಲಹರಣ ಮಾಡುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯೂ ಹದಗೆಟ್ಟಿದೆ. ಈ ಎಲ್ಲ ವಿಚಾರಗಳ ಬಗ್ಗೆಯೂ ವಿಧಾನಮಂಡಲದಲ್ಲಿ ಧ್ವನಿ ಎತ್ತಲಾಗುವುದು ಎಂದರು.

ವಿರೋಧದ ನಡುವೆಯೂ ಜಾತಿ ಜನಗಣತಿ ವರದಿ ಸ್ವೀಕಾರಕ್ಕೆ ಮುಂದಾಗಿರುವುದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆದಿರುವುದು ಸೇರಿದಂತೆ ಹಲವು ವಿಷಯಗಳಲ್ಲಿ ಸರ್ಕಾರದ ವಿರುದ್ಧ ಹೋರಾಟಕ್ಕೆ ನಿರ್ಧರಿಸಲಾಗಿದೆ ಎಂದರು.

'ದಲಿತ ಸಿ.ಎಂ–ಹೈಕಮಾಂಡ್ ನಿರ್ಣಯ ಅಂತಿಮ'

ಪ್ರಜಾವಾಣಿ ವಾರ್ತೆ

ಶಿರಸಿ (ಉತ್ತರ ಕನ್ನಡ ಜಿಲ್ಲೆ): 'ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಮಾಡಲು ಕಾಲ ಇನ್ನೂ ಪಕ್ವ ಆಗಿಲ್ಲ. ಅದರ ಬಗ್ಗೆ ಹೈಕಮಾಂಡ್ ನಿರ್ಧಾರವೇ ಅಂತಿಮ. ಯಾರನ್ನೂ ಜಾತಿ ಆಧಾರದ ಮೇಲೆ ಮುಖ್ಯಮಂತ್ರಿ ಮಾಡಲು ಆಗದು' ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

'ದಲಿತ ಮುಖ್ಯಮಂತ್ರಿ ಬಗ್ಗೆ ನಾವು ಪಕ್ಷದ ವರಿಷ್ಠರ ಜೊತೆ ಚರ್ಚಿಸುತ್ತೇವೆ. ಆದರೆ, ಪಕ್ಷದ ಹೈಕಮಾಂಡ್ ಕೈಗೊಳ್ಳುವ ನಿರ್ಣಯವೇ ಅಂತಿಮ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಅವರ ಕಡೆಗಣನೆ ಮಾಡಲಾಗುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, '30 ವರ್ಷಗಳಿಂದ ರಾಜಕಾರಣದಲ್ಲಿ ಇರುವ ಹರಿಪ್ರಸಾದ್ ಅವರನ್ನು ಕಡೆಗಣನೆ ಮಾಡುವ ಪ್ರಶ್ನೆಯೇ ಇಲ್ಲ. ಅವರೊಂದಿಗೆ ಚರ್ಚಿಸಲಾಗುವುದು' ಎಂದರು.

'ಬಹಳಷ್ಟು ಹಿರಿಯ ನಾಯಕರಿಗೆ ಸ್ಥಾನ ನೀಡಿಲ್ಲ. ಅವಕಾಶ ಬಂದಾಗ, ಅವರಿಗೂ ಸ್ಥಾನಮಾನ ಸಿಗಲಿದೆ. 25 ಶಾಸಕರಿಗೆ ನಿಗಮ ಮಂಡಳಿಯಲ್ಲಿ ಸ್ಥಾನ ನೀಡಲಾಗುವುದು. ಹಂತಹಂತವಾಗಿ ಎಲ್ಲರನ್ನೂ ಸಮಾಧಾನ ಮಾಡಲಾಗುವುದು. ಯಾರೂ ಅಸಮಾಧಾನ ಪಡಬೇಕಿಲ್ಲ' ಎಂದರು.

'ಗುತ್ತಿಗೆದಾರರಿಗೆ ಹಣ ನೀಡಲು ಆಯಾ ಇಲಾಖೆಯವರು ಕ್ರಮವಹಿಸುತ್ತಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 6 ತಿಂಗಳಾಯಿತು. ₹1,500 ಕೋಟಿ ಅನುದಾನ ಇಲಾಖೆಗೆ ಮಂಜೂರಾದರೆ, ಅದಕ್ಕೂ ದುಪ್ಪಟ್ಟು ಕಾಮಗಾರಿ ಮಂಜೂರು ಆಗಿರುವುದೇ ಗುತ್ತಿಗೆದಾರರ ಸಮಸ್ಯೆಗೆ ಕಾರಣ' ಎಂದರು.

'ಕಸ್ತೂರಿರಂಗನ್ ವರದಿ ವಾಪಸ್ ಕಳುಹಿಸುತ್ತೇವೆ'

ಶಿರಸಿ: 'ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಕಸ್ತೂರಿರಂಗನ್ ವರದಿಯನ್ನು ನಾವು ವಾಪಸ್ ಕಳುಹಿಸುತ್ತೇವೆ. ವರದಿ ತಿರಸ್ಕರಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅರಣ್ಯ ಸಚಿವ ಈಶ್ವರ ಖಂಡ್ರೆ ಅವರೊಂದಿಗೆ ಚರ್ಚಿಸುವೆ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ವತಿಯಿಂದ ನಗರದಲ್ಲಿ ಶನಿವಾರ ನಡೆದ ಕಸ್ತೂರಿ ರಂಗನ್ ವರದಿ ವಿರೋಧಿ ಜಾಥಾ ಸಮಾರೋಪದಲ್ಲಿ ಮಾತನಾಡಿದ ಅವರು, 'ಅರಣ್ಯ ಉಳಿಯಬೇಕು, ಜನರಿಗೆ ಸಮಸ್ಯೆ ಆಗಬಾರದು. ಈ ದಿಸೆಯಲ್ಲಿ ಕ್ರಮವಹಿಸುವಂತೆ ಕೋರಲಾಗುವುದು' ಎಂದರು.

'ಅರಣ್ಯ ಉಳಿಯುವಲ್ಲಿ ಅರಣ್ಯ ಇಲಾಖೆ ಪಾತ್ರ ಇದ್ದಷ್ಟೇ ಅರಣ್ಯ ವಾಸಿಗಳ ಪಾತ್ರವೂ ಇದೆ. ಈ ನಿಟ್ಟಿನಲ್ಲಿ ಅರಣ್ಯ ವಾಸಿಗಳ ಮೇಲೆ ದೌರ್ಜನ್ಯ ನಡೆಸದಂತೆ ಸೂಚಿಸಲು ಮುಖ್ಯಮಂತ್ರಿ ಬಳಿ ಮಾತನಾಡುವೆ' ಎಂದರು.



ಶಿರಸಿಯಲ್ಲಿ ಶನಿವಾರ ನಡೆದ ಕಸ್ತೂರಿ ರಂಗನ್ ವರದಿ ವಿರೋಧಿ ಜಾಥಾ ಸಮಾರೋಪ ಸಮಾರಂಭದಲ್ಲಿ ಕಾಗೋಡು ತಿಮ್ಮಪ್ಪ, ಸತೀಶ ಜಾರಕಿಹೊಳಿ, ರವೀಂದ್ರ ನಾಯ್ಕ, ಭೀಮಣ್ಣ ನಾಯ್ಕ, ಸತೀಶ ಸೈಲ್ ಮತ್ತಿತರರು ಭಾಗವಹಿಸಿದ್ದರು

'ಅಗ್ನಿವೀರವಾಯು'ಗೆ 153 ಯುವತಿಯರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಸಾಂಬ್ರಾದ ಏರ್‌ಮೆನ್ ತರಬೇತಿ ಶಾಲೆಯ 153 ಯುವತಿಯರು ಶನಿವಾರ ಅಗ್ನಿವೀರ ವಾಯುಸೇನೆಗೆ ಸೇರಿದರು. ಇದು ದೇಶದ ಮೊದಲ ಮಹಿಳಾ ತಂಡ.

ಮಹಿಳೆಯರು ಅಧಿಕಾರಿಗಳಾಗಿ ಸೇನೆಯಲ್ಲಿದ್ದರು. ಆದರೆ, 'ಅಗ್ನಿಪಥ' ಯೋಜನೆಯಡಿ ನೇಮಕಗೊಂಡ 153 ಮಹಿಳಾ ಅಗ್ನಿವೀರವಾಯು ಪ್ರಶಿಕ್ಷಣಾರ್ಥಿಗಳ ಮೊದಲ ತಂಡಕ್ಕೆ ಇಲ್ಲಿ 22 ವಾರ ಕಠಿಣ ತರಬೇತಿ ನೀಡಲಾಯಿತು.

153 ಮಹಿಳಾ ಮತ್ತು 2,127 ಪುರುಷ ಅಗ್ನಿವೀರವಾಯು ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಆಕರ್ಷಕವಾಗಿ ನಡೆಯಿತು. ವಿವಿಧ ಟ್ರೇಡ್‌ಗಳ ಅನುಸಾರ ಎಲ್ಲರೂ 8 ವಾರ ಮತ್ತೊಂದು ಹಂತದ ತರಬೇತಿ ಪಡೆದು, ಕರ್ತವ್ಯಕ್ಕೆ ಸೇರ್ಪಡೆ ಆಲಿದ್ದಾರೆ.

ಆರಂಭದಲ್ಲಿ ಕಠಿಣ ಎನಿಸಿತು: 'ಆರಂಭಿಕ ಹಂತದಲ್ಲಿ ಅಗ್ನಿವೀರವಾಯು ತರಬೇತಿ ಕಠಿಣವೆನಿಸಿದರೂ ನಂತರ ಹೊಂದಾಣಿಕೆಯಾಯಿತು. ಶಿಕ್ಷಕಿಯಾಗುವ ಕನಸಿತ್ತು. ಆದರೆ, ಈಗ ಅಗ್ನಿವೀರವಾಯು ಆಗಿರುವುದಕ್ಕೆ ಹೆಮ್ಮೆಯಿದೆ' ಎಂದು ಉತ್ತರ ಪ್ರದೇಶದ ಆಯುಷಿ ಗುಪ್ತಾ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜಸ್ಥಾನದ ಪ್ರಿಯಾಂಕಾ ಬಡಸರಾ ಮಾತನಾಡಿ, 'ನಮ್ಮದು ಸೈನಿಕರ ಕುಟುಂಬ. ಕುಟುಂಬದಲ್ಲಿ 13 ಮಂದಿ ಸೇನೆಯಲ್ಲಿದ್ದಾರೆ. ದೇಶಸೇವೆ ಮಾಡಬೇಕು ಎಂಬ ಸೆಳೆತ ಬಾಲ್ಯದಿಂದ ಇತ್ತು. ಕನಸು ಸಾಕಾರವಾಗಿದ್ದಕ್ಕೆ ಖುಷಿಯಿದೆ' ಎಂದರು.

'ಮಗಳು ಆಶಿ 6ನೇ ತರಗತಿ ಓದುತ್ತಿದ್ದಾಗಲೇ ಪತಿ ಮೃತಪಟ್ಟರು. ಹಾಗಾಗಿ ಕುಟುಂಬ ಆರ್ಥಿಕ ಬವಣೆಗೆ ಸಿಲುಕಿತು. ಆದರೂ ಛಲ ಬಿಡದ ಮಗಳು ಕೆಲಸ ಮಾಡುತ್ತಲೇ ಓದಿದಳು. ಓದಿಗೆ ತಾನೇ ಹಣ ಹೊಂದಿಸಿಕೊಂಡಳು. ಆಕೆ ಈಗ ಅಗ್ನಿವೀರವಾಯು ಆಗಿ ಹೊರಹೊಮ್ಮಿರುವುದು ಖುಷಿ ತಂದಿದೆ. ನನ್ನ ನೋವುಗಳನ್ನೆಲ್ಲ ಮರೆಸಿದೆ' ಎಂದು ಬಿಹಾರದ ಅಂಜುದೇವಿ ಶರ್ಮಾ ಹೇಳಿದರು.



ಬೆಳಗಾವಿ ತಾಲ್ಲೂಕಿನ ಸಾಂಬ್ರಾದ ಏರ್‌ಮೆನ್ ತರಬೇತಿ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ನಿರ್ಗಮನ ಪಥಸಂಚಲನ ಮುಗಿಯುತ್ತಿದ್ದಂತೆ, ಅಗ್ನಿವೀರವಾಯುಗಳು ಸಂಭ್ರಮಿಸಿದ್ದು ಹೀಗೆ – ಪ್ರಜಾವಾಣಿ ಚಿತ್ರ:ಏಕನಾಥ ಅಗಸಿಮನಿ



ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಶನಿವಾರ ಏರ್ಪಡಿಸಿದ್ದ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭೀಮಣ್ಣ ಖಂಡ್ರೆಯವರ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಾಡಿನ ವಿವಿಧ ಮಠಾಧೀಶರು ಪುಷ್ಪವೃಷ್ಟಿ ಮಾಡಿ ಗೌರವ ಸಲ್ಲಿಸಿದರು

ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೀದರ್: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಮಾಜಿ ಅಧ್ಯಕ್ಷರೂ ಆದ ಮಾಜಿ ಸಚಿವ ಭೀಮಣ್ಣ ಖಂಡ್ರೆ ಅವರ ಜನ್ಮ ಶತಮಾನೋತ್ಸವ ಸಮಾರಂಭ ಭಾಲ್ಕಿಯಲ್ಲಿ ಶನಿವಾರ ಅಪಾರ ಜನಸ್ತೋಮದ ನಡುವೆ ಜರುಗಿತು.

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆ, ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ ಸಮಿತಿ ಸಹಯೋಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸುತ್ತೂರು, ಶ್ರೀಶೈಲ, ಸಿದ್ಧಗಂಗಾ, ಸಿರಿಗೆರೆ, ಕಾಗಿನೆಲೆ, ಕೂಡಲಸಂಗಮ, ಹರಿಹರ ಸೇರಿದಂತೆ ನಾಡಿನ ಪ್ರಮುಖ ಮಠಾಧೀಶರು, ರಾಜಕೀಯ ಪಕ್ಷಗಳ ಮುಖಂಡರು, ಮಾಜಿ ಮುಖ್ಯಮಂತ್ರಿಗಳು, ಹಾಲಿ ಹಾಗೂ ಮಾಜಿ ಶಾಸಕರು, ವೀರಶೈವ ಮಹಾಸಭೆಯ ಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ನಿಜಾಮರ ವಿರುದ್ಧ ಹೋರಾಟ, ಕರ್ನಾಟಕದ ಏಕೀಕರಣ, ಬಸವತತ್ವದ ಪ್ರಸಾರಕ್ಕಾಗಿ ಖಂಡ್ರೆಯವರು ಮಾಡಿದ ಕೆಲಸಗಳನ್ನು ಸ್ಮರಿಸಿ ಗುಣಗಾನ ಮಾಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾರ್ಯಕ್ರಮ ಉದ್ಘಾಟಿಸಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಲೋಕನಾಯಕ' ಅಭಿನಂದನ ಗ್ರಂಥ ಬಿಡುಗಡೆಗೊಳಿಸಿದರು. ಮಹಾಸಭೆ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಿದ್ದರು.

'ಭೀಮಣ್ಣ ಖಂಡ್ರೆ ಹಾಗೂ ನಮ್ಮ ನಡುವೆ ವೈಚಾರಿಕ ಮತಭೇದಗಳಿದ್ದವು. ಆದರೆ, ನಮ್ಮಿಬ್ಬರ ಕೊನೆಯ ಗುರಿ ಒಂದೇ ಆಗಿದೆ. ಅವರು ಕಾಂಗ್ರೆಸ್ ಪಕ್ಷಕ್ಕಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಬಸವತತ್ವದ ಎಲ್ಲಾ ಪ್ರಸಾರಕರನ್ನು ಒಗ್ಗೂಡಿಸಿದ್ದಾರೆ' ಎಂದು ಖರ್ಗೆ ಹೇಳಿದರು.

ಸಿದ್ದರಾಮಯ್ಯ ಮಾತನಾಡಿ, 'ಭೀಮಣ್ಣ ಖಂಡ್ರೆ ಹುಟ್ಟು ಹೋರಾಟಗಾರರು. ಅವರ ಹೋರಾಟದಿಂದ ಗಡಿ ಜಿಲ್ಲೆ ಬೀದರ್ ಕರ್ನಾಟಕದಲ್ಲಿ ಉಳಿದಿದೆ. ವಚನ ಸಾಹಿತ್ಯದ ಪ್ರಸಾರಕ್ಕಾಗಿ ಖಂಡ್ರೆಯವರು ಬಹಳ ಶ್ರಮಿಸಿದ್ದಾರೆ. ಸಾಮಾಜಿಕವಾಗಿಯೂ ಕೆಲಸ ಮಾಡಿದ್ದಾರೆ. ಯುವಜನರಿಗೆ ಅವರು ಸ್ಫೂರ್ತಿ' ಎಂದರು.

ಶಾಮನೂರು ಶಿವಶಂಕರಪ್ಪ ಮಾತನಾಡಿ, 'ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಎಂಬ ಸಂಸ್ಥೆಯೊಂದು ಇದೆ ಎಂದು ತೋರಿಸಿಕೊಟ್ಟವರು ಭೀಮಣ್ಣ ಖಂಡ್ರೆ' ಎಂದರು.

ವ್ಯಕ್ತಿ ಆರಾಧನೆ: ಇತಿಹಾಸಕಾರ ರಾಮಚಂದ್ರ ಗುಹಾ ಆತಂಕ

'ಇತಿಹಾಸದಿಂದ ಪಾಠ ಕಲಿಯದ ಭಾರತ'

● ಸುಧೀಂದ್ರ ಪ್ರಸಾದ್ ಇ.ಎಸ್.



ರಾಮಚಂದ್ರ ಗುಹಾ

ಬೆಂಗಳೂರು: 'ತುರ್ತು ಪರಿಸ್ಥಿತಿಯನ್ನು ಹೇರಿದ ಇಂದಿರಾ ಗಾಂಧಿಯ ವ್ಯಕ್ತಿ ಆರಾಧನೆಯ ಕಾರಣದಿಂದ ಉಂಟಾದ ಕರಾಳ ದಿನಗಳಿಂದ ಭಾರತ ಪಾಠ ಕಲಿಯಲಿಲ್ಲ. ಈಗ ನರೇಂದ್ರ ಮೋದಿ ಆಡಳಿತದಲ್ಲಿ ಅದನ್ನು ಇನ್ನಷ್ಟು ಉತ್ತುಂಗಕ್ಕೆ ಕೊಂಡೊಯ್ದಿದೆ. ವ್ಯಕ್ತಿಗಳ ಆರಾಧನೆಯಲ್ಲಿ ರಾಜಕೀಯ ಪಕ್ಷಗಳೂ ಮಂಕಾಗಿವೆ' ಎಂದು ಇತಿಹಾಸತಜ್ಞ ರಾಮಚಂದ್ರ ಗುಹಾ ಅಭಿಪ್ರಾಯಪಟ್ಟರು.

ಬೆಂಗಳೂರು ಸಾಹಿತ್ಯೋತ್ಸವದ 12ನೇ ಆವೃತ್ತಿಯ ಮೊದಲ ದಿನವಾದ ಶನಿವಾರ ನಡೆದ 'ವ್ಯಕ್ತಿ ಆರಾಧನೆ: ಪ್ರಜಾಪ್ರಭುತ್ವದ ಕುಸಿತ' ಎಂಬ ಉಪನ್ಯಾಸದಲ್ಲಿ ಅವರು ಮಾತನಾಡಿದರು.

'ಹಿಟ್ಲರ್ ನಂತರ ಜರ್ಮನಿಯಲ್ಲಿ ಮತ್ತೊಬ್ಬ ಸರ್ವಾಧಿಕಾರಿ ಅಧಿಕಾರಕ್ಕೆ ಬರಲಿಲ್ಲ. ಬ್ರಿಟನ್‌ನಲ್ಲಿ ಬೋರಿಸ್ ಜಾನ್ಸನ್ ವ್ಯಕ್ತಿ ಆರಾಧನೆಯ ಜಾಡಿನಲ್ಲಿ ಸಾಗಿದರೂ ಅಲ್ಲಿನ ಆಡಳಿತ ಪಕ್ಷ, ಸುಪ್ರೀಂ ಕೋರ್ಟ್ ಅಧಿಕಾರದಲ್ಲಿ ಮುಂದುವರಿಯಲು ಅವರಿಗೆ ಅನುಮತಿ ನೀಡಲಿಲ್ಲ. ಆದರೆ ಭಾರತದಲ್ಲಿನ ಪರಿಸ್ಥಿತಿಯೇ ಭಿನ್ನ. ಇಲ್ಲಿ ಪಕ್ಷ, ಸಂಸತ್, ಅಧಿಕಾರಿವರ್ಗ, ನ್ಯಾಯಾಂಗ ಹಾಗೂ ಮಾಧ್ಯಮ ಎಲ್ಲವೂ ವ್ಯಕ್ತಿ ಆರಾಧನೆಯಲ್ಲಿ ಮುಳುಗಿವೆ' ಎಂದು ಬೇಸರ ವ್ಯಕ್ತಪಡಿಸಿದರು.

'ಸದ್ಯ ಆರಾಧನೆಗೆ ಒಳಪಡುತ್ತಿರುವ ಮೋದಿ ಅವರು ಶ್ರಮಜೀವಿ, ಉತ್ತಮ ವಾಗ್ಮಿ, ಚುನಾವಣೆಯನ್ನು ಗೆಲ್ಲಿಸಬಲ್ಲ ಸಾಮರ್ಥ್ಯ ಇರುವವರು, ರಾಜಕೀಯ ಹಾಗೂ ಆಡಳಿತದ ಅನುಭವವುಳ್ಳವರು. ಜತೆಗೆ ಯಾವುದೇ ಅಧಿಕಾರದ ಅನುಭವವನ್ನು ಹೊಂದಿರದ ರಾಹುಲ್ ಗಾಂಧಿಯನ್ನು ತಮ್ಮ ಪ್ರತಿಸ್ಪರ್ಧಿ ಎಂದು ಬಿಂಬಿಸಿದ್ದರ ಫಲವಾಗಿ ಅವರ ಪ್ರಭಾವದ ಪ್ರಖರತೆ ಇನ್ನಷ್ಟು ಹೆಚ್ಚಾಗಿದೆ' ಎಂದರು.

'ಮತ್ತೊಂದೆಡೆ ವ್ಯಕ್ತಿ ಆರಾಧನೆಯ ಮನೋಧರ್ಮ ಈಗ ದೆಹಲಿಯಿಂದ ರಾಜ್ಯಗಳಿಗೂ ವಿಸ್ತರಣೆಗೊಂಡಿದೆ. ಕೇರಳದಲ್ಲಿ ಪಿಣರಾಯಿ ವಿಜಯನ್, ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ, ದೆಹಲಿಯಲ್ಲಿ ಅರವಿಂದ ಕೇಜ್ರಿವಾಲ್, ತಮಿಳುನಾಡಿನಲ್ಲಿ ಎಂ.ಕೆ. ಸ್ಟಾಲಿನ್ – ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಕಳೆದ ಕೆಲವು ಚುನಾವಣೆಗಳನ್ನು ಗಮನಿಸಿದರೆ ವ್ಯಕ್ತಿ ಆರಾಧನೆಯಲ್ಲಿ ಪಕ್ಷಗಳೇ ಮಂಕಾದ ಉದಾಹರಣೆಗಳಿವೆ. ಮೋದಿ ಪ್ರಭಾವದಲ್ಲಿ ಬಿಜೆಪಿ ಮಂಕಾಗಿದೆ. ನಮ್ಮ ರಾಜ್ಯದಲ್ಲೂ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ಗಿಂತ ಹೆಚ್ಚಾಗಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಹೆಚ್ಚಾಗಿ ಪ್ರಚಾರಕ್ಕೊಳಗಾದರು. ಇದು ಕಳವಳಕಾರಿ ಬೆಳವಣಿಗೆ' ಎಂದು ಗುಹಾ ಹೇಳಿದರು.

'ವ್ಯಕ್ತಿಯ ಆರಾಧನೆಯ ಜತೆಗೆ ಬಂಡವಾಳಶಾಹಿಗಳ ಮೆರವಣಿಗೆಯೂ ಇಲ್ಲಿ ನಡೆಯುತ್ತಿದೆ. ನರೇಂದ್ರ ಮೋದಿ ಕ್ರೀಡಾಂಗಣದ ಎರಡೂ ತುದಿಗಳಿಗೆ ಅಂಬಾನಿ ಹಾಗೂ ಅದಾನಿ ಹೆಸರಗಳನ್ನು ಇಟ್ಟಿರುವುದು ಇದಕ್ಕೆ ಪುಷ್ಟಿ ನೀಡಿವೆ. ಇತ್ತೀಚೆಗೆ ನಡೆದ ವಿಶ್ವಕಪ್ ಕ್ರಿಕೆಟ್‌ನ ಅಂತಿಮ ಹಣಾಹಣಿ ಗುಜರಾತ್‌ನ ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಿತು. ಅಲ್ಲಿಗೆ ಪ್ರಧಾನಿ ನರೇಂದ್ರ ಮೋದಿ ಹೋಗಿದ್ದರು. ಅವರು ಅಲ್ಲಿನ ಆಡಳಿತ ಮಂಡಳಿಯಿಂದ ನರೇಂದ್ರ ಮೋದಿ ಅವರ ಭಾವಚಿತ್ರವಿರುವ ನೆನಪಿನ ಕಾಣಿಕೆಯನ್ನು ಪಡೆದರು. ಇದಕ್ಕಿಂತ ದೊಡ್ಡ ವ್ಯಂಗ್ಯ ಇತಿಹಾಸದಲ್ಲಿ ಮತ್ತೊಂದು ಸಿಗಲಾರದು. ಆದರೆ ಯಾವ ಮಾಧ್ಯಮವೂ ಇದನ್ನು ವರದಿ ಮಾಡದಿರುವುದು ಈ ವ್ಯಕ್ತಿ ಆರಾಧನೆಯ ಪ್ರಭಾವಕ್ಕೆ ಹಿಡಿದ ಕನ್ನಡಿ' ಎಂದು ಕುಟುಕಿದರು.

'ಪ್ರಜಾಪ್ರಭುತ್ವದಲ್ಲಿ ಪಕ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸುತ್ತವೆ. ಆದರೆ ಆ ಪಕ್ಷದೊಳಗೇ ಆಡಳಿತ ಪ್ರಜಾಪ್ರಭುತ್ವ ಮರೆಯಾಗಿದೆ. ಕುಟುಂಬ ರಾಜಕಾರಣ ಮುನ್ನೆಲೆಗೆ ಬಂದಿದೆ. ಸಂಜಯ್ ಅವರನ್ನು ರಾಜಕೀಯಕ್ಕೆ ತರುವ ಇಂದಿರಾರ ಪ್ರಯತ್ನದಿಂದ ಡಿಎಂಕೆ, ಶಿವಸೇನಾ ಪಕ್ಷಗಳೂ ಉತ್ತೇಜನಗೊಂಡವು. ಇಂಥ ಹಲವು ಉದಾಹರಣೆಗಳು ನಮ್ಮ ಮುಂದಿವೆ. ಈ ಎರಡೂ ದೇಶದ ಪ್ರಜಾಪ್ರಭುತ್ವಕ್ಕೆ ಮಾರಕವಾಗಿವೆ. ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದಾಗ, 'ಇಂದಿರಾ ಅಂದರೆ ಇಂಡಿಯಾ, ಇಂಡಿಯಾ ಅಂದರೆ ಇಂದಿರಾ' ಎಂದು ಅಂದಿನ ಕಾಂಗ್ರೆಸ್ ಅಧ್ಯಕ್ಷ ಬರುವಾ, ಇಂದಿರಾರನ್ನು ಹೊಗಳಿ ಪದ್ಯವನ್ನೇ ಬರೆದಿದ್ದರು. ಈಗ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರೂ ಅದೇ ಹೊಗಳಿಕೆಯನ್ನು ಮೋದಿಯ ಬಗ್ಗೆ ಮುಂದುವರಿಸಿದ್ದಾರೆ' ಎಂದ ಗುಹಾ ಹೇಳಿದರು.

'ಧರ್ಮಾಧಾರಿತ ವಿಭಜನೆ'

'ದೇಶದಲ್ಲಿ ಬಹುಸಂಖ್ಯಾತರು ಮಾತ್ರ ರಾಷ್ಟ್ರೀಯತೆಗೆ ನಿಷ್ಠರು, ಅಲ್ಪಸಂಖ್ಯಾತರು ಅಲ್ಲ ಎಂಬ ಸುಳ್ಳನ್ನು ಹರಡುತ್ತಲೇ ದೇಶವನ್ನು ವಿಭಜಿಸುವ ಪ್ರಯತ್ನ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ ಹಲವು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ನಡೆಯುತ್ತಿದೆ. ಭಾರತದಲ್ಲಿ ಹಿಂದೂಗಳು ಹೇಗೆ ಬಹುಸಂಖ್ಯಾತರೋ, ಟರ್ಕಿಯಲ್ಲಿ ಟರ್ಕಿಯರು, ರಷ್ಯಾದಲ್ಲಿ ರಷ್ಯನ್ನರು ಮಾತ್ರ ದೇಶ ಭಕ್ತರು ಎಂಬ ಭಾವನೆಯನ್ನು ಬಿತ್ತಲಾಗಿದೆ. ಮತ್ತೊಂದೆಡೆ ಭಾರತದಲ್ಲಿ ಮುಸ್ಲಿಮರು, ಟರ್ಕಿಯಲ್ಲಿ ಕರ್ಡ್ಸ್‌ಗಳು ತೀವ್ರಗಾಮಿಗಳು ಎಂದು ಹಣೆಪಟ್ಟಿ ಕಟ್ಟಲಾಗಿದೆ' ಎಂದು ರಾಮಚಂದ್ರ ಗುಹಾ ಹೇಳಿದರು.

ವಿರೋಧಿಸಿದವರಿಗೆ ವಿರೋಧ; ಬೆಂಬಲ

ಗುಹಾ ಅವರು ಪ್ರಧಾನಿ ಮೋದಿಯನ್ನು ಟೀಕಿಸಿದಷ್ಟು ಇಂದಿರಾ ಗಾಂಧಿ ಅವರನ್ನು ಟೀಕಿಸಲಿಲ್ಲ. ಹೀಗಾಗಿ ಇದನ್ನು ಒಪ್ಪಲಾಗದು ಎಂದು ಸಭಿಕರೊಬ್ಬರು ಆಕ್ಷೇಪ ವ್ಯಕ್ತಪಡಿಸಿದರು. ಕಿಕ್ಕಿರಿದು ತುಂಬಿದ್ದ ಸಭಿಕರು 'ನೋ...' ಎಂದು ಉದ್ಗರಿಸಿ, ಗುಹಾ ಅವರನ್ನು ಬೆಂಬಲಿಸಿದರು.

ಮುಷ್ಕರ ಕೈಬಿಡಿ– ಸಿಬ್ಬಂದಿಯನ್ನು ಕೋರಿದ ಆರೋಗ್ಯ ಸಚಿವ

ಡಯಾಲಿಸಿಸ್ ಕೇಂದ್ರಗಳ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಡಯಾಲಿಸಿಸ್ ಕೇಂದ್ರಗಳ ಕಾರ್ಯನಿರ್ವಹಣೆಗೆ ಎದುರಾಗಿರುವ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲು ಕ್ರಮ ಕೈಗೊಂಡಿದ್ದೇವೆ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

'ಡಯಾಲಿಸಿಸ್ ಕೇಂದ್ರಗಳ ಸಿಬ್ಬಂದಿ ಮುಷ್ಕರ ಕೈ ಬಿಟ್ಟು ಕರ್ತವ್ಯಕ್ಕೆ ಹಾಜರಾಗಬೇಕು' ಎಂದು ಅವರು ಮನವಿ ಮಾಡಿದರು.

ಇಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಮುಷ್ಕರದಿಂದ ರೋಗಿಗಳಿಗೆ ಸಮಸ್ಯೆ ಆಗುವುದನ್ನು ತಪ್ಪಿಸಲು ಆಯಾ ಆಸ್ಪತ್ರೆಯ ಆರೋಗ್ಯ ಸಿಬ್ಬಂದಿಯೇ ಸದ್ಯಕ್ಕೆ ಡಯಾಲಿಸಿಸ್ ಕಾರ್ಯವನ್ನೂ ನಿರ್ವಹಿಸಬೇಕು ಎಂದು ಸೂಚಿಸಿದ್ದೇನೆ' ಎಂದರು.

'ಹಿಂದಿನ ಸರ್ಕಾರದ ಅವಧಿಯಲ್ಲಿ ನೇಮಕಗೊಂಡಿದ್ದ ಬಿಆರ್‌ಎಸ್ ಏಜೆನ್ಸಿ ಅರ್ಧದಲ್ಲೇ ಕೆಲಸ ಸ್ಥಗಿತಗೊಳಿಸಿತ್ತು. ಆಗ ಡಯಾಲಿಸಿಸ್ ಕೇಂದ್ರಗಳ ನಿರ್ವಹಣೆ ಹೊಣೆಯನ್ನು ಇಎಸ್‌ಕೆಇಜಿ ಸಂಸ್ಥೆಗೆ ಆಗಿನ ಸರ್ಕಾರ ವಹಿಸಿತ್ತು. ಆ ಸಂಸ್ಥೆಯು ಡಯಾಲಿಸಿಸ್ ಕೇಂದ್ರಗಳನ್ನು ಸರಿಯಾಗಿ ನಿರ್ವಹಿಸುತ್ತಿರಲಿಲ್ಲ. ಸಿಬ್ಬಂದಿಗೆ ವೇತನವನ್ನೂ ಸರಿಯಾಗಿ ನೀಡುತ್ತಿರಲಿಲ್ಲ. ಸಿಬ್ಬಂದಿಯ ಇಎಸ್‌ಐ ಮತ್ತು ಭವಿಷ್ಯ ನಿಧಿ ಹಣವನ್ನು ಕಟ್ಟಿಲ್ಲ' ಎಂದರು.

'ಸಿಬ್ಬಂದಿಯ ಇಎಸ್‌ಐ, ಪಿ.ಎಫ್ ಹಣವನ್ನು ಇಲಾಖೆಯಿಂದಲೇ ಭರಿಸಬೇಕಾದರೆ ಗುತ್ತಿಗೆ ಏಜೆನ್ಸಿಯನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಈ ಪ್ರಕ್ರಿಯೆ ಶುರುವಾಗಿದೆ. ಸಿಬ್ಬಂದಿಗೆ ಎರಡು ತಿಂಗಳ ಬಾಕಿ ವೇತನವನ್ನು ಇಲಾಖೆಯಿಂದ ನೀಡುವುದಕ್ಕೆ ಆರ್ಥಿಕ ಇಲಾಖೆಯ ಅನುಮತಿ ಕೋರಿದ್ದೇವೆ' ಎಂದರು.

'ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳ ಡಯಾಲಿಸಿಸ್ ಕೇಂದ್ರಗಳಿಗೆ 800 ಹೊಸ ಡಯಾಲಿಸಿಸ್ ಯಂತ್ರಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಳವಡಿಸಲಾಗುತ್ತಿದೆ. ಇವುಗಳ ನಿರ್ವಹಣೆಗೆ ಮೈಸೂರು, ಬೆಳಗಾವಿ ಕಲಬುರಗಿ ಮತ್ತು ಬೆಂಗಳೂರು ಸೇರಿದಂತೆ ನಾಲ್ಕೂ ವಿಭಾಗಗಳಲ್ಲಿ ಹೊಸ ಟೆಂಡರ್ ಆಹ್ವಾನಿಸಿದ್ದೇವೆ. ಮೈಸೂರು ಮತ್ತು ಬೆಂಗಳೂರು ವಿಭಾಗಗಳ ಟೆಂಡರ್ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದೆ' ಎಂದರು.

'ಹೊಸ ಏಜನ್ಸಿಯವರು ಸೇವೆಯನ್ನು ಸರಿಯಾಗಿ ನೀಡದಿದ್ದರೆ, ಇಲಾಖೆಯಿಂದಲೇ ಯಂತ್ರಗಳನ್ನು ಖರೀದಿಸಿ ಡಯಾಲಿಸಿಸ್ ನಿರ್ವಹಿಸುವ ಚಿಂತನೆಯೂ ಇದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಭ್ರೂಣ ಹತ್ಯೆ: ಶುಶ್ರೂಷಕಿ ಬಂಧನ

ಪ್ರಜಾವಾಣಿ ವಾರ್ತೆ


ಮಂಜುಳಾ

ಬೆಂಗಳೂರು: ಭ್ರೂಣ ಹತ್ಯೆ ಪ್ರಕರಣದ ಮತ್ತೊಬ್ಬ ಆರೋಪಿಯಾದ ಶುಶ್ರೂಷಕಿ ಮಂಜುಳಾ ಅವರನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಮೈಸೂರಿನಲ್ಲಿ ಬಂಧಿಸಿ ನಗರಕ್ಕೆ ಕರೆತಂದಿದ್ದಾರೆ.

'ಆರೋಪಿ ಮಂಜುಳಾ, ಪ್ರಮುಖ ಆರೋಪಿ ಡಾ. ಚಂದನ್ ಬಲ್ಲಾಳ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಮಂಜುಳಾ ಅವರನ್ನು ಮೈಸೂರಿನ ಆಸ್ಪತ್ರೆಯಲ್ಲಿ ಶನಿವಾರ ಬಂಧಿಸಲಾಗಿದೆ. ಈ ಮೂಲಕ ಬಂಧಿತರ ಸಂಖ್ಯೆ 10ಕ್ಕೆ ಏರಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಜಾಲ ಸಕ್ರಿಯವಾಗಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ. ಇದುವರೆಗೂ 900ಕ್ಕೂ ಹೆಚ್ಚು ಭ್ರೂಣಗಳನ್ನು ಹತ್ಯೆ ಮಾಡಿರುವ ಬಗ್ಗೆ ದಾಖಲೆಗಳು ಸಿಕ್ಕಿವೆ' ಎಂದು ಮೂಲಗಳು ತಿಳಿಸಿವೆ. 'ಡಾ. ಚಂದನ್ ಶಸ್ತ್ರಚಿಕಿತ್ಸೆ ನಡೆಸಿ ಭ್ರೂಣ ಹತ್ಯೆ ಮಾಡುತ್ತಿದ್ದ. ಶುಶ್ರೂಷಕಿ ಮಂಜುಳಾ ಸಹಕಾರ ನೀಡುತ್ತಿದ್ದರು. ಮಂಜುಳಾ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗುವುದು' ಎಂದು ಹೇಳಿವೆ.

ಕಡತಗಳ ಹಸ್ತಾಂತರ: ಭ್ರೂಣ ಹತ್ಯೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ. ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಪ್ರಕರಣದ ಕಡತಗಳನ್ನು ಸಿಐಡಿ ಅಧಿಕಾರಿಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ಆರಂಭವಾಗಿದೆ.

ಕಡತಗಳನ್ನು ಪರಿಶೀಲನೆ ನಡೆಸಲಿರುವ ಸಿಐಡಿ ಅಧಿಕಾರಿಗಳು, ಬಾಡಿ ವಾರಂಟ್ ಮೂಲಕ ಆರೋಪಿಗಳನ್ನು ಕಸ್ಟಡಿಗೆ ಪಡೆದು ಪುನಃ ವಿಚಾರಣೆ ನಡೆಸುವ ಸಾಧ್ಯತೆ ಇದೆ.

'ಡಾ.ಸತೀಶ್ ವಿರುದ್ಧ ದೂರು ಇದ್ದುದು ನಿಜ'

'ಆಯುಷ್ ಅಧಿಕಾರಿಯಾಗಿದ್ದ ಡಾ.ಸತೀಶ್ ವಿರುದ್ಧ ಭ್ರೂಣಹತ್ಯೆ ಪ್ರಕರಣ ಸಂಬಂಧ ಆರೋಪಗಳಿದ್ದುದು ನಿಜ. ಆದರೆ, ಅವರು ಆತ್ಮಹತ್ಯೆ ಮಾಡಿಕೊಂಡಿದ್ದೇಕೆ ಎಂದು ಗೊತ್ತಿಲ್ಲ' ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

'ಮದ್ದೂರು, ಮಂಡ್ಯ ಮತ್ತು ಮೈಸೂರಿನ ಕೆಲವು ಪ್ರದೇಶಗಳಿಗೆ ಭೇಟಿ ನೀಡಿದಾಗ ಭ್ರೂಣಹತ್ಯೆಗಳ ಬಗ್ಗೆ ಜನರೇ ಮಾಹಿತಿ ನೀಡಿದ್ದರು. ಆಯುಷ್ ಅಧಿಕಾರಿ ಡಾ.ಸತೀಶ್ ಶಿವಳ್ಳಿಯಲ್ಲಿ ಅಲೋಪತಿ ಪದ್ಧತಿಯಡಿ ಔಷಧ ನೀಡುತ್ತಾರೆ ಎಂಬ ದೂರೂ ಇತ್ತು. ಅವರ ವಿರುದ್ಧವೂ ತನಿಖೆ ನಡೆಸಲು ಸಿದ್ಧತೆ ನಡೆದಿತ್ತು' ಎಂದರು.

'ದಿನಕ್ಕೆ 60 ಹತ್ಯೆ: ಕಾವೇರಿ ನದಿಗೆ ಭ್ರೂಣ'

'ಆರೋಪಿ ಮಂಜುಳಾ, ವೈದ್ಯರ ಸಹಾಯಕಿ ಆಗಿದ್ದರು. ಗರ್ಭಿಣಿಯರ ನೋಂದಣಿ ಹೆಚ್ಚಿರುತ್ತಿದ್ದ ಸಂದರ್ಭದಲ್ಲಿ ದಿನಕ್ಕೆ 60 ಹೆಣ್ಣು ಭ್ರೂಣಗಳನ್ನು ಹತ್ಯೆ ಮಾಡುತ್ತಿದ್ದ ಬಗ್ಗೆ ಅವರು ಹೇಳಿಕೆ ನೀಡಿದ್ದಾರೆ. ಜೊತೆಗೆ, ಭ್ರೂಣಗಳನ್ನು ಕಾವೇರಿ ನದಿಗೆ ಎಸೆದಿರುವ ಬಗ್ಗೆಯೂ ಅವರು ತಿಳಿಸಿದ್ದಾರೆ. ಈ ಸಂಗತಿ ಬಗ್ಗೆ ಪರಿಶೀಲನೆ ನಡೆಸಲಾಗಿದೆ. ಗರ್ಭಿಣಿಯರು ಸ್ವಯಂ-ಪ್ರೇರಣೆಯಿಂದ ಹೆಣ್ಣು ಭ್ರೂಣ ತೆಗೆಸುತ್ತಿದ್ದ ಮಾಹಿತಿಯೂ ಮಂಜುಳಾ ವಿಚಾರಣೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮತ ಎಣಿಕೆ ಇಂದು

ಒಂದನೇ ಪುಟದಿಂದ

ಪಕ್ಷಕ್ಕೆ ಹಿನ್ನಡೆಯಾಗಲಿದೆ ಎಂಬ ಮಾಹಿತಿ ಸಿಕ್ಕ ಬೆನ್ನಲ್ಲೇ ಎಚ್ಚೆತ್ತ ಬಿಜೆಪಿಯ ರಾಷ್ಟ್ರೀಯ ನಾಯಕರು ರಣತಂತ್ರ ಬದಲಿಸಿದ್ದರು. ಹೀಗಾಗಿ, ಇಲ್ಲಿ ನಿಕಟ ಸ್ಪರ್ಧೆ ಏರ್ಪಟ್ಟಿದೆ. 'ಇಂಡಿಯಾ' ಕೂಟದ ಪಾಲುದಾರ ಪಕ್ಷವಾದ ಸಮಾಜವಾದಿ ಪಕ್ಷ ಪಡೆಯುವ ಮತಗಳು ನಿರ್ಣಾಯಕ ಎಂದು ಸಮೀಕ್ಷೆಗಳು ತಿಳಿಸಿವೆ.

ರಾಜಸ್ಥಾನದ ಮತದಾರರು ಪ್ರತಿ ಐದು ವರ್ಷಕ್ಕೊಮ್ಮೆ ಸರ್ಕಾರ ಬದಲಿಸುವ ಸಂಪ್ರದಾಯವನ್ನು 25 ವರ್ಷಗಳಿಂದ ಅನುಸರಿಸಿಕೊಂಡು ಬಂದಿದ್ದಾರೆ. ಈ 'ಸಂಪ್ರದಾಯ' ಈ ಸಲ ಮುರಿಯಲಿದೆಯೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ರಾಜಸ್ಥಾನದಲ್ಲಿ ಗೆಲ್ಲುವ ವಿಶ್ವಾಸವನ್ನು ಬಿಜೆಪಿ ನಾಯಕರು ಹೊಂದಿದ್ದಾರೆ. ಆದರೆ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಬಹುಮತ ಗಳಿಸುವ ವಿಶ್ವಾಸ ಹೊಂದಿದ್ದಾರೆ. ಕೈ ಹಾಗೂ ಕಮಲ ಪಾಳಯಗಳು ಪಕ್ಷೇತರ ಹಾಗೂ ಭಾರತೀಯ ಆದಿವಾಸಿ ಪಕ್ಷದಂತಹ ಸಣ್ಣ ಪಕ್ಷಗಳ ಸಂಭವನೀಯ ವಿಜೇತರ ಜತೆಗೆ ಸಂಪರ್ಕದಲ್ಲಿವೆ.

ಮಧ್ಯಪ್ರದೇಶ: ಬಿಜೆಪಿ, ಕಾಂಗ್ರೆಸ್‌ಗೆ ಗೆಲುವಿನ ವಿಶ್ವಾಸ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ 'ಗೆಲುವು ಖಚಿತ' ಎಂದು ಬಿಜೆಪಿ ಮತ್ತು ಕಾಂಗ್ರೆಸ್ ವಿಶ್ವಾಸ ವ್ಯಕ್ತಪಡಿಸಿವೆ.

'ತಮ್ಮ ಪಕ್ಷ ಭಾರಿ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೇರಲಿದೆ' ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ ಎಣಿಕೆ ಮುನ್ನಾದಿನವಾದ ಶನಿವಾರ ಹೇಳಿದರು.

'ರಾಜ್ಯದಲ್ಲಿ ಬಿಜೆಪಿ ಮತ್ತೊಮ್ಮೆ ಸರ್ಕಾರ ರಚಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ಜನರು ಇಟ್ಟಿರುವ ಪ್ರೀತಿ ಮತ್ತು ವಿಶ್ವಾಸ ಹಾಗೂ ಮಧ್ಯಪ್ರದೇಶದಲ್ಲಿ ನಡೆದಿರುವ ಅಭಿವೃದ್ಧಿ ಕೆಲಸಗಳಿಂದ ಇದು ಸಾಧ್ಯವಾಗಲಿದೆ. ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಸ್ಥಾನಗಳು ಬಿಜೆಪಿಗೆ ಲಭಿಸಲಿದೆ' ಎಂದು ಅವರು ತಿಳಿಸಿದರು.

ಮತ್ತೊಂದೆಡೆ ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್‌ನಾಥ್, ತಮ್ಮ ಪಕ್ಷ ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಯೋಗೇಶ್ವರ್ ಭಾವ ನಾಪತ್ತೆ: ಅಪಹರಣ ಶಂಕೆ

ಪ್ರಜಾವಾಣಿ ವಾರ್ತೆ


ಮಹದೇವಯ್ಯ

ಚನ್ನಪಟ್ಟಣ (ರಾಮನಗರ): ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರ ಭಾವ ಮಹದೇವಯ್ಯ (62) ಅವರು ಚಕ್ಕೆರೆ ಗ್ರಾಮದ ತೋಟದ ಮನೆಯಿಂದ ಶನಿವಾರ ನಾಪತ್ತೆಯಾಗಿದ್ದಾರೆ.

ಪತ್ನಿ ಬೆಂಗಳೂರಿಗೆ ಹೋಗಿದ್ದರಿಂದ ಮನೆಯಲ್ಲಿ ಅವರೊಬ್ಬರೇ ಇದ್ದರು. ಸ್ಥಳೀಯರು ಮಧ್ಯಾಹ್ನ ಮನೆಗೆ ಹೋದಾಗ ಅವರು ಇರಲಿಲ್ಲ. ಬೆಡ್ ರೂಮ್ ಕಪಾಟುಗಳು ತೆರೆದಿದ್ದು, ಬಟ್ಟೆ, ಕಾಗದ ಪತ್ರಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕೂಡಲೇ ಅವರು ಕುಟುಂಬದವರಿಗೆ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಮಹದೇವಯ್ಯ ಅವರ ಮೊಬೈಲ್ ಫೋನ್ ಸ್ವಿಚ್ಡ್ ಆಫ್ ಆಗಿದೆ. ಟವರ್ ಲೊಕೇಷನ್ ಮಾದೇಶ್ವರ ಬೆಟ್ಟದ ಭಾಗದಲ್ಲಿ ತೋರಿಸುತ್ತಿದೆ. ಇಲ್ಲಿಯವರೆಗೂ ಅವರ ಬಗ್ಗೆ ಯಾವುದೇ ಸುಳಿವು ಲಭ್ಯವಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚನ್ನಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು, ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಸ್ಥಳದಲ್ಲಿ ಪರಿಶೀಲನೆ ನಡೆಸುತ್ತಿದ್ದಾರೆ. ಮಹದೇವಯ್ಯ ಅವರ ಕಾರು ತೋಟದ ಮನೆಯಿಂದ ಸುಳ್ಳೇರಿ ಕಡೆಗೆ ತೆರಳಿದ್ದು, ಕಾರಿನ ಜಾಡು ಹಿಡಿದು ಶ್ವಾನದಳ ಸುಳ್ಳೇರಿವರೆಗೂ ತೆರಳಿ ವಾಪಸಾಗಿವೆ.

ಮನೆಯ ಆವರಣದಲ್ಲಿ ಎರಡು ಮೂರು ಕಾರು ಓಡಾಡಿರುವ ಗುರುತು ಪತ್ತೆಯಾಗಿದೆ. ಮನೆಯ ಒಳಗಿನ ಕಪಾಟಿನಲ್ಲಿ ಕಾಗದ ಪತ್ರ ಮತ್ತು ಫೈಲ್ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ನಗದು, ಚಿನ್ನಾಭರಣ ಕಳವಾಗಿಲ್ಲ. ಇದರಿಂದ ಅಪಹರಣದ ಶಂಕೆ ಬಲವಾಗತೊಡಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಂಗ್ರೆಸ್‌ನ ರಾಜ್ಯ ನಾಯಕರು ತೆಲಂಗಾಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತೆಲಂಗಾಣ ವಿಧಾನಸಭೆಗೆ ನಡೆದ ಚುನಾವಣೆಯ ಮತ ಎಣಿಕೆ ಭಾನುವಾರ (ಡಿ.3) ನಡೆಯಲಿದ್ದು, ನಾನು ಅಲ್ಲಿಗೆ ಹೋಗುತ್ತಿದ್ದೇನೆ. ಪಕ್ಷ ಯಾವ ಕೆಲಸ ನೀಡುತ್ತದೆಯೋ ಅದನ್ನು ಮಾಡುತ್ತೇನೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಿವಕುಮಾರ್ ಅಲ್ಲದೆ, ಸಚಿವರಾದ ಎನ್.ಎಸ್. ಬೋಸರಾಜು, ಡಾ.ಎಂ.ಸಿ. ಸುಧಾಕರ್, ಶಾಸಕರಾದ ಕೆ.ವೈ. ನಂಜೇಗೌಡ, ಪ್ರದೀಪ್ ಈಶ್ವರ್ ಈ ಹೈಕಮಾಂಡ್ ಸೂಚನೆ ನೀಡಿರುವ ಕಾರಣ ಈಗಾಗಲೇ ಹೈದರಾಬಾದ್‌ಗೆ ತೆರಳಿದ್ದಾರೆ.

ತೆಲಂಗಾಣದಲ್ಲಿ ಕೆ. ಚಂದ್ರಶೇಖರ ರಾವ್ ನೇತೃತ್ವದ ಬಿಆರ್‌ಎಸ್ ಮತ್ತು ಕಾಂಗ್ರೆಸ್ ನಡುವೆ ತೀವ್ರ ಪೈಪೋಟಿಯಿದೆ. ಎರಡೂ ಪಕ್ಷಗಳು ಗೆದ್ದ ಸ್ಥಾನಗಳ ಅಂತರ ಕಡಿಮೆಯಾದರೆ, ಕಾಂಗ್ರೆಸ್‌ನ ನೂತನ ಶಾಸಕರ ಖರೀದಿಗೆ ಬಿಜೆಪಿ ಜೊತೆ ಸೇರಿ ಬಿಆರ್‌ಎಸ್ ಯತ್ನಿಸಬಹುದೆಂಬ ಆತಂಕ ಕಾಂಗ್ರೆಸ್ ನಾಯಕರಲ್ಲಿದೆ.

ನೆರೆ ರಾಜ್ಯದ ಜವಾಬ್ದಾರಿ ನಮ್ಮದು: ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಶಿವಕುಮಾರ್, 'ನೆರೆ ರಾಜ್ಯದ ನಾಯಕರು ನಮ್ಮ ರಾಜ್ಯದ ಚುನಾವಣೆಯಲ್ಲಿ ಕೆಲಸ ಮಾಡಿದ್ದರು. ನಮ್ಮ ನಾಯಕರು ಅಲ್ಲಿನ ಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ. ಹೀಗಾಗಿ, ನೆರೆ ರಾಜ್ಯದ ಚುನಾವಣೆಯಲ್ಲಿ ನಮಗೆ ನಮ್ಮದೇ ಆದ ಜವಾಬ್ದಾರಿ ಇರುತ್ತದೆ' ಎಂದರು.

'ನಿಮ್ಮ ಪಕ್ಷದ ಶಾಸಕರನ್ನು ಅನ್ಯ ಪಕ್ಷದವರು ಸಂಪರ್ಕಿಸಿದ್ದಾರಾ, ಬೇರೆ ಪಕ್ಷಕ್ಕೆ ನಿಮ್ಮ ಶಾಸಕರು ಹೋಗುವ ಭೀತಿ ಇದೆಯೇ' ಎಂಬ ಪ್ರಶ್ನೆಗೆ, 'ನಮ್ಮ ಯಾವುದೇ ಶಾಸಕ ಬೇರೆ ಪಕ್ಷದ ಕಡೆ ಹೋಗುವುದಿಲ್ಲ. ಈ ಬಗ್ಗೆ ನಾವು ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಸಂಪರ್ಕ ಮಾಡಿದವರ ಬಗ್ಗೆ ನಮ್ಮ ಅಭ್ಯರ್ಥಿಗಳು ಮಾಹಿತಿ ನೀಡಿದ್ದಾರೆ. ನಾವು ಕೂಡ ಎಚ್ಚರಿಕೆ ವಹಿಸಿದ್ದೇವೆ' ಎಂದರು.

ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮಾತನಾಡಿ, 'ಬಿಜೆಪಿಯವರು 'ಆಪರೇಷನ್ ಕಮಲ' ನಡೆಸಲು ಸಜ್ಜಾಗಿದ್ದಾರೆ. ನಮ್ಮ ಪಕ್ಷದ ಶಾಸಕರನ್ನು ಸೆಳೆಯಲು ಅವರು ಮುಂದಾಗಬಹುದು. ಆದರೆ, ಶಾಸಕರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ನಮಗೆ ಇದೆ. ಅಂತಹ ಸಂದರ್ಭ ಬಂದರೆ ಶಾಸಕರನ್ನು ಕರ್ನಾಟಕಕ್ಕೆ ಕರೆ ತರಲಾಗುವುದು' ಎಂದರು.

> ಈಚೆಗೆ ನಡೆದ ಪಂಚರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಮೂರು ಕಡೆಗಳಲ್ಲಿ ಜಯ ಸಾಧಿಸಲಿದೆ. ರಾಜಸ್ಥಾನದಲ್ಲಿ ಫಿಫ್ಟಿ-ಫಿಫ್ಟಿ ಸಾಧ್ಯತೆ ಇದೆ
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

> ವಿಧಾನಸಭೆ ಚುನಾವಣೆ ನಡೆದ ಐದು ರಾಜ್ಯಗಳ ಪೈಕಿ, ಮಿಜೋರಾಂ ಬಿಟ್ಟು ಉಳಿದ ನಾಲ್ಕು ರಾಜ್ಯಗಳಲ್ಲಿ ನಮಗೆ ಜಯ ಸಿಗಲಿದೆ
> **ಮಲ್ಲಿಕಾರ್ಜುನ ಖರ್ಗೆ**, ಎಐಸಿಸಿ ಅಧ್ಯಕ್ಷ

ಕಾಂಗ್ರೆಸ್ ಗೆದ್ದರೆ ಸಿ.ಎಂ ಆಯ್ಕೆ ಸವಾಲು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಮತಗಟ್ಟೆ ಸಮೀಕ್ಷೆಗಳ 'ಭವಿಷ್ಯ' ನಿಜವಾಗಿ ತೆಲಂಗಾಣದಲ್ಲಿ ಕಾಂಗ್ರೆಸ್‌ಗೆ ಬಹುಮತ ಲಭಿಸಿದರೆ, ಮುಖ್ಯಮಂತ್ರಿ ಹುದ್ದೆಗೆ ಸಮರ್ಥರನ್ನು ಆಯ್ಕೆ ಮಾಡುವ ಸವಾಲು ಪಕ್ಷದ ಹೈಕಮಾಂಡ್ ಮುಂದಿದೆ.

ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಾಂಗ್ರೆಸ್ ತನ್ನ ಹೆಜ್ಜೆ ಇಡಬೇಕಿದೆ. ತೆಲಂಗಾಣದಲ್ಲಿ ಪಕ್ಷವು ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೇರಲಿದೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಹೇಳಿವೆ. 119 ಸ್ಥಾನಗಳಲ್ಲಿ 60 ರಿಂದ 70 ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲಲಿದೆ ಎಂದು ಭವಿಷ್ಯ ನುಡಿದಿವೆ.

'ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿಯ ಆಯ್ಕೆ ವೇಳೆ ಕಾಂಗ್ರೆಸ್ ಹೈಕಮಾಂಡ್ ಸಮತೋಲನದ ನಡೆ ಇಡಬೇಕಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಸ್ವಲ್ಪ ಎಡವಟ್ಟಾದರೂ, ಅದು ಮುಂಬರುವ ಲೋಕಸಭೆ ಚುನಾವಣೆ ವೇಳೆ ಪರಿಣಾಮ ಬೀರುವ ಸಾಧ್ಯತೆಯಿದೆ. ಹೆಚ್ಚು ಸ್ಥಾನಗಳನ್ನು ಗೆಲ್ಲಬೇಕೆಂಬ ಕಾಂಗ್ರೆಸ್ ಕನಸಿಗೆ ಹಿನ್ನಡೆ ಉಂಟಾಗುವ ಸಂಭವ ಇದೆ' ಎಂದು ರಾಜಕೀಯ ವಿಶ್ಲೇಷಕರೊಬ್ಬರು ಹೇಳಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎ.ರೇವಂತ ರೆಡ್ಡಿ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಟ್ಟಿ ವಿಕ್ರಮಾರ್ಕ ಅವರ ಹೆಸರು ಮುಂಚೂಣಿಯಲ್ಲಿದೆ. ಇತರ ನಾಯಕರಾದ ಎನ್.ಉತ್ತಮ್ ಕುಮಾರ್ ರೆಡ್ಡಿ, ಕೋಮಟಿ ರೆಡ್ಡಿ ವೆಂಕಟ ರೆಡ್ಡಿ ಮತ್ತು ದಾಮೋದರ್ ರಾಜನರಸಿಂಹ ಅವರೂ ಆಕಾಂಕ್ಷಿಗಳಾಗಿದ್ದಾರೆ.

ಎಐಸಿಸಿ ಪ್ರತಿನಿಧಿಗಳು ಹೈದರಾಬಾದ್‌ಗೆ: ಪಕ್ಷದ ಶಾಸಕರನ್ನು ಒಗ್ಗಟ್ಟಾಗಿಡುವ ಕರ್ತವ್ಯಕ್ಕೆ ಎಐಸಿಸಿ ತನ್ನ ಕೆಲವು ಮುಖಂಡರು ಮತ್ತು ಪ್ರತಿನಿಧಿಗಳನ್ನು ಹೈದರಾಬಾದ್‌ಗೆ ಕಳುಹಿಸಿದೆ. ಗೆಲುವು ಪಡೆಯುವ ಅಭ್ಯರ್ಥಿಗಳು ಅಧಿಕೃತ ಫಲಿತಾಂಶ ಹೊರಬಿದ್ದ ಕೂಡಲೇ ನಗರದ ಪಂಚತಾರಾ ಹೋಟೆಲ್‌ವೊಂದರಲ್ಲಿ ತಂಗಿರುವ ಪಕ್ಷದ ಮುಖಂಡರ ಬಳಿ ತೆರಳಬೇಕು ಎಂಬ ಸೂಚನೆ ನೀಡಲಾಗಿದೆ.

'ಇಂಡಿಯಾ' ಮೇಲೆ ಫಲಿತಾಂಶ ಪರಿಣಾಮ

ನವದೆಹಲಿ (ಪಿಟಿಐ): ಐದು ರಾಜ್ಯಗಳ ಚುನಾವಣೆಯ ಫಲಿತಾಂಶದ ಕಡೆಗೆ 'ಇಂಡಿಯಾ' ಮೈತ್ರಿಕೂಟದ ಸದಸ್ಯಪಕ್ಷಗಳು ಗಮನ ಹರಿಸಿವೆ. ಚುನಾವಣೆಯಲ್ಲಿ ಕಾಂಗ್ರೆಸ್ ಹೇಗೆ ಪ್ರದರ್ಶನ ನೀಡಿದೆ ಎಂಬುದು ಮೈತ್ರಿಕೂಟದ ಮುಂದಿನ ನಡೆಯ ಮೇಲೆ ಪ್ರಭಾವ ಬೀರಲಿದೆ.

ಟಿಎಂಸಿ, ಎಎಪಿ ಮತ್ತು ಸಮಾಜವಾದಿ ಪಕ್ಷಗಳು (ಎಸ್‌ಪಿ) ಈ ಹಿಂದೆಯೇ ಕಾಂಗ್ರೆಸ್ ಜೊತೆ ಸ್ಥಾನ ಹಂಚಿಕೆ ಕುರಿತು ಮಾತನಾಡಲು ಮುಂದಾಗಿದ್ದವು. ವಿಧಾನಸಭೆ ಚುನಾವಣೆಗಳ ಫಲಿತಾಂಶದ ನಂತರ ಈ ಕುರಿತು ಚರ್ಚಿಸೋಣ ಎಂದಿದ್ದ ಕಾಂಗ್ರೆಸ್ ಈ ಪ್ರಸ್ತಾವನೆಯನ್ನು ಬಾಕಿ ಇರಿಸಿತ್ತು.

ಸದಸ್ಯ ಪಕ್ಷಗಳ ಜೊತೆ ಸದ್ಯ ಮಾತುಕತೆ ನಡೆಸುವುದು ಬೇಡ ಎಂದು ಕಾಂಗ್ರೆಸ್‌ನ ಉನ್ನತ ನಾಯಕತ್ವವು ಆಗಸ್ಟ್ ಅಂತ್ಯದಲ್ಲಿ ಮುಂಬೈನಲ್ಲಿ ನಡೆದಿದ್ದ 'ಇಂಡಿಯಾ' ಸಭೆ ಬಳಿಕ ತೀರ್ಮಾನಿಸಿತ್ತು.

ಚುನಾವಣೆಯಲ್ಲಿ ಉತ್ತಮ ಫಲಿತಾಂಶ ದಾಖಲಿಸುವ ನಿರೀಕ್ಷೆ ಹೊಂದಿರುವ ಕಾಂಗ್ರೆಸ್, ಇದೇ ನೆಪದಲ್ಲಿ ಹೆಚ್ಚು ಸ್ಥಾನಗಳಿಗಾಗಿ ಚೌಕಾಸಿ ಮಾಡುವ ಉದ್ದೇಶ ಹೊಂದಿದೆ ಎನ್ನಲಾಗಿದೆ.

ಭಾನುವಾರ ಫಲಿತಾಂಶ ಹೊರಬೀಳುತ್ತಿದ್ದಂತೆ ದೊಡ್ಡಮಟ್ಟದಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಲಿವೆ. ಪ್ರಾದೇಶಿಕ ಪಕ್ಷಗಳ ಜೊತೆ ಇರುವ ಭಿನ್ನಾಭಿಪ್ರಾಯವನ್ನು ತೊಡೆದುಹಾಕುವಂತೆ ಮತ್ತು 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಮಣಿಸಲು ಅನುಕೂಲವಾಗುವ ನಿಟ್ಟಿನಲ್ಲಿ ಸ್ಥಾನ ಹಂಚಿಕೆ ಆಗಬೇಕು ಎಂಬ ದಿಸೆಯಲ್ಲಿ ಮಾತುಕತೆಗಳು ಸದಸ್ಯ ಪಕ್ಷಗಳ ನಡುವೆ ನಡೆಯಲಿವೆ.

ವಿಧಾನಸಭೆ ಚುನಾವಣೆಯಲ್ಲಿ ಮಿತ್ರಪಕ್ಷಗಳ ಜೊತೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಕಾಂಗ್ರೆಸ್ ಹಿಂದೇಟು ಹಾಕಿತ್ತು. ಇದು ಎಸ್‌ಪಿ ಸೇರಿ, ಜೆಡಿಯು ಸೇರಿ ಹಲವು ಪಕ್ಷಗಳ ಅಸಮಾಧಾನಕ್ಕೆ ಕಾರಣವಾಗಿತ್ತು. ಮೈತ್ರಿಕೂಟವು ಲೋಕಸಭೆ ಚುನಾವಣೆಯಲ್ಲಿ ಮಾತ್ರ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲಿದೆ ಎಂದು ಕಾಂಗ್ರೆಸ್ ನಾಯಕರು ವಾದಿಸಿದ್ದರು.

ಛತ್ತೀಸಗಢ, ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಬಿಜೆಪಿ ಜೊತೆ ನೇರ ಸ್ಪರ್ಧೆಯಲ್ಲಿರುವುದು ಕಾಂಗ್ರೆಸ್ ಮಾತ್ರ. ಕಾಂಗ್ರೆಸ್ ಮಾತ್ರವೇ ತೆಲಂಗಾಣದಲ್ಲೂ ಬಿಆರ್‌ಎಸ್‌ಗೆ ಸ್ಪರ್ಧೆ ಒಡ್ಡಿರುವುದು ಎಂದು ಪಕ್ಷವು ಆ ವೇಳೆ ಪ್ರತಿಪಾದಿಸಿತ್ತು.

ಸಭೆ ನಡೆಸಿದ ರಾಹುಲ್

ತೆಲಂಗಾಣದಲ್ಲಿ ಭಾನುವಾರ ಮತಎಣಿಕೆ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಲು ದಿನವಿಡೀ ಮತಎಣಿಕೆ ಕೇಂದ್ರಗಳಲ್ಲಿ ಇರುವಂತೆ ಅಭ್ಯರ್ಥಿಗಳಿಗೆ ಮತ್ತು ಏಜೆಂಟರಿಗೆ ಕಾಂಗ್ರೆಸ್ ಸೂಚಿಸಿದೆ.

ಕಾಂಗ್ರೆಸ್‌ನ ಹಿರಿಯ ನಾಯಕರ ಜತೆ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ವರ್ಚುವಲ್ ಸಭೆ ನಡೆಸಿದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1617 (1615)
ಸೋಯಾ (ರಿಫೈನ್ಡ್)	₹942 (942)
ಸೂರ್ಯಕಾಂತಿ (ರಿಫೈನ್ಡ್)	₹945 (950)
ಪಾಮೋಲಿನ್	₹845 (845)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹515

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹128

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹328-495
ದ್ವಿತಳಿ (ಬಿ.ವಿ)	₹311-595

ಎಫ್‌ಪಿಐ: ಹೆಚ್ಚುತ್ತಿದೆ ಒಳಹರಿವು


ಷೇರುಪೇಟೆ ದಿಕ್ಕು ನಿರ್ಧರಿಸಲಿವೆ ರಾಜ್ಯಗಳ ಚುನಾವಣಾ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮತ್ತೆ ಭಾರತದಲ್ಲಿ ಷೇರುಗಳನ್ನು ಖರೀದಿಸಲು ಆರಂಭಿಸಿದ್ದಾರೆ. ಅಮೆರಿಕದ ಬಾಂಡ್ ಗಳಿಕೆ ಪ್ರಮಾಣ ಕಡಿಮೆ ಆಗಿರುವುದು ಮತ್ತು ಭಾರತದ ಷೇರುಪೇಟೆಯಲ್ಲಿ ಉತ್ತಮ ವಹಿವಾಟು ನಡೆಯುತ್ತಿರುವುದು ಮತ್ತೆ ಖರೀದಿ ನಡೆಸುವಂತೆ ಮಾಡುತ್ತಿದೆ. 2023ರಲ್ಲಿ ನವೆಂಬರ್ 30ರವರೆಗೆ ಒಟ್ಟು ₹1.04 ಲಕ್ಷ ಕೋಟಿ ಹೂಡಿಕೆ ಮಾಡಿದ್ದಾರೆ.


ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ನವೆಂಬರ್ ತಿಂಗಳಿನಲ್ಲಿ ₹9 ಸಾವಿರ ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಅದಕ್ಕೂ ಹಿಂದೆ ಅಂದರೆ ಆಗಸ್ಟ್‌ನಿಂದ ನವೆಂಬರ್ 15ರವರೆಗಿನ ಅವಧಿಯಲ್ಲಿ ₹83,422 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

5 ರಾಜ್ಯಗಳ ಚುನಾವಣಾ ಫಲಿತಾಂಶವು ಮುಂದಿನ ದಿನಗಳಲ್ಲಿ ಷೇರುಪೇಟೆಗಳ ದಿಕ್ಕನ್ನು ನಿರ್ಧರಿಸಲಿವೆ. ಫಲಿತಾಂಶವು ಒಂದೊಮ್ಮೆ ಆಡಳಿತದಲ್ಲಿರುವ ಪಕ್ಷಗಳ ಪರವಾಗಿ ಬಂದರೆ ಮಾರುಕಟ್ಟೆಯು ಇನ್ನಷ್ಟು ಏರಿಕೆ ಕಾಣಲಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.



ಮಾರುಕಟ್ಟೆಯು ಏರುಮುಖವಾಗಿದ್ದರೆ ವಿದೇಶಿ ಹೂಡಿಕೆದಾರರು ಅದರ ಲಾಭ ಪಡೆದುಕೊಳ್ಳಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಷೇರುಗಳನ್ನು ಮಾರಾಟ ಮಾಡಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಜಾಗತಿಕ ಆರ್ಥಿಕ ಬೆಳವಣಿಗೆಯ ಕುರಿತು ಅನಿಶ್ಚಿತತೆ ಇದ್ದರೂ ಭಾರತದ ಸ್ಥಿತಿ ಉತ್ತಮವಾಗಿದೆ ಎನ್ನುವುದನ್ನು ಜುಲೈ–ಸೆಪ್ಟೆಂಬರ್ ತ್ರೈಮಾಸಿಕದ ಅಂಕಿ–ಅಂಶಗಳು ಮತ್ತು ತಯಾರಿಕಾ ವಲಯದ ಬೆಳವಣಿಗೆಯು ಹೇಳುತ್ತಿವೆ. ಅಮೆರಿಕದ ಬಾಂಡ್ ಗಳಿಕೆಯು ಕಡಿಮೆ ಆಗುತ್ತಿರುವುದು ಸಹ ಷೇರುಪೇಟೆಯಲ್ಲಿ ಸಕಾರಾತ್ಮಕ ಚಲನೆಗೆ ಕಾರಣವಾಗುತ್ತಿದೆ ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.



ಬ್ರಿಗೇಡ್‌ನಿಂದ ಹೊಸ ವಸತಿ ಯೋಜನೆ

ನವದೆಹಲಿ (ಪಿಟಿಐ): ಬ್ರಿಗೇಡ್ ಎಂಟರ್‌ಪ್ರೈಸಸ್ ಕಂಪನಿಯ ಬೆಂಗಳೂರಿನ ವೈಟ್‌ಫೀಲ್ಡ್–ಸರ್ಜಾಪುರ ರಸ್ತೆಯ ಬಳಿ 14 ಎಕರೆಯಲ್ಲಿ ಹೊಸ ವಸತಿ ಯೋಜನೆ ಆರಂಭಿಸಿದೆ. ಇದರಿಂದ ಒಟ್ಟು ₹2 ಸಾವಿರ ಕೋಟಿ ವರಮಾನದ ನಿರೀಕ್ಷೆಯನ್ನು ಹೊಂದಿದೆ.

ಮುಂಬೈ ಧಾರಣೆ

ಶೇಂಗಾ

02-12-2023

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1627 (1625)
ಒಂದು ವಾರದ ಡೆಲಿವರಿ	1622 (1620)
ಸೋಯಾ ಕಚ್ಚಾ	920 (922)
ಪಾಮ್ ವಾರದ ಡೆಲಿವರಿ	843 (843)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
63,150 (62,500)
ಬೆಳ್ಳಿ ಕೆ.ಜಿ 76,850 (76,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮನೆಗಳಿಗೆ ಹೆಚ್ಚಿದ ಬೇಡಿಕೆ ನಿರ್ಮಾಣ ಚಟುವಟಿಕೆಗೆ ವೇಗ

ನವದೆಹಲಿ (ರಾಯಿಟರ್ಸ್): ದೇಶದಲ್ಲಿ ಮನೆಗಳಿಗೆ ಭಾರಿ ಬೇಡಿಕೆ ಇದೆ ಎನ್ನುವುದನ್ನು ಈಚೆಗೆ ಬಿಡುಗಡೆ ಆಗಿರುವ ಜಿಡಿಪಿಯ ಅಂಕಿ–ಅಂಶಗಳೇ ಹೇಳುತ್ತಿವೆ. ಮುಂದಿನ ಕೆಲ ವರ್ಷಗಳಲ್ಲಿಯೂ ವಸತಿ ಉದ್ಯಮವು ಆರ್ಥಿಕತೆಗೆ ಶಕ್ತಿ ತುಂಬುವ ನಿರೀಕ್ಷೆಯನ್ನು ಇದು ಮೂಡಿಸಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಗುರುವಾರ ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ನಿರ್ಮಾಣ ವಲಯವು ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 13.3ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಶೇ 7.9ರಷ್ಟು ಇತ್ತು.

ಮನೆಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದರಿಂದಲೇ ನಿರ್ಮಾಣ ವಲಯದ ಚಟುವಟಿಕೆ ಏರಿಕೆ ಕಂಡಿದೆ ಎಂದು ತಜ್ಞರು ತಿಳಿಸಿದ್ದಾರೆ. ನಿರ್ಮಾಣ ವಲಯದ ಉತ್ತಮ ಬೆಳವಣಿಗೆಯು ಆರ್ಥಿಕ ಪ್ರಗತಿಗೆ ಗಣನೀಯವಾದ ಕೊಡುಗೆ ನೀಡಿದೆ. ಮುಂಬರುವ ತ್ರೈಮಾಸಿಕಗಳಲ್ಲಿಯೂ ಇದೇ ರೀತಿಯ ಬೆಳವಣಿಗೆ ನಿರೀಕ್ಷಿಸಲಾಗಿದೆ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್‌ನ ಆರ್ಥಿಕ ತಜ್ಞ ಸುನಿಲ್ ಸಿನ್ಹಾ ಹೇಳಿದ್ದಾರೆ.

ಮುಖ್ಯಾಂಶಗಳು

- ಜುಲೈ–ಸೆಪ್ಟೆಂಬರ್‌ನಲ್ಲಿ ಮನೆಗಳ ಮಾರಾಟ ಶೇ 36ರಷ್ಟು ಏರಿಕೆ
- ಹೊಸ ವಸತಿ ಯೋಜನೆಗಳು ಶೇ 24ರಷ್ಟು ಹೆಚ್ಚಳ



ಬೆಂಗಳೂರು, ಮುಂಬೈ, ದೆಹಲಿ ಸೇರಿದಂತೆ ಪ್ರಮುಖ 7 ನಗರಗಳಲ್ಲಿ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಮನೆಗಳ ಮಾರಾಟ ಶೇ 36ರಷ್ಟು ಹೆಚ್ಚಾಗಿದ್ದು, 1.12 ಲಕ್ಷ ಮನೆಗಳು ಮಾರಾಟ ಆಗಿವೆ. ಮನೆಗಳ ಬೆಲೆಯು ಶೇ 8–18ರವರೆಗೂ ಏರಿಕೆ ಕಂಡಿದ್ದರೂ ಮಾರಾಟವು ಈ ಪ್ರಮಾಣದ ಬೆಳವಣಿಗೆ ಸಾಧಿಸಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ಅನರಾಕ್ ಹೇಳಿದೆ. ಹೊಸ ವಸತಿ ಯೋಜನೆಗಳು ಶೇ 24ರಷ್ಟು ಹೆಚ್ಚಳ ಆಗಿವೆ ಎಂದೂ ಅದು ತಿಳಿಸಿದೆ.

ನಿರ್ಮಾಣ ಕಂಪನಿಗಳ ಪ್ರಕಾರ, ಕರ್ನಾಟಕ, ತಮಿಳುನಾಡು ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಸಣ್ಣ ನಗರಗಳಲ್ಲಿಯೂ ಮನೆಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಕೈಗೆಟಕುವ ಮನೆಗಳ ಲಭ್ಯತೆ ಹೆಚ್ಚಾಗುವಂತೆ ಮಾಡಲು ಕೇಂದ್ರ ಸರ್ಕಾರವು ಸಬ್ಸಿಡಿ ನೀಡುತ್ತಿದೆ. ಇದರಿಂದಾಗಿ ದೇಶದ ಸಣ್ಣ ನಗರಗಳಲ್ಲಿಯೂ ನಿರ್ಮಾಣ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದೆ.

ರಿಯಲ್ ಎಸ್ಟೇಟ್ ಕಂಪನಿಗಳ ಷೇರು ಮೌಲ್ಯವೂ ಏರಿಕೆ ಕಾಣುತ್ತಿದೆ. ಪ್ರೆಸ್ಟೀಜ್ ಎಸ್ಟೇಟ್ ಪ್ರಾಜೆಕ್ಟ್ಸ್ ಕಂಪನಿಯು ಶೇ 120ರಷ್ಟು, ಡಿಎಲ್‌ಎಫ್ ಶೇ 67 ಮತ್ತು ಗೋದ್ರೇಜ್ ಪ್ರಾಪರ್ಟೀಸ್ ಶೇ 52ರಷ್ಟು ಗಳಿಕೆ ಕಂಡುಕೊಂಡಿವೆ. ನಿಫ್ಟಿ ರಿಯಾಲ್ಟಿ ಇಂಡೆಕ್ಸ್ ಈ ವರ್ಷ ಶೇ 67ರಷ್ಟು ಏರಿಕೆ ಕಂಡಿದೆ.

ನಕಲಿ ನೋಟು ಜಾಲ ಭೇದಿಸಿದ ಎನ್‌ಐಎ

ನವದೆಹಲಿ (ಪಿಟಿಐ): ಬಳ್ಳಾರಿ ಜಿಲ್ಲೆ ಹಾಗೂ ಮೂರು ರಾಜ್ಯಗಳ ವಿವಿಧ ಸ್ಥಳಗಳಲ್ಲಿ ಶನಿವಾರ ಶೋಧ ಕಾರ್ಯ ನಡೆಸಿರುವ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ನಕಲಿ ನೋಟು ಜಾಲವನ್ನು ಭೇದಿಸಿದೆ.

₹500, ₹200 ಮತ್ತು ₹100 ಮುಖಬೆಲೆಯ ನಕಲಿ ನೋಟುಗಳನ್ನು, ಮುದ್ರಣ ಕಾಗದ ಮತ್ತು ಇತರ ಡಿಜಿಟಲ್ ಸಾಧನಗಳನ್ನು ವಶಪಡಿಸಿ ಕೊಳ್ಳಲಾಗಿದೆ ಎಂದು ಎನ್‌ಐಎ ಮೂಲಗಳು ತಿಳಿಸಿವೆ. ಗಡಿಯಾಚೆಯಿಂದ ನಕಲಿ ನೋಟು ಸಾಗಣೆ ಮಾಡಿ ಅದನ್ನು ದೇಶದಲ್ಲಿ ಚಲಾವಣೆಗೆ ತರಲು ಸಂಚು ರೂಪಿಸಿದ ಆರೋಪದಲ್ಲಿ ನವೆಂಬರ್ 24ರಂದು ದಾಖಲಾಗಿದ್ದ ಪ್ರಕರಣವನ್ನು ಆಧರಿಸಿ ಎನ್‌ಐಎ ಶೋಧ ಕಾರ್ಯ ನಡೆಸಿದೆ ಎಂದೂ ಹೇಳಿವೆ.



ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ರಾಹುಲ್ ತಾನಾಜಿ ಪಾಟೀಲ್ ಅಲಿಯಾಸ್ ಜಾವೇದ್, ಉತ್ತರಪ್ರದೇಶದ ಶಹಜಹಾನ್‌ಪುರ ಜಿಲ್ಲೆಯ ವಿವೇಕ್ ಠಾಕೂರ್ ಅಲಿಯಾಸ್ ಆದಿತ್ಯ ಸಿಂಗ್ ಮತ್ತು ಬಳ್ಳಾರಿ ಜಿಲ್ಲೆಯ ಮಹೇಂದ್ರ ಎಂಬುವವರಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆದಿದೆ. ಮಹೇಂದ್ರ ಅವರ ಮನೆಯಿಂದ ನಕಲಿ ನೋಟು ಮುದ್ರಿಸುವ ಯಂತ್ರ ವಶಪಡಿಸಿಕೊಳ್ಳಲಾಗಿದೆ ಎಂದೂ ರಾಷ್ಟ್ರೀಯ ತನಿಖಾ ಸಂಸ್ಥೆ ಹೇಳಿದೆ. ಮಹಾರಾಷ್ಟ್ರದ ಯವತ್ಮಾಳ್ ಜಿಲ್ಲೆಯ ಶಿವ ಪಾಟೀಲ್ ಅಲಿಯಾಸ್ ಭೀಮ್‌ರಾವ್ ಮತ್ತು ಬಿಹಾರದ ರೋಹತಾಸ್ ಜಿಲ್ಲೆಯ ಶಶಿಭೂಷಣ್ ಎಂಬುವರಿಗೆ ಸೇರಿದ ಸ್ಥಳಗಳಲ್ಲೂ ಶೋಧ ನಡೆದಿದೆ.

ಡ್ಯಾಂಗೆ ಸಿಆರ್‌ಪಿಎಫ್ ನಿಯೋಜನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ನಾಗಾರ್ಜುನ ಸಾಗರ ಜಲಾಶಯದ ವಿಚಾರವಾಗಿ ತೆಲಂಗಾಣ–ಆಂಧ್ರಪ್ರದೇಶ ಮಧ್ಯೆ ಪ್ರಕ್ಷುಬ್ಧ ವಾತಾವರಣ ಉಂಟಾದ ಬೆನ್ನಲ್ಲೇ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿದೆ. ಜಲಾಶಯವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕೇಂದ್ರೀಯ ಮೀಸಲು ಪೊಲೀಸ್ ಪಡೆಯನ್ನು (ಸಿಆರ್‌ಪಿಎಫ್) ಶನಿವಾರ ನಿಯೋಜಿಸಿದೆ.

ಒಟ್ಟು 26 ಗೇಟ್‌ಗಳಲ್ಲಿ 13 ಗೇಟ್‌ಗಳನ್ನು ಗುರುವಾರ ವಶಕ್ಕೆ ತೆಗೆದು ಕೊಂಡ ಆಂಧ್ರಪ್ರದೇಶ ಪೊಲೀಸರು, ಜಲಾಶಯದ ಸುತ್ತ ಭಾರಿ ಭದ್ರತೆ ಒದಗಿಸಿದ್ದರು. ಕೂಡಲೇ ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಳ್ಳಬೇಕು ಎಂದು ತೆಲಂಗಾಣ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿತ್ತು.

ಕೇಂದ್ರ ಜಲಶಕ್ತಿ ಕಾರ್ಯದರ್ಶಿ ದೇವಶ್ರೀ ಮುಖರ್ಜಿ ಅವರು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಅಧಿಕಾರಿಗಳ ಜೊತೆ ಶನಿವಾರ ವರ್ಚುವಲ್ ಸಭೆ ನಡೆಸಿದರು. ಕೇಂದ್ರ ಗೃಹ ಕಾರ್ಯದರ್ಶಿ ಅವರು ಉಭಯ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಡಿಜಿಪಿಗಳ ಜೊತೆ ಪ್ರತ್ಯೇಕ ಸಭೆ ನಡೆಸಿದರು.

13 ಗೇಟ್‌ಗಳನ್ನು ವಶಕ್ಕೆ ತೆಗೆದುಕೊಂಡ ಬಳಿಕ ಆಂಧ್ರಪ್ರದೇಶವು ಜಲಾಶಯದ ಬಲಭಾಗದ ನಾಲೆಗೆ ನೀರು ಹರಿಯುವಂತೆ ಮಾಡಿದೆ. ಈ ಬಳಿಕವೂ 5 ಟಿಎಂಸಿ ಹೆಚ್ಚುವರಿ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ರಾಜ್ಯಕ್ಕೆ ಬಿಡುಗಡೆ ಮಾಡಬೇಕು ಎಂದು ಸಭೆಯಲ್ಲಿ ಮನವಿ ಮಾಡಿದೆ.

ಕೃಷ್ಣಾ ನದಿ ನೀರು ನಿರ್ವಹಣಾ ಮಂಡಳಿಯು (ಕೆಆರ್‌ಎಂಬಿ) ಈ ಮನವಿ ಕುರಿತು ಸೋಮವಾರ ನಿರ್ಧಾರ ತೆಗೆದುಕೊಳ್ಳುವವರಗೆ ನಾಲೆಗೆ ನೀರು ಹರಿಸುವುದನ್ನು ನಿಲ್ಲಿಸಬೇಕು ಎಂದು ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ಆಂಧ್ರಪ್ರದೇಶಕ್ಕೆ ಸೂಚಿಸಿದ್ದಾರೆ. ಡಿಸೆಂಬರ್ 6ರಂದು ದೆಹಲಿಯಲ್ಲಿ ಸಭೆ ನಡೆಸುವುದಾಗಿಯೂ ತಿಳಿಸಿದ್ದಾರೆ ಎಂದು ಆಂಧ್ರ ಪ್ರದೇಶದ ನೀರಾವರಿ ಅಧಿಕಾರಿಗಳು ತಿಳಿಸಿದ್ದಾರೆ.

ಚಂಡಮಾರುತ: ಶಾಲೆಗಳಿಗೆ ರಜೆ, ರೈಲು ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ಚೆನ್ನೈ: ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ರೂಪುಗೊಂಡಿರುವ ಪರಿಣಾಮ ಹಲವು ಭಾಗಗಳಲ್ಲಿ ಡಿ.5ರವರೆಗೆ ಭಾರಿ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಕೆ ನೀಡಿದ ಬೆನ್ನಲ್ಲೇ, ತಮಿಳುನಾಡು ಚಂಡಮಾರುತ ಎದುರಿಸಲು ಸಜ್ಜಾಗಿದೆ.

ಚೆನ್ನೈ, ತಿರುವಲ್ಲೂರು, ಚೆಂಗಲ್‌ಪಟ್ಟು ಮತ್ತು ಕಾಂಚೀಪುರಂ ಜಿಲ್ಲಾಡಳಿತಗಳು ಡಿ.4ರಂದು ಶಾಲೆ ಮತ್ತು ಕಾಲೇಜುಗಳಿಗೆ ರಜೆ ಘೋಷಿಸಿವೆ. ಬೀಚ್‌ಗಳಿಗೆ ಜನರು ಭೇಟಿ ನೀಡಬಾರದು ಎಂದು ಗ್ರೇಟರ್ ಚೆನ್ನೈ ಪೊಲೀಸರು ಸೂಚಿಸಿದ್ದಾರೆ. ತಿರುವಲ್ಲೂರು ಮತ್ತು ಚೆನ್ನೈ ಜನರು ಡಿ.4 ಮತ್ತು 5ರಂದು ಮನೆಯ ಒಳಗೇ ಇರುವಂತೆ ಐಎಂಡಿ ತಿಳಿಸಿದೆ. ಡಿ.3ರಿಂದ 7ರವರೆಗೆ ಸುಮಾರು 144 ರೈಲುಗಳ ಸೇವೆಯನ್ನು ರದ್ದಾಗಿವೆ.

ಬಂಗಾಳಕೊಲ್ಲಿಯಲ್ಲಿ ಡಿ.3ರ ವೇಳೆಗ ಚಂಡಮಾರುತ ರೂಪುಗೊಳ್ಳುವ ಸಾಧ್ಯತೆ ಇದೆ.



ಮೀನುಗಾರಿಕಾ ಬೋಟ್‌ಗಳು ಕಾಸಿಮೇದು ಬಂದರಿನಲ್ಲಿ ಲಂಗರು ಹಾಕಿರುವುದು –ಪಿಟಿಐ ಚಿತ್ರ

ಇದು ಡಿ.4ರಂದು ಆಂಧ್ರಪ್ರದೇಶ, ತಮಿಳುನಾಡು ಕರಾವಳಿಗೆ ಅದು ಅಪ್ಪಳಿಸಲಿದೆ. ಇದರ ಪರಿಣಾಮ 16 ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಎಚ್ಚರಿಕೆ ನೀಡಿದ ಬೆನ್ನಲ್ಲೇ ತಮಿಳುನಾಡು ಸರ್ಕಾರ ಈ ಮುಂಜಾಗ್ರತಾ ಕ್ರಮ ಕೈಗೊಂಡಿದೆ. ಈ ಚಂಡಮಾರುತಕ್ಕೆ ಮ್ಯಾನ್ಮಾರ್ ಸಲಹೆಯಂತೆ 'ಮಿಚುಂಗ್' ಎಂದು ಹೆಸರಿಡಲಾಗಿದೆ.

ಪ್ಯಾಲೆಸ್ಟೀನ್‌ನ 240 ಮಂದಿ ಸಾವು

ಗಾಜಾ: ಇಸ್ರೇಲ್ ದಾಳಿ ತೀವ್ರ

ಗಾಜಾ ಪಟ್ಟಿ/ ಖಾನ್ ಯೂನಿಸ್(ಎಎಫ್‌ಪಿ/ ಎಪಿ): ಹಮಾಸ್ ಬಂಡುಕೋರರನ್ನು ಗುರಿಯಾಗಿಸಿಕೊಂಡು ಗಾಜಾ ಮೇಲೆ ಇಸ್ರೇಲ್ ಶನಿವಾರವೂ ದಾಳಿ ನಡೆಸಿದ್ದು ಬಾಂಬ್, ರಾಕೆಟ್ ದಾಳಿಯಿಂದಾಗಿ ಇಡೀ ಗಾಜಾ ನಗರವೇ ದಟ್ಟ ಹೊಗೆಯಲ್ಲಿ ಮುಳುಗಿದೆ. 'ಶುಕ್ರವಾರ ಬೆಳಿಗ್ಗೆಯಿಂದ ಈ ವರೆಗೆ 240 ಮಂದಿ ಮೃತಪಟ್ಟಿದ್ದಾರೆ' ಎಂದು ಹಮಾಸ್ ಹೇಳಿದೆ.

'ಕದನ ವಿರಾಮ ಅಂತ್ಯಗೊಂಡ ನಂತರ 400ಕ್ಕೂ ಹೆಚ್ಚು ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ಭೂ, ವಾಯು, ನೌಕಾ ಪಡೆಗಳೂ ಇದರಲ್ಲಿ ಭಾಗಿಯಾಗಿದ್ದವು. ಯುದ್ಧ ವಿಮಾನಗಳು ಖಾನ್ ಯೂನಿಸ್ ನಗರದಲ್ಲಿ 50ಕ್ಕೂ ಹೆಚ್ಚು ನೆಲೆಗಳನ್ನು ನಾಶಪಡಿಸಿವೆ' ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಇಸ್ರೇಲ್ ದಾಳಿ ನಡೆಸುತ್ತಿದ್ದಂತೆಯೇ ಹಮಾಸ್ ತನ್ನ ಸೇನಾ ಪಡೆಗಳಿಗೆ 'ಯುದ್ಧ ಆರಂಭಿಸಿ–ಗಾಜಾಪಟ್ಟಿ ಕಾಪಾಡಿ' ಎಂಬ ಸಂದೇಶ ರವಾನಿಸಿತು ಎನ್ನಲಾಗಿದೆ.

ಉಭಯ ಪಡೆಗಳ ಮಧ್ಯೆ ಸಂಘರ್ಷ ಆರಂಭವಾಗಿರುವುದನ್ನು ಅಂತರರಾಷ್ಟ್ರೀಯ ಸಂಘಟನೆಗಳು ಖಂಡಿಸಿವೆ. ಗಾಜಾ ಮೇಲೆ ಇಸ್ರೇಲ್ ದಾಳಿ ತೀವ್ರಗೊಳಿಸಿರುವುದರಿಂದ ನಾಗರಿಕರ ಸಾವು–ನೋವು ಹೆಚ್ಚಬಹುದೆಂದು ಅವು ಕಳವಳ ವ್ಯಕ್ತಪಡಿಸಿವೆ.

ಇಸ್ರೇಲ್–ಹಮಾಸ್ ಮಧ್ಯೆ ನ.24ರಿಂದ ವಾರಕ್ಕೂ ಹೆಚ್ಚು ಕಾಲ ಕದನ ವಿರಾಮ ಜಾರಿಯಲ್ಲಿತ್ತು.

ಯುದ್ಧದ ಕೇಂದ್ರವಾದ ಖಾನ್ ಯೂನಿಸ್

ಖಾನ್ ಯೂನಿಸ್ ನಗರದ ಮೇಲೆ ಇಸ್ರೇಲ್ ದಾಳಿಯನ್ನು ತೀವ್ರಗೊಳಿಸಿದೆ. ಇದಕ್ಕೂ ಮುನ್ನ ನಗರವನ್ನು ತೊರೆಯುವಂತೆ ಜನರಿಗೆ ಎಚ್ಚರಿಕೆ ನೀಡಿ ಕರಪತ್ರಗಳನ್ನೂ ಎಸೆದಿತ್ತು.

'ಆದರೆ ಶುಕ್ರವಾರ ರಾತ್ರಿವರೆಗೂ ಹೆಚ್ಚಿನ ಸಂಖ್ಯೆಯ ಜನರು ನಗರವನ್ನು ತೊರೆದ ಬಗ್ಗೆ ವರದಿಯಾಗಿಲ್ಲ' ಎಂದು ವಿಶ್ವಸಂಸ್ಥೆ ಹೇಳಿದೆ.

ಗಾಜಾದಲ್ಲಿ 17 ಲಕ್ಷ ಜನರಿದ್ದರು. ಯುದ್ಧ ಆರಂಭವಾದ ಕೆಲ ವಾರಗಳ ನಂತರ ಶೇ 80ರಷ್ಟು ಜನರು ಸ್ಥಳಾಂತರಗೊಂಡಿದ್ದರು. ಆದರೆ ಇಲ್ಲೇ ಉಳಿದಿರುವ ಜನರು ಆಹಾರ, ನೀರು ಇತರ ಅಗತ್ಯ ವಸ್ತುಗಳ ಅಭಾವ ಎದುರಿಸುತ್ತಿದ್ದಾರೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಹಳತು	30000-46000	**ಸೊರಬ**	
ಬಂಟ್ವಾಳ		**ಶಿರಸಿ**		ಗೊರಬಲು	33009-33899
ಕೋಕಾ	15000-27500	ಬೆಟ್ಟೆ	40299-44599	ರಾಶಿ	45399-46599
ಹಳತು	42500-45500	ಬಿಳಿಗೋಟು	31709-36010	**ತಿಪಟೂರು ಕೊಬ್ಬರಿ**	
ಕಾರ್ಕಳ		ಚಾಲಿ	37099-40039	ಕನಿಷ್ಠ	7000
ಹೊಸತು	25000-36500	ರಾಶಿ	46399-46399	ಗರಿಷ್ಠ	8500

ದೇಶದಾದ್ಯಂತ ಜಾತಿಗಣತಿಗೆ ಬಿಎಸ್‌ಪಿ ಒತ್ತಾಯ

ಲಖನೌ (ಪಿಟಿಐ): ದೇಶದಾದ್ಯಂತ ಜಾತಿಗಣತಿ ನಡೆಸಬೇಕು ಎಂಬ ಪಕ್ಷದ ಆಗ್ರಹವನ್ನು ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಅವರು ಶನಿವಾರ ನಡೆದ ಸರ್ವಪಕ್ಷಗಳ ಸಭೆಯಲ್ಲೂ ಪುನರುಚ್ಚರಿಸಿದ್ದಾರೆ. ಈ ಕುರಿತು ದುರ್ಬಲ ವರ್ಗಗಳ ಜನರಲ್ಲಿ ಜಾಗೃತಿ ಮೂಡಿರುವುದು ಆಡಳಿತಾರೂಢ ಬಿಜೆಪಿಯ ನಿದ್ದೆಗೆಡಿಸಿದೆ ಎಂದು ಅವರು ಹೇಳಿದ್ದಾರೆ.


ಈ ಕುರಿತು ಟ್ವೀಟ್ ಮಾಡಿರುವ ಅವರು, 'ಕೆಲವು ರಾಜ್ಯ ಸರ್ಕಾರಗಳು ಅರೆ ಮನಸ್ಸಿನಿಂದ ಜನರ ಭಾವನೆಗಳನ್ನು ಸಂತುಷ್ಟಗೊಳಿಸಲು ಯತ್ನಿಸುತ್ತಿವೆ. ಆದರೆ, ರಾಷ್ಟ್ರೀಯ ಹಂತದಲ್ಲಿ ಜಾತಿ ಗಣತಿ ನಡೆದಾಗ ಮಾತ್ರವೇ ಇದಕ್ಕೆ ಪರಿಹಾರ ಸಿಗಲಿದೆ' ಎಂದು ಹೇಳಿದ್ದಾರೆ.

'ಸಂಸತ್ತಿನ ಅಧಿವೇಶನ ಡಿ. 4ರಿಂದ ಆರಂಭವಾಗಲಿದ್ದು, ಈ ಹಿನ್ನೆಲೆಯಲ್ಲಿ ಶನಿವಾರ ಕರೆದಿದ್ದ ಸರ್ವಪಕ್ಷಗಳ ಸಭೆಯಲ್ಲಿ ಬಿಎಸ್‌ಪಿಯು ದೇಶದಲ್ಲಿ ಜಾತಿಗಣತಿ ನಡೆಸಬೇಕು ಎಂದು ಒತ್ತಾಯಿಸಿದೆ.

'ಹಣದುಬ್ಬರ, ಬಡತನ, ನಿರುದ್ಯೋಗ, ಶಿಕ್ಷಣ, ಆರೋಗ್ಯದಿಂದ ವಂಚಿತವಾಗಿರುವ ದೇಶದ ಜನರು ಮತ್ತು ಜಾತಿಯಿಂದಾಗಿ ದೌರ್ಜನ್ಯಕ್ಕೆ ಒಳಗಾದ ಸಮುದಾಯಗಳ ಜನರಲ್ಲಿನ ಜಾತಿಗಣತಿ ಜಾಗೃತಿ ಕಂಡು ಬಿಜೆಪಿ ನಿದ್ದೆಗೆಟ್ಟಿದ್ದರೆ, ಕಾಂಗ್ರೆಸ್ ತನ್ನ ತಪ್ಪುಗಳನ್ನು ಮರೆಮಾಚುವಲ್ಲಿ ನಿರತವಾಗಿದೆ' ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

ಮಹುವಾ ಪ್ರಕರಣ: ಸ್ಪೀಕರ್‌ಗೆ ಪತ್ರ ಬರೆದ ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್

'ಉಚ್ಚಾಟನೆ ಶಿಫಾರಸು ಮರುಪರಿಶೀಲಿಸಿ'



ನವದೆಹಲಿ (ಪಿಟಿಐ): 'ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದೆ ಮಹುವಾ ಮೊಯಿತ್ರಾ ಅವರ ವಿರುದ್ಧ ಲೋಕಸಭೆಯ ನೀತಿ ಸಮಿತಿ ಮಾಡಿರುವ ಶಿಫಾರಸು ಗಂಭೀರ ಸ್ವರೂಪದ ಶಿಕ್ಷೆಯಾಗಿದ್ದು, ಇದು ತೀವ್ರಸ್ವರೂಪದ ಸಂಕೀರ್ಣವಾದ ಪರಿಣಾಮವನ್ನು ಬೀರಲಿದೆ' ಎಂದು ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಹೇಳಿದ್ದಾರೆ.

ಪ್ರಶ್ನೆ ಕೇಳಲು ಲಂಚ ಪಡೆದ ಪ್ರಕರಣಕ್ಕೆ ಸಂಬಂಧಿಸಿ ಮಹುವಾ ಅವರನ್ನು ಲೋಕ ಸಭೆಯಿಂದ ಉಚ್ಚಾಟಿಸಬೇಕು ಎಂದು ನೀತಿ ಸಮಿತಿಯು ಶಿಫಾರಸು ಮಾಡಿದೆ. ಈ ವರದಿಯನ್ನು ಸೋಮವಾರ ಲೋಕಸಭೆಯಲ್ಲಿ ಮಂಡಿಸಲಾಗುತ್ತದೆ.

ಶಿಫಾರಸಿಗೆ ಸಂಬಂಧಿಸಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ನಾಲ್ಕು ಪುಟಗಳ ಪತ್ರ ಬರೆದಿರುವ ಚೌಧರಿ, ಸಂಸದೀಯ ಸಮಿತಿಗಳ ನೀತಿ ಮತ್ತು ಪ್ರಕ್ರಿಯೆಗಳ ಕುರಿತು ಮರುಪರಿಶೀಲನೆ ನಡೆಸುವಂತೆ ಮನವಿ ಮಾಡಿದ್ದಾರೆ.

'ಹಕ್ಕುಬಾಧ್ಯತಾ ಸಮಿತಿ ಮತ್ತು ನೀತಿ ಸಮಿತಿಯ ಕರ್ತವ್ಯವ್ಯಾಪ್ತಿ ಕುರಿತು ಸ್ಪಷ್ಟಪಡಿಸಲಾಗಿಲ್ಲ. ಜೊತೆಗೆ, ಅನೈತಿಕ ನಡವಳಿಕೆ ಮತ್ತು ನಡವಳಿಕೆ ಸಂಹಿತೆ ಕುರಿತು ಇನ್ನೂ ನಿಯಮಗಳನ್ನು ರೂಪಿಸಲಾಗಿಲ್ಲ. ಹೀಗಾಗಿ, ಲೋಕಸಭಾ ಸದಸ್ಯರ ಹಕ್ಕುಗಳು ಮತ್ತು ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಮಹುವಾ ಅವರ ವಿರುದ್ಧ ಮಾಡಿರುವ ಶಿಫಾರಸನ್ನು ಮರುಪರಿಶೀಲಿಸಬೇಕು' ಎಂದು ಕೋರಿದ್ದಾರೆ.

ಮಾಧ್ಯಮಗಳು ವರದಿ ಮಾಡಿರುವಂತೆ ಮಹುವಾ ಅವರನ್ನು ಉಚ್ಚಾಟಿಸಲು ನೀತಿ ಸಮಿತಿಯು ಶಿಫಾರಸು ನೀಡಿದೆ ಎಂಬುದು ನಿಜವೇ ಆದರೆ, ಇಂಥದ್ದೊಂದು ಶಿಫಾರಸನ್ನು ಇದೇ ಮೊದಲ ಬಾರಿಗೆ ನೀತಿ ಸಮಿತಿ ಮಾಡಿದಂತಾಗುತ್ತದೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

'ನಿಮ್ಮ ನಾಯಕತ್ವದಲ್ಲಿ ಯಾರಿಗೂ ಅನ್ಯಾಯವಾಗುವುದಿಲ್ಲ ಮತ್ತು ಸಂಸತ್ ಪ್ರಕ್ರಿಯೆಯು ಸರಾಗವಾಗಿ ನಡೆಯುವಂತೆ ಮಾಡುತ್ತೀರ ಎಂದು ನಂಬಿದ್ದೇನೆ' ಎಂದು ಸ್ಪೀಕರ್ ಅವರನ್ನು ಉದ್ದೇಶಿಸಿ ಚೌಧರಿ ಹೇಳಿದ್ದಾರೆ.

'ಕೇಂದ್ರದ ಸಂಚು': ಪತ್ರ ಬರೆದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚೌಧರಿ ಅವರು, 'ಸಂಸದರೊಬ್ಬರನ್ನು ಅವಮಾನಿಸುತ್ತಿರುವ ರೀತಿಯು ಸ್ವೀಕೃತವಲ್ಲ ಎಂದು ತಿಳಿಸಲು ನಾನು ಸ್ಪೀಕರ್ ಅವರಿಗೆ ಪತ್ರ ಬರೆದೆ. ನೀತಿ ಸಮಿತಿಯು ಅನೈತಿಕವಾಗಿ ಕಾರ್ಯನಿರ್ವಹಿಸುತ್ತಿದೆ. ಗೌಪ್ಯವಾಗಿರಬೇಕಿದ್ದ ನೀತಿ ಸಮಿತಿಯ ಚರ್ಚೆಗಳು ಬಹಿರಂಗವಾಗಿದ್ದು ಹೇಗೆ' ಎಂದು ಪ್ರಶ್ನಿಸಿದ್ದಾರೆ.

ಮಹುವಾ ಬೆಂಬಲಿಸಿ ಮಾತನಾಡಿದ ಅವರು, ಸಂಸತ್ತಿನಲ್ಲಿ ಕೇಂದ್ರ ಸರ್ಕಾರವನ್ನು ಮಹುವಾ ಅವರು ತರಾಟೆಗೆ ತೆಗೆದುಕೊಳ್ಳುತ್ತಿದ್ದ ಕಾರಣ ಅವರನ್ನು ಉಚ್ಚಾಟಿಸಲು ಸಂಚು ರೂಪಿಸಲಾಗಿದೆ ಎಂದು ಆರೋಪ ಮಾಡಿದ್ದಾರೆ.

ಸಂಸತ್ತಿನ ಚಳಿಗಾಲದ ಅಧಿವೇಶನವು ಡಿಸೆಂಬರ್ 4ರಿಂದ ಡಿಸೆಂಬರ್ 22ರ ವರೆಗೆ ನಡೆಯಲಿದೆ. ಅಧಿವೇಶನದ ಮೊದಲ ದಿನವೇ ಮಹುವಾ ವಿರುದ್ಧದ ಶಿಫಾರಸಿನ ವರದಿ ಮಂಡನೆಯಾಗಲಿದೆ.

ಸಹಕಾರ ಕೋರಿದ ಕೇಂದ್ರ

ಮಹುವಾ ಮೊಯಿತ್ರಾ ಅವರನ್ನು ಉಚ್ಚಾಟಿಸಲು ನೀಡಲಾಗಿರುವ ಶಿಫಾರಸು, ಕ್ರಿಮಿನಲ್ ಕಾನೂನುಗಳಿಗೆ ಪರ್ಯಾಯವಾಗಿ ಜಾರಿಗೊಳಿಸಲು ಉದ್ದೇಶಿಸಿರುವ ಮೂರು ಹೊಸ ಮಸೂದೆಗಳು, ಚುನಾವಣಾ ಆಯುಕ್ತರ ನೇಮಕಾತಿ ಮಸೂದೆಗಳ ವಿಚಾರವು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಪ್ರಮುಖವಾಗಿ ಚರ್ಚೆಗೊಳಗಾಗುವ ವಿಚಾರಗಳಾಗಿವೆ.

ಅಧಿವೇಶನವು ಸರಾಗವಾಗಿ ನಡೆಯುಂತೆ ಮಾಡಲು ಸಹಕಾರ ನೀಡಬೇಕೆಂದು ಕೇಂದ್ರ ಸರ್ಕಾರವು ವಿರೋಧಪಕ್ಷಗಳಿಗೆ ಕೇಳಿಕೊಂಡಿದೆ.

ಮುಖ್ಯಾಂಶಗಳು

- ಸಂಸತ್ತಿನಲ್ಲಿ ನೀತಿ ಸಮಿತಿಯಿಂದ ನಾಳೆ ವರದಿ ಮಂಡನೆ
- 'ಇಂಥದ್ದೊಂದು ಶಿಫಾರಸನ್ನು ನೀತಿ ಸಮಿತಿ ಈ ವರೆಗೆ ಮಾಡಿಲ್ಲ'
- ಮಹುವಾ ಅವರನ್ನು ಸಂಸತ್ತಿನಿಂದ ಹೊರಗಿಡಲು ಸಂಚು– ಆರೋಪ

ಟೀಕೆ ಕೈಬಿಡಲು ಡ್ಯಾನಿಶ್ ಮನವಿ

ನವದೆಹಲಿ: ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಉಚ್ಚಾಟಿಸುವಂತೆ ನೀತಿ ಸಮಿತಿ ಮಾಡಿರುವ ಶಿಫಾರಸಿನಲ್ಲಿ ತಮ್ಮ ವಿರುದ್ಧ ಮಾಡಲಾಗಿರುವ ಟೀಕೆಗಳನ್ನು ಕೈಬಿಡುವಂತೆ ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ಅವರು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.

ನೀತಿ ಸಮಿತಿ ಅಧ್ಯಕ್ಷ ವಿನೋದ್ ಸಂಕಾರ್ ಅವರ ನೇತೃತ್ವದಲ್ಲಿ ನವೆಂಬರ್ 2ರಂದು ನಡೆದ ಸಭೆಯಲ್ಲಿ, ಸಮಿತಿ ಮುಂದಿಟ್ಟ ಪ್ರಶ್ನೆಗಳ ಉದ್ದೇಶವನ್ನು ತಿರುಚಲು ಡ್ಯಾನಿಶ್ ಅಲಿ ಪ್ರಯತ್ನಿಸಿದ್ದರು. ಅದಕ್ಕಾಗಿ ಅವರಿಗೆ ವಾಗ್ದಂಡನೆ ವಿಧಿಸಬೇಕು ಎಂದು ವರದಿಯಲ್ಲಿ ಹೇಳಲಾಗಿದೆ. ಇದನ್ನು ಅಲಿ ಆಕ್ಷೇಪಿಸಿದ್ದಾರೆ. ನೀತಿ ಸಂಹಿತೆಯ 15 ಸದಸ್ಯರಲ್ಲಿ ಅಲಿ ಕೂಡಾ ಒಬ್ಬರು. ಪ್ರಶ್ನೆ ಕೇಳಲು ಹಣ ಪಡೆದ ಪ್ರಕರಣದಲ್ಲಿ ಮಹುವಾ ಅವರನ್ನು ಉಚ್ಚಾಟಿಸಬೇಕು ಎಂಬ ಕ್ರಮಕ್ಕೆ ಅವರು ವಿರೋಧ ವ್ಯಕ್ತಪಡಿಸಿದ್ದರು. 'ನೀತಿ ಸಂಹಿತೆಯ ವರದಿಯು ಕೆಲವು ಆಘಾತಕಾರಿ ಮತ್ತು ಸಂಪೂರ್ಣವಾಗಿ ನಿರಾಧಾರ ಸಂಗತಿಗಳನ್ನು ಹೊಂದಿದೆ' ಎಂದು ಅವರು ಲಿಖಿತ ರೂಪದಲ್ಲಿ ತಿಳಿಸಿದ್ದರು.

'ಬಿಜೆಪಿ ಜೊತೆ ಕೈಜೋಡಿಸಲ್ಲ'



ಶರದ್ ಪವಾರ್

ಪುಣೆ (ಪಿಟಿಐ): 'ಬಿಜೆಪಿ ಜೊತೆಗೆ ಎನ್‌ಸಿಪಿ ಕೈಜೋಡಿಸುವುದಿಲ್ಲ ಎಂಬುದು ಸ್ಪಷ್ಟ. ಇದಕ್ಕೆ ವಿರುದ್ಧವಾದ ಯಾವುದೇ ಸಲಹೆಗೂ ನಮ್ಮ ಸಹಮತ ಇಲ್ಲ' ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಶನಿವಾರ ಇಲ್ಲಿ ಹೇಳಿದರು.

ಬಂಡಾಯ ಎದ್ದಿರುವ ಪಕ್ಷದ ಮುಖಂಡ ಅಜಿತ್ ಪವಾರ್ ಅವರು ತಮ್ಮನ್ನು ಗುರಿಯಾಗಿಸಿ ಟೀಕಿಸಿದ ಬೆನ್ನಲ್ಲೇ ಹಿರಿಯ ರಾಜಕಾರಣಿ ಶರದ್ ಪವಾರ್ ಅವರು ಸುದ್ದಿಗೋಷ್ಠಿಯಲ್ಲಿ ಈ ಮಾತು ಹೇಳಿದ್ದಾರೆ.

'ಯಾರಾದರೂ ನಾವು ಬಿಜೆಪಿ ಬೆಂಬಲಿಸಬೇಕು ಎಂದು ಸಲಹೆ ನೀಡಿದ್ದರೆ ಅದು ನಮ್ಮ ನಿಲುವಿಗೆ ವಿರುದ್ಧವಾದುದು. ಈ ಸಲಹೆಯನ್ನು ಪಕ್ಷದ ಹಲವರು ಒಪ್ಪುವುದಿಲ್ಲ. ಈ ವಿಷಯದಲ್ಲಿ ನಮ್ಮ ನಿಲುವು ಸ್ಪಷ್ಟವಾಗಿದೆ' ಎಂದರು.

'ಬೆಳಗಿನ ಜಾವ ಪ್ರಮಾಣವಚನ ಸ್ವೀಕರಿಸಿದ್ದ ಯಾರಾದರೂ ಬಿಜೆಪಿ ಬೆಂಬಲಿಸುವುದು ಪಕ್ಷದ ನೀತಿ ಎಂದು ಹೇಳಿರಬಹುದು. ಆ ವ್ಯಕ್ತಿಯನ್ನು ಗಂಭೀರ ವಾಗಿ ಪರಿಗಣಿಸಬಾರದು' ಎಂದು ಅಜಿತ್ ಪವಾರ್ ಉಲ್ಲೇಖಿಸಿ ಹೇಳಿದರು.

'ಭಿನ್ನಮತ ಇಲ್ಲದಲ್ಲಿ ಪ್ರಗತಿ ಅಸಾಧ್ಯ'

ನವದೆಹಲಿ (ಪಿಟಿಐ): ವಿಮರ್ಶಾತ್ಮಕವಾಗಿ ಯೋಚಿಸಲು, ಅಧಿಕಾರದಲ್ಲಿರುವವನ್ನು ಪ್ರಶ್ನಿಸಲು ಮತ್ತು ಸಂಘರ್ಷಾತ್ಮಕವಲ್ಲದ ಪ್ರಜಾಸತ್ತಾತ್ಮಕ ಸಂವಾದದಲ್ಲಿ ತೊಡಗಿಸಿಕೊಳ್ಳಲು ಪ್ರಜೆಗಳನ್ನು ಉತ್ತೇಜಿಸದ ಸಮಾಜವು ಪ್ರಗತಿ ಸಾಧಿಸಲು ವಿಫಲವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ಅಭಿಪ್ರಾಯಪಟ್ಟರು.

ಡೆಹ್ರಾಡೂನ್‌ನ ಫಾರೆಸ್ಟ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಶನಿವಾರ ಆಯೋಜಿಸಿದ್ದ ಜಸ್ಟೀಸ್ ಕೇಶವ್ ಚಂದ್ರ ಧೂಲಿಯಾ ಪ್ರಬಂಧ ಸ್ಪರ್ಧೆಯಲ್ಲಿ 'ಪ್ರಜಾಪ್ರಭುತ್ವ, ಸಂವಾದ ಮತ್ತು ಭಿನ್ನಮತ' ವಿಷಯದಲ್ಲಿ ಮಾತನಾಡಿದ ಅವರು, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಸಂಖ್ಯಾತರು ಹೇಳಿದ್ದೇ ನಡೆಯುತ್ತದೆ. ಆದರೂ ಅಲ್ಪಸಂಖ್ಯಾತರ ಮಾತನ್ನೂ ಕೇಳಬೇಕಾಗುತ್ತದೆ' ಎಂದು ಪ್ರತಿಪಾದಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಹಿಂಜರಿಕೆ ಮುಕ್ತರಾಗಿ ಇರಬೇಕಾದರೆ, ಅಧಿಕಾರದಲ್ಲಿರುವವರು ಜನಸಂಖ್ಯೆಯಲ್ಲಿ ಮತ್ತು ಸಾಮಾಜಿಕವಾಗಿ ದುರ್ಬಲರಾಗಿರುವ ವರ್ಗದ ಪರ ಇರಬೇಕು ಎಂದು ಸಲಹೆ ನೀಡಿದರು.

2030ರ ವೇಳೆಗೆ ಬಳಕೆ ಪ್ರಮಾಣ 3 ಪಟ್ಟು ಏರಿಕೆಗೆ 116 ರಾಷ್ಟ್ರಗಳ ಸಹಮತ

ಮರುಬಳಕೆ ಇಂಧನಗಳ ಬಳಕೆ ವೃದ್ಧಿಗೆ ಕರೆ

ದುಬೈ (ಎಎಫ್‌ಪಿ/ ಪಿಟಿಐ): ಪರಿಸರಕ್ಕೆ ಇಂಗಾಲದ ಡೈಆಕ್ಸೈಡ್ ಸೇರ್ಪಡೆ ಪ್ರಮಾಣವನ್ನು ತಗ್ಗಿಸಲು, 2030ರ ವೇಳೆಗೆ ಮರುಬಳಕೆ ಇಂಧನದ ಬಳಕೆಯನ್ನು ಮೂರು ಪಟ್ಟು ಹಾಗೂ ಇಂಧನ ಕ್ಷಮತೆ ಕಾರ್ಯಕ್ರಮಗಳನ್ನು ದುಪ್ಪಟ್ಟುಗೊಳಿಸುವ ಗುರಿಯನ್ನು ಹೊಂದುವ ಸಿಒಪಿ28 ತಾಪಮಾನ ಒಡಂಬಡಿಕೆಗೆ 116 ರಾಷ್ಟ್ರಗಳು ಸಹಮತ ವ್ಯಕ್ತಪಡಿಸಿವೆ.

ಯೂರೋಪಿಯನ್ ಕಮಿಷನ್‌ನ ಅಧ್ಯಕ್ಷೆ ಉರ್ಸುಲಾ ವೊನ್ ಡೆರ್ ಲೆಯೆನ್ ಅವರು ಶುಕ್ರವಾರ ಇಲ್ಲಿ ಈ ವಿಷಯ ತಿಳಿಸಿದರು. ಇಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ 'ಸಿಒಪಿ 28' ಹವಾಮಾನ ಶೃಂಗಸಭೆಯಲ್ಲಿ ಮಾತನಾಡಿದ ಅವರು, ಗುರಿ ನಿಗದಿಗೆ 116 ರಾಷ್ಟ್ರಗಳು ಸಹಮತ ಹೊಂದಿರುವುದು ಉತ್ತಮ ಬೆಳವಣಿಗೆ ಎಂದರು.

ಈ ವರ್ಷಾರಂಭದಲ್ಲಿ ಯೂರೋಪಿಯನ್ ಒಕ್ಕೂಟವು ಮೊದಲಿಗೆ ಹೊಸ ಗುರಿ ನಿಗದಿಗೆ ಮನವಿ ಮಾಡಿತು. ಬಳಿಕ, ಸಿಒಪಿ 28 ಆತಿಥ್ಯ ವಹಿಸಿರುವ ಯುಎಇ ಹಾಗೂ ನಂತರದಲ್ಲಿ ಜಿ 7 ಮತ್ತು ಜಿ 20 ಶೃಂಗ ರಾಷ್ಟ್ರಗಳು ಈ ಅಂಶದ ಕಡೆಗೆ ಒತ್ತು ನೀಡಿದ್ದವು. ಜಾಗತಿಕವಾಗಿ, ಹಸಿರುಮನೆ ಅನಿಲಗಳ ಹೊರಸೂಸುವಿಕೆ ಪ್ರಮಾಣದಲ್ಲಿ ಜಿ 20 ದೇಶಗಳ ಪಾಲು ಶೇ 80ರಷ್ಟಿದೆ.

ಸಿಒಪಿ ಕುರಿತ ಅಂತಿಮ ನಿರ್ಧಾರದಲ್ಲಿ ಈ ಗುರಿ ಸೇರ್ಪಡೆಗೊಳಿಸಲು ಎಲ್ಲ ರಾಷ್ಟ್ರಗಳಿಗೆ ನಾನು ಕೋರುತ್ತೇನೆ. ಇಂಥ ಕ್ರಮವು ಹೂಡಿಕೆದಾರರು ಮತ್ತು ಬಳಕೆದಾರರಿಗೆ ಸ್ಪಷ್ಟ ಸಂದೇಶ ರವಾನಿಸಲಿದೆ ಎಂದು ಉರ್ಸುಲಾ ವೊನ್ ಡೆರ್ ಲೆಯೆನ್ ಅವರು ಅಭಿಪ್ರಾಯಪಟ್ಟರು.

ಉಲ್ಲೇಖಿತ ಗುರಿ ಕುರಿತ ಚರ್ಚೆಗಳು ಪ್ರತ್ಯೇಕವಾಗಿದ್ದರೂ ಪರಸ್ಪರ ಸಂಬಂಧವಿದೆ. ಅಂತಿಮವಾಗಿ ಸಿಒಪಿ 28 ಅಂತಿಮ ಒಪ್ಪಂದವು ಎಲ್ಲ ಪ್ರಕಾರದ ಪಳೆಯುಳಿಕೆ ಇಂಧನದ ಬಳಕೆ ಕುಗ್ಗಿಸುವುದು ಅಥವಾ ಕೈಬಿಡುವುದರ ಕುರಿತಂತೆ ದೇಶಗಳಿಗೆ ಬದ್ಧತೆಯನ್ನು ನಿಗದಿಪಡಿಸಲಿದೆ ಎಂದರು.

ಗುರಿಯನ್ನು ಸಾಧಿಸುವ ಹೆಜ್ಜೆಯಾಗಿ ಪವನ, ಸೋಲಾರ್, ಜಲವಿದ್ಯುತ್ ಮತ್ತು ಇತರೆ ಮರುಬಳಕೆ ಇಂಧನ ಮೂಲಗಳಿಗೆ ಆದ್ಯತೆ ನೀಡುವುದು, ತೈಲ, ಅನಿಲ, ಕಲ್ಲಿದ್ದಲು ಬೇಡಿಕೆ ಕುಗ್ಗಿಸುವುದು ಅಗತ್ಯ ಎಂದೂ ಅವರು ಅಭಿಪ್ರಾಯಪಟ್ಟರು.

'ಹಿಮಾಲಯದ ರಾಷ್ಟ್ರಗಳಿಗೆ ನೆರವು'

ಹಿಮಾಲಯ ತಪ್ಪಲಿನಲ್ಲಿ ನೀರ್ಗಲ್ಲು ಕರಗುತ್ತಿರುವ ಪ್ರಮಾಣವು ಆತಂಕ ಪಡುವಂತಿದ್ದು ದುರಂತ ಸಂಭವಿಸುವ ಸಾಧ್ಯತೆಗಳಿವೆ ಎಂದು ವಿಶ್ವಸಂಸ್ಥೆಯ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಎಚ್ಚರಿಸಿದ್ದಾರೆ.

ತಾಪಮಾನ ರಕ್ಷಣೆ ಕುರಿತ ಸಮ್ಮೇಳನದಲ್ಲಿ ಶನಿವಾರ ಮಾತನಾಡಿದ ಅವರು, ಅಭಿವೃದ್ಧಿಶೀಲ ದೇಶಗಳ ಅಗತ್ಯಗಳಿಗೆ ಮುಖ್ಯವಾಗಿ ಹಿಮಾಲಯ ಪರ್ವತಗಳಿರುವ ದೇಶಗಳಿಗೆ ಈ ಸಮ್ಮೇಳನ ಸ್ಪಂದಿಸಬೇಕಾಗಿದೆ ಎಂದರು.

ನೀರ್ಗಲ್ಲುಗಳು ಮತ್ತು 10 ಪ್ರಮುಖ ನದಿಗಳ ಮೇಲೆ ಅಂದಾಜು 24 ಕೋಟಿ ಜನರು ಅವಲಂಬಿತರಾಗಿದ್ದಾರೆ. ಹಿಮಾಲಯದಲ್ಲಿ ಮೂಡುವ ಹಿಂದೂ, ಗಂಗಾ, ಬ್ರಹ್ಮಪುತ್ರ ನದಿಗಳೂ ಇದರಲ್ಲಿ ಸೇರಿವೆ. ಈ ನದಿಗಳ ಜಲಾನಯನವಾದ ಭಾರತ ಸೇರಿದಂತೆ ಎಂಟು ದೇಶಗಳಲ್ಲಿ ಕೋಟಿಗೂ ಹೆಚ್ಚು ಜನ ಅವಲಂಬಿತರಾಗಿದ್ದಾರೆ ಎಂದರು.

ನೇಪಾಳದಲ್ಲಿನ ಹಿಮಗಡ್ಡೆ ಕೇವಲ 30 ವರ್ಷಗಳಲ್ಲಿ ಕರಗಿದೆ. ಇದಕ್ಕೂ ಹಸಿರುಮನೆ ಅನಿಲ ಮಾಲಿನ್ಯಕ್ಕೂ, ತಾಪಮಾನ ಹೆಚ್ಚಳಕ್ಕೂ ನೇರವಾದ ಸಂಬಂಧವಿದೆ ಎಂದು ಗುಟೆರೆಸ್ ಹೇಳಿದರು.

ಕತಾರ್ ದೊರೆ ಜೊತೆ ಮೋದಿ ಚರ್ಚೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ದುಬೈ ಪ್ರವಾಸದ ವೇಳೆ ಕತಾರ್‌ನ ದೊರೆ ಅಮಿತ್ ಶೇಖ್ ತಾಮಿಮ್ ಬಿನ್ ಹಮಾದ್ ಅಲ್ ಥಾನಿ ಅವರನ್ನು ಭೇಟಿಯಾಗಿ ಉಭಯ ದೇಶಗಳ ಬಾಂಧವ್ಯ ವೃದ್ಧಿ ಕುರಿತು ಚರ್ಚಿಸಿದರು.

ಕತಾರ್‌ನಲ್ಲಿ ನೆಲೆಯೂರಿರುವ ಭಾರತೀಯರ ಸುರಕ್ಷತೆ, ಬದುಕು ಹಾಗೂ ಉಭಯ ದೇಶಗಳ ಪಾಲುದಾರಿಕೆ ಕುರಿತು ಪ್ರಧಾನಿ ಚರ್ಚಿಸಿದರು. ಭಾರತೀಯ ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳಿಗೆ ಕತಾರ್‌ನ ಕೋರ್ಟ್ ಅ. 26ರಂದು ಜೀವಾವಧಿ ಶಿಕ್ಷೆ ವಿಧಿಸಿದ್ದ ಹಿನ್ನೆಲೆಯಲ್ಲಿ ಉಭಯತ್ರರ ಈ ಭೇಟಿಯು ಮಹತ್ವ ಪಡೆದಿದೆ. ಶಿಕ್ಷೆ ವಿರುದ್ಧ ಭಾರತ ಮೇಲ್ಮನವಿ ಸಲ್ಲಿಸಿದೆ.



ಪ್ರಧಾನಿ ನರೇಂದ್ರ ಮೋದಿ ಅವರ ಜೊತೆಗೆ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು —ಪಿಟಿಐ ಚಿತ್ರ

ಚರ್ಚೆಗೆ ಗ್ರಾಸವಾದ 'ಮೆಲೋಡಿ'

ನವದೆಹಲಿ (ಪಿಟಿಐ): ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ತೆಗೆದುಕೊಂಡಿದ್ದ ಸೆಲ್ಫಿ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಯಿತು. ಅಲ್ಲದೆ, ಸಾಕಷ್ಟು ಹಂಚಿಕೆಯಾಯಿತು.

ದುಬೈನಲ್ಲಿ ನಡೆದ 'ಸಿಒಪಿ 28' ಹವಾಮಾನ ಶೃಂಗಸಭೆಯಲ್ಲಿ ಈ ಸೆಲ್ಫಿ ಕ್ಲಿಕ್ಕಿಸಲಾಗಿತ್ತು. ಕ್ಲೋಸ್‌ಅಪ್‌ನ ಈ ಸೆಲ್ಫಿಯಲ್ಲಿ ಉಭಯತ್ರರು ಮೊಗದಲ್ಲಿ ನಗುವನ್ನು ತುಂಬಿಕೊಂಡಿದ್ದರು. ಉಭಯ ನಾಯಕರ ಉಪನಾಮ ಧ್ವನಿಸುವ 'ಮೆಲೋಡಿ' ಹ್ಯಾಷ್‌ಟ್ಯಾಗ್ ಜೊತೆಗೆ ಇದು ಹಂಚಿಕೆಯಾಗಿತ್ತು.

ಶನಿವಾರ ಈ ಕುರಿತು ಪ್ರತಿಕ್ರಿಯಿಸಿರುವ ಪ್ರಧಾನಿ ಮೋದಿ, 'ಗೆಳೆಯರ ಭೇಟಿ ಎಂದಿಗೂ ಖುಷಿ ನೀಡಲಿದೆ' ಎಂದಿದ್ದಾರೆ.

ಎಕ್ಸ್ ಜಾಲತಾಣದಲ್ಲಿ 'ಮೆಲೋಡಿ' ಹ್ಯಾಷ್‌ಟ್ಯಾಗ್ ಟ್ರೆಂಡಿಂಗ್‌ನಲ್ಲಿದ್ದು, ಸಂಜೆಯವರೆಗೆ 1.19 ಲಕ್ಷ ಜನರು ಪೋಸ್ಟ್ ಮಾಡಿದ್ದರು. ಕ್ರಿಕೆಟ್ ವೀಕ್ಷಕ ವಿವರಣೆಯೊಂದರಲ್ಲಿ ಕೇಳಿಬಂದಿದ್ದ, 'ಸೋ ಬ್ಯೂಟಿಫುಲ್, ಸೋ ಎಲಿಗೆಂಟ್, ಜಸ್ಟ್ ಲುಕಿಂಗ್ ಲೈಕ್ ವಾಹ್' ಎಂಬ ಸಾಲುಗಳನ್ನೂ ಉಲ್ಲೆಖಿಸಿ ಜಾಲತಾಣಿಗರು ಮೆಚ್ಚುಗೆಯನ್ನು ಸೂಚಿಸಿದ್ದರು.

ಸಮಾವೇಶದಲ್ಲಿ ಮೋದಿ ಅವರು ಮೆಲೊನಿ ಅವರಲ್ಲದೆ ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲ ಡ ಸಿಲ್ವಾ, ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಕ್ಯಾಮೆರೂನ್, ಬ್ರಿಟನ್‌ನ ಮಾಜಿ ಪ್ರಧಾನಿ ಟೋನಿ ಬ್ಲೇರ್, ಟರ್ಕಿ ಅಧ್ಯಕ್ಷ ಆರ್. ಟಿ.ಎರ್ಡೊಗನ್ ಸೇರಿದಂತೆ ಹಲವರನ್ನು ಭೇಟಿಯಾಗಿದ್ದರು.

ಆದಿತ್ಯ ಎಲ್1 ಉಪಗ್ರಹ ಪೇಲೋಡ್ ಕಾರ್ಯಾರಂಭ

ಬೆಂಗಳೂರು: ಸೂರ್ಯನ ಅಧ್ಯಯನ ಉದ್ದೇಶದ ಭಾರತದ 'ಆದಿತ್ಯ – ಎಲ್1' ಉಪಗ್ರಹದಲ್ಲಿ ಅಳವಡಿಸಿರುವ ಸೋಲಾರ್ ವಿಂಡ್ ಪಾರ್ಟಿಕಲ್ ಎಕ್ಸ್‌ಪೆರಿಮೆಂಟ್ (ಎಎಸ್‌ಪಿಇಎಕ್ಸ್) ಪೇಲೋಡ್ ತನ್ನ ಕಾರ್ಯ ಆರಂಭಿಸಿದೆ ಎಂದು ಇಸ್ರೊ ಶನಿವಾರ ಪ್ರಕಟಿಸಿದೆ.

ಸೂರ್ಯನಿಂದ ಬಾಹ್ಯಾಕಾಶಕ್ಕೆ ಹೊಮ್ಮುವ ಸೋಲಾರ್ ವಾಯು ಕಣಗಳನ್ನು ಇದು ಅಧ್ಯಯನ ಮಾಡಲಿದೆ. ಈ ಪೇಲೋಡ್‌ನಲ್ಲಿ ಸೋಲಾರ್ ವಿಂಡ್ ಇಯಾನ್ ಸ್ಪೆಕ್ಟ್ರೊ ಮೀಟರ್ (ಎಸ್ ಡಬ್ಲ್ಯುಐಎಸ್), ಸುಪ್ರ ಥರ್ಮಲ್ ಅಂಡ್ ಎನರ್ಜಿಟಿಕ್ ಪಾರ್ಟಿಕಲ್ ಸ್ಪೆಕ್ಟ್ರೊಮೀಟರ್ (ಸ್ಟೆಪ್ಸ್) ಹೆಸರಿನ ಉಪಕರಣಗಳನ್ನು ಅಳವಡಿಸಿದೆ.

ಸ್ಟೆಪ್ಸ್ ಅನ್ನು ಸೆ.10ರಂದು ಚಾಲನೆಗೊಳಿಸಿದ್ದು, ಎರಡನೇ ಉಪಕರಣವನ್ನು ನ.2ರಂದು ಚಾಲನೆಗೊಳಿಸಿದೆ. ಎಸ್‌ಡಬ್ಲ್ಯುಐಎಸ್ ಉಪಕರಣದಲ್ಲಿ ಎರಡು ಸೆನ್ಸರ್ ಘಟಕಗಳಿವೆ. ಸೂರ್ಯನಿಂದ ಹೊಮ್ಮುವ ವಾಯುವಿನಲ್ಲಿನ ಪ್ರೊಟಾನ್, ಆಲ್ಫಾ ಕಣಗಳನ್ನು ಯಶಸ್ವಿಯಾಗಿ ಅಂದಾಜು ಮಾಡಿದೆ ಎಂದು ಇಸ್ರೊ ತಿಳಿಸಿದೆ.

ಆದಿತ್ಯ–ಎಲ್1 ಅನ್ನು ಸೆ.2ರಂದು ಉಡಾವಣೆ ಮಾಡಲಾಗಿತ್ತು. ಜ. 7ರ ವೇಳೆಗೆ ಇದನ್ನು ಸೂರ್ಯ–ಭೂಮಿ ನಡುವಣ ಮೊದಲ ಲಗ್ರಾಂಜಿಯನ್ ಪಾಯಿಂಟ್‌ಗೆ (ಎಲ್1) ಸೇರಿಸುವ ಗುರಿಯಿದೆ. ಎಲ್1 ಭೂಮಿಯಿಂದ 15 ಲಕ್ಷ ಕಿ.ಮೀ. ದೂರದಲ್ಲಿದೆ.

ದೋಷಾರೋಪ ಪಟ್ಟಿ ದಾಖಲು

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎಎಪಿ ಸಂಸದ ಸಂಜಯ್ ಸಿಂಗ್ ವಿರುದ್ಧ ಜಾರಿ ನಿರ್ದೇಶನಾಲಯ ಶನಿವಾರ ದೋಷಾರೋಪ ಪಟ್ಟಿ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಸ್ಥಳೀಯ ನ್ಯಾಯಾಲಯದಲ್ಲಿ ದೂರು ದಾಖಲಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಈಗಾಗಲೇ ಇಂಥ ಐದು ದೂರುಗಳನ್ನು ದಾಖಲಿಸಿದ್ದು, ಇದು ಪೂರಕ ದೋಷಾರೋಪಟ್ಟಿಯಾಗಿದೆ. ಸಂಜಯ್ ಸಿಂಗ್ ಅವರನ್ನು ಈ ಪ್ರಕರಣದಲ್ಲಿ ಅಕ್ಟೋಬರ್‌ನಲ್ಲಿ ಇ.ಡಿ ಬಂಧಿಸಿದೆ.

ಡಿ.15ಕ್ಕೆ ಅಯೋಧ್ಯೆ ವಿಮಾನ ನಿಲ್ದಾಣ ಉದ್ಘಾಟನೆ?

ಪ್ರಜಾವಾಣಿ ವಾರ್ತೆ

ಲಖನೌ: 'ಅಯೋಧ್ಯೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇದೇ 15ಕ್ಕೆ ಉದ್ಘಾಟನೆಯಾಗುವ ಸಾಧ್ಯತೆ ಇದೆ' ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಕೇಂದ್ರದ ವಿಮಾನಯಾನ ಸಚಿವ ಜೋತಿರಾದಿತ್ಯ ಸಿಂಧಿಯಾ ಅವರು ಶನಿವಾರ ತಿಳಿಸಿದ್ದಾರೆ.

ನಿರ್ಮಾಣ ಹಂತದಲ್ಲಿರುವ ವಿಮಾನ ನಿಲ್ದಾಣವನ್ನು ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, 'ರಾಮ ಮಂದಿರದಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಮುನ್ನವೇ ವಿಮಾನ ನಿಲ್ದಾಣ ಕಾರ್ಯನಿರ್ವಹಿಸುವ ಸಾಧ್ಯತೆ ಇದೆ. ವಿಮಾನ ನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ' ಎಂದರು.

'ವಿಮಾನ ನಿಲ್ದಾಣವು ಅಯೋಧ್ಯೆಯನ್ನು ಇಡೀ ಜಗತ್ತಿನೊಂದಿಗೆ ಸಂಪರ್ಕಿಸುವುದಲ್ಲದೇ, ವಿಶ್ವದ ಪ್ರಮುಖ ಯಾತ್ರಾ ಸ್ಥಳವನ್ನಾಗಿ ಪರಿವರ್ತಿಸುತ್ತದೆ' ಎಂದು ಯೋಗಿ ಹೇಳಿದ್ದಾರೆ.

'ಅಯೋಧ್ಯೆಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ವಿಮಾನ ನಿಲ್ದಾಣ ಪ್ರತಿಬಿಂಬಿಸುತ್ತದೆ. 2ನೇ ಹಂತದ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಬಳಿಕ ಅಧಿಕ ವಿಮಾನಗಳು ನಿಲ್ದಾಣದಲ್ಲಿ ಇಳಿಯಬಹುದು' ಎಂದು ಜೋತಿರಾದಿತ್ಯ ಸಿಂಧಿಯಾ ತಿಳಿಸಿದ್ದಾರೆ.



ನಮನ ಮಧ್ಯಪ್ರದೇಶದ ಭೋಪಾಲ್‌ನಲ್ಲಿ 1984ರಲ್ಲಿ ಸಂಭವಿಸಿದ್ದ ಅನಿಲ ದುರಂತದಲ್ಲಿ ಮೃತಪಟ್ಟವರಿಗೆ ಬದುಕುಳಿದ ಸಂತ್ರಸ್ತರು ಮತ್ತು ಸಂಭವನ ಟ್ರಸ್ಟ್ ಕ್ಲಿನಿಕ್ ಸದಸ್ಯರು ಶನಿವಾರ ಭೋಪಾಲ್‌ನಲ್ಲಿ ನಮನ ಸಲ್ಲಿಸಿದರು

ವಿಶ್ವವಿದ್ಯಾಲಯ ಅನುದಾನ ಆಯೋಗದ ಸೂಚನೆ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

'ಪ್ರಧಾನಿ ವರ್ಚಸ್ಸು ರಕ್ಷಣೆಗೆ ಸೆಲ್ಫಿ ಪಾಯಿಂಟ್'

ನವದೆಹಲಿ (ಪಿಟಿಐ): 'ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಗಮನಸೆಳೆಯಲು 'ಸೆಲ್ಫಿ ಪಾಯಿಂಟ್' ಸ್ಥಾಪಿಸುವಂತೆ ಕಾಲೇಜು, ವಿಶ್ವವಿದ್ಯಾಲಯಗಳಿಗೆ, ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸೂಚನೆ ನೀಡಿರುವ ಬೆನ್ನಲ್ಲೇ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

'ಮುಂಬರುವ ಲೋಕಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಕುಗ್ಗುತ್ತಿರುವ ವರ್ಚಸ್ಸು' ರಕ್ಷಿಸಿಕೊಳ್ಳಲು ಈ ರೀತಿಯ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳುತ್ತಿದ್ದಾರೆ' ಎಂದು ಕಾಂಗ್ರೆಸ್ ಪಕ್ಷ ಟೀಕಿಸಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, '10 ವರ್ಷಗಳ ಆಡಳಿತದ ಅಂತ್ಯದಲ್ಲಿ 'ಹೇಸಿಗೆ ಹುಟ್ಟಿಸುವ ಈ ಸ್ವಯಂ ಪ್ರಚಾರ' ಕುರಿತು ದೇಶದ ಜನತೆ ರೋಸಿಹೋಗಿದ್ದಾರೆ. ಶೀಘ್ರ ತಕ್ಕ ಉತ್ತರವನ್ನೂ ನೀಡಲಿದ್ದಾರೆ' ಎಂದಿದ್ದಾರೆ. ಸೆಲ್ಫಿ ಪಾಯಿಂಟ್ ಸ್ಥಾಪಿಸಬೇಕು ಎಂಬ ಯುಜಿಸಿ ನಿರ್ದೇಶನ ಕುರಿತ ಮಾಧ್ಯಮ ವರದಿಗಳನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಅವರು, 'ಸೆಲ್ಫಿ ಪ್ರಿಯ ಮತ್ತು ಸ್ವಯಂ ಪ್ರಿಯ ನಮ್ಮ ಪ್ರಧಾನಿಗೆ ಈಗ ಲೋಕಸಭೆ ಚುನಾವಣೆ ಎದುರಿಸಲು ಅಭದ್ರತೆ ಕಾಡುತ್ತಿದೆ. ಅದಕ್ಕಾಗಿ ತಮ್ಮ ವರ್ಚಸ್ಸು ರಕ್ಷಣೆಗಾಗಿ ಎಲ್ಲ ಅವಕಾಶ ಬಳಸಿಕೊಳ್ಳುತ್ತಿದ್ದಾರೆ' ಎಂದಿದ್ದಾರೆ.

'ಸೆಲ್ಫಿ ಪಾಯಿಂಟ್ ಸ್ಥಾಪಿಸಲು ಮೊದಲು ಸೇನೆ, ಬಳಿಕ ಐಎಎಸ್ ಅಧಿಕಾರಿಗಳು, ಹಿರಿಯ ಅಧಿಕಾರಿಗಳಿಗೆ ರಥಯಾತ್ರೆ ಆಯೋಜಿಸುವಂತೆ ಸೂಚಿಸಲಾಗಿತ್ತು. ಈಗ, ಯುಜಿಸಿ ಶಿಕ್ಷಣ ಸಂಸ್ಥೆಗಳಿಗೆ ಸೂಚನೆ ನೀಡಿದೆ' ಎಂದಿದ್ದಾರೆ.

ಇದಕ್ಕೂ ಮೊದಲು, ನೇರಪ್ರಸಾರದಲ್ಲಿ ಬರುವ ಮೂಲಕ ಚಂದ್ರಯಾನ–3ರ ಯಶಸ್ಸು ಹೈಜಾಕ್ ಮಾಡಿದ್ದರು ಎಂದು ನೆನಪಿಸಿದ್ದಾರೆ.

> **'ಪಿ.ಎಂ ಎಂದರೆ ಫೋಟೊ ಮಂತ್ರಿ. ನರೇಂದ್ರ ಮೋದಿಯವರೇ ನಿಮ್ಮ ಭಾವಚಿತ್ರವನ್ನು ಹಿನ್ನೆಲೆಯಾಗಿಸಿ 'ಸೆಲ್ಫಿ ಪಾಯಿಂಟ್' ಸ್ಥಾಪಿಸುವಂತೆ ಯುಜಿಸಿ ಸೂಚಿಸಿದೆ ಎಂಬುದು ನಿಮಗೆ ಗೊತ್ತಿದೆಯೇ?**
>
> **ಡೆರೆಕ್ ಒಬ್ರೆಯಾನ್** ಟಿಎಂಸಿ ನಾಯಕ

ಸೆಲ್ಫಿ ಪಡೆದು, ಜಾಲತಾಣದಲ್ಲಿ ಹಂಚಿಕೊಳ್ಳಲು ಉತ್ತೇಜನ: ಯುಜಿಸಿ

ನವದೆಹಲಿ: 'ವಿಶ್ವವಿದ್ಯಾಲಯಗಳ ಕ್ಯಾಂಪಸ್, ಕಾಲೇಜುಗಳ ಆಯಕಟ್ಟಿನ ಸ್ಥಳದಲ್ಲಿ ಸೆಲ್ಫಿ ಪಾಯಿಂಟ್ ಸ್ಥಾಪಿಸಿ ಯುವಜನರಲ್ಲಿ ದೇಶದ ಸಾಧನೆ ಕುರಿತು ಜಾಗೃತಿ ಮೂಡಿಸಬೇಕು ಎಂದು ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿ ಸೂಚಿಸಿದೆ.

ಈಗಾಗಲೇ ಕೇಂದ್ರ ಶಿಕ್ಷಣ ಸಚಿವಾಲಯವು ಅನುಮೋದನೆ ನೀಡಿರುವ, 3ಡಿ ಸ್ವರೂಪದ ವಿನ್ಯಾಸದಲ್ಲೇ ಸೆಲ್ಫಿ ಪಾಯಿಂಟ್ ಸ್ಥಾಪಿಸಬೇಕು ಎಂದು ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿ ಸೂಚಿಸಿದೆ.

'ಇಂತಹ ಸೆಲ್ಫಿ ಪಾಯಿಂಟ್‌ಗಳು ಹೆಮ್ಮೆ ಮೂಡಿಸುವುದಷ್ಟೇ ಅಲ್ಲ, ನಾಗರಿಕರಲ್ಲಿ ದೇಶದ ಪ್ರಗತಿ ಕುರಿತು ಅರಿವು ಮೂಡಿಸಲಿದೆ. ವಿದ್ಯಾರ್ಥಿಗಳು, ಸಭಿಕರು ಸೆಲ್ಫಿ ಪಡೆದು ಜಾಲತಾಣದಲ್ಲಿ ಹಂಚಿಕೊಳ್ಳಲು ಉತ್ತೇಜನವಾಗಲಿದೆ' ಎಂದು ಯಜಿಸಿ ಕಾರ್ಯದರ್ಶಿ ಮನೀಶ್ ಜೋಶಿ ಅವರು ಈ ಕುರಿತ ಆದೇಶದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಪ್ರಜಾವಾಣಿ

ಭಾನುವಾರದ ಪುರವಣಿ 10

ಭಾನುವಾರ, 3 ಡಿಸೆಂಬರ್ 2023

ಬರುತಲಿದೆ ಚಳಿ ಥಕಧಿಮಿತ



ನಂದಿಬೆಟ್ಟದಲ್ಲಿ ಮಂಜಿನ ಜೊತೆ ಸೂರ್ಯರಶ್ಮಿಯ ಸರಸ.

ಮಾಲಾ ಡಿ.

ಹಸುಗೂಸಿಗೆ ಕಾಲು ಬಂದು ನಿಂತಲ್ಲಿ ನಿಲ್ಲದೆ ಮನೆಯೆಲ್ಲ ತೊದಲುಗಾಲು ಹಾಕುವಂತೆ ಚಳಿಗಾಲ ಅಂಬೆಗಾಲಿಡತೊಡಗಿದೆ. ಹೂವಿಗೆ ಹೆಜ್ಜೆ ಬಂದು ಸರಿದಾಡುವಂತೆ, ಸರಿದಾಡಿದಲ್ಲೆಲ್ಲ ಪರಿಮಳ ಚೆಲ್ಲಿದಂತೆ ಮಗುವಿನ ನಡೆದಾಟ. ಅದು ಹೆಜ್ಜೆಯಿಟ್ಟಲ್ಲೆಲ್ಲ ಪುಳಕ. ಚಳಿಯೂ ಅಷ್ಟೇ: ಸುಖದ ನವಿಲುಗರಿ ತಾಕಿದಂತೆ ಅದರ ನವಿರು ಸೋಕು. ಚಳಿಯ ತೆಕ್ಕೆಗೆ ಸಿಕ್ಕವರಿಗೆಲ್ಲ ಕಚಗುಳಿಯ ಪುಳಕದ ಉಡುಗೊರೆ.

ಚಳಿಯ ತೆಕ್ಕೆಯಿಂದ ಯಾರು ತಾನೆ ಪಾರಾಗುವರು? ಅರಳಿದ ಹೂ ಪಕಳೆಗಳ ತುಂಬ ಚಳಿಯೊಲವಿನ ಒಲವಿನ ಓಲೆ. ಎಲೆ ಎಲೆಗಳ ಮೇಲೆ ಚಳಿಯ ನೇವರಿಕೆಯಿಂದ ಮೂಡಿದ ಇಬ್ಬನಿ ಮುತ್ತುಗಳ ಸಾಲು. ಇಬ್ಬನಿಗೂ ಬಾಯಾರಿಕೆ, ಶೀತಲಹನಿಗಳ ಬಯಕೆ. ಮರಗಿಡಗಳು, ಹೂಬಳ್ಳಿಗಳಷ್ಟೇ ಅಲ್ಲ, ಬಯಲಿನ ತುಂಬಾ ಚಳಿಯದೇ ಹಾಜರಿ, ಜಂಬೂಸವಾರಿ. ನಸುಕಿನಲ್ಲೆದ್ದು ನೋಡಿ: ಅದು, ನೆಲಮುಗಿಲುಗಳನು ಚಳಿಮಾಯಿ ಮೀಯಿಸುವ ಅಮೃತಕ್ಷಣ. ದಿಟ್ಟಿ ಹರಿದಷ್ಟೂ ದೂರ ಹಿಮದ ಹೊದಿಕೆ, ಪ್ರಕೃತಿಯ ತುಂಬ ಸುಖದ ನರಳಿಕೆ.

> ಮಂಜು ಮೆತ್ತಿದ ಗರಿಕೆಯ ಮಾತು, ಸೌದೆಗಳ ಜೋಡಿಸಿಟ್ಟು ಹಬ್ಬಿಸಿದ ಜ್ವಾಲೆ ಮೇಲಿನ ಅಂಗೈಗಳ ಬೆಚ್ಚನೆಯ ಚಿತ್ರಗಳು, ಪುಟಾಣಿಯನ್ನು ಎದೆಗಾನಿಸಿ ಹೊದ್ದ ಶಾಲು ಕೊಡುವ ಬೆಚ್ಚಗಿನ ಅನುಭವ– ಚಳಿಯ ಆಗಮನದಲ್ಲಿ ಹಲವು ಚಿತ್ರಗಳು ಇದೋ...

ಯಾವುದೇ ನರಳಿಕೆಯ ಹಿಂದೆ ನೋವಿರುವುದು ಸಹಜವಷ್ಟೇ. ಆದರೆ, ಚಳಿಯಿಂದ ಉಂಟಾಗುವ ನರಳಿಕೆಯಲ್ಲಿರುವುದು ನಿರಾಳದ ಅನುಭವ, ಬಿಡುಗಡೆಯ ಭಾವ. ಬಿಸಿಲ ದಿನಗಳಲ್ಲಿ ಮೈಮನಸುಗಳ ಆರ್ದ್ರತೆಯೆಲ್ಲ ಕಣಕಣವೂ ಕ್ಷಣಕ್ಷಣವೂ ಸೋರಿ ಹೋಗಿ ಉಂಟಾದ ಬಳಲಿಕೆ, ಚಳಿಯ ಸಂಗದಲ್ಲಿ ನೀಗುವುದು; ದಣಿವು ಮಾಗಿ ಒಲವಾಗುವುದು, ಗೆಲುವಾಗುವುದು. ಚಳಿ ಬರಿ ಮಾಯಿಯಷ್ಟೇ ಅಲ್ಲ, ದಣಿವನ್ನು ಕಸುವಾಗಿ ಮಾಗಿಸುವ ಅಮೃತಮಯಿಯೂ ಹೌದು.

ಬೇಸಗೆ, ಬಯಕೆಗಳ ಕಾಲವೆನ್ನುವುದು ದಿಟ. ಆದರೆ, ಆ ಬಯಕೆಗಳ ಬಸಿರಲ್ಲಿ ನಂದದ ಧಗೆಯಿರುವುದು, ಆ ಧಗೆಯೇ ಬಯಕೆಯನ್ನು ಮತ್ತು ನಿಗಿನಿಗಿಯೆನಿಸುವುದು. ಚಳಿಯ ಶೀತಲತೆಯೂ ಬಯಕೆಗಳ ಜ್ವಾಲೆಗಳನು ಜಾಗೃತಗೊಳಿಸುವುದು. ಆದರೆ, ಆ ಜ್ವಾಲೆಗಳು ಕಾವಾಗಿ ಹಿತವಾಗಿ ಪರಿಣಮಿಸುತ್ತವೆಯೇ ಹೊರತು, ಜ್ವಾಲೆಗಳಾಗಿ ಸುಡುವುದಿಲ್ಲ. ಆಹಾ, ಚಳಿ ದಿನಗಳ ರಮಣೀಯತೆಯೇ... ಪ್ರೇಮವೂ ಕಾಮವೂ ಜೊತೆಜೊತೆಯಾಗಿ ನಡೆಯುವ ಮಾಯೆಯೇ...

ಚಳಿಯ ಕಾವನ್ನು ಹಿತವೆಂದು ಹೇಳುತ್ತಲೇ, ಚಳಿಯಷ್ಟು ತೀವ್ರವಾಗಿ ಬೇರಾವುದೂ ಸುಡುವುದಿಲ್ಲ ಎನ್ನುವ ಮಾತೊಂದಿರುವುದನ್ನೂ ನೆನಪಿಸಿಕೊಳ್ಳಬೇಕು. ಹಾಗೆ ನೋಡಿದರೆ, ಸುಡುವುದು ಚಳಿಯ ಗುಣವಲ್ಲ – ಬೇಸಗೆಯ ಲಕ್ಷಣ. ಸೂರ್ಯ ಪರಮಾತ್ಮ ಕುಂಟುನಡಿಗೆಯಲ್ಲಿ ಸಂಚರಿಸುವ ಬೇಸಗೆಗೆ ಮೈಯೆಲ್ಲ ಜ್ವಾಲೆಯ ಕಣ್ಣುಗಳು. ಆದರೆ, ಚಳಿಯ ಸುಡುವಿಕೆಯಿಂದ ಬೆಂದವರಿಗೆ ಬೇಸಗೆ ಬೆಳುದಿಂಗಳಿನಂತೆ ಭಾಸವಾದರೆ ಆಶ್ಚರ್ಯವೇನೂ ಇಲ್ಲ. ಇದೆಂಥದಿದು ಘೋರ ಸುಡುವಿಕೆ? ಅದರ ಸ್ವರೂಪವಾದರೂ ಯಾವುದು? ಆ ತಾಪವನ್ನು, ಅದರ ವಿರಾಟ ಸ್ವರೂಪವನ್ನು ಹೇಗೆ ಹೇಳುವುದು? ಅದನ್ನು ವಿರಹಿಗಳಷ್ಟೇ ಬಲ್ಲರು. ವಿರಹಿಗಳಿಗೆ ಚಳಿಯ ಶೀತಲತೆ ಕುಠಾರಪ್ರಾಯ; ಪ್ರೇಮಿಗಳ ಪಾಲಿಗೆ ಚಳಿಯನ್ನುವುದು ಬಯಕೆಯಮೃತದ ಅಕ್ಷಯಪಾತ್ರೆ. ಎದೆಯೊಳಗೊಂದು ಅಗ್ಗಿಷ್ಟಿಕೆಯಿರಿಸಿಕೊಂಡು, ಬೆಳುದಿಂಗಳ ಇರುಳಿನಲ್ಲಿ ಬಟ್ಟ ಬಯಲಿನ ನಡುವೆ ಬೆಂಕಿ ಮಾಡಿಕೊಂಡು ಎದುರಿಗೆ ಕೂರುವುದು... ಒಳಗೂ ಕಾವು, ಹೊರಗೂ ಕಾವು...

ಪ್ರಕೃತಿಯ ಲೀಲೆಯಲ್ಲಿ ಯಾವುದೂ ವಿಫಲವಲ್ಲ. 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ' ಎನ್ನುವ ಕುವೆಂಪು ಅವರ ಮಾತು ಕಾಲಗಳಿಗೂ ಅನ್ವಯಿಸುವಂತಹದ್ದು. ಆದರೆ, ಭಾವಕೋಶಕ್ಕೆ, ಸುಖದ ಅಭೀಪ್ಸೆಗೆ, ಮೈಮನಸ್ಸಿಗೆ, ಚಳಿಗಾಲ ಹಿತವೆನ್ನಿಸಿದಷ್ಟು ಬೇಸಗೆಯೂ ಮಳೆಯೂ ಕೂಡಿಬರುವುದಿಲ್ಲ. ಪ್ರಕೃತಿಯಲ್ಲಿ ಅದೆಷ್ಟೇ ಬಣ್ಣಗಳಿದ್ದರೂ ಆ ಚೆಲುವನ್ನು ಮರೆಸುವಷ್ಟು ರೇಜಿಗೆ ಬೇಸಗೆಯ ಒಡಲಿನಲ್ಲಿರುತ್ತದೆ. ಮಳೆದಿನಗಳೂ ಅಷ್ಟೇ – ಚಲನಶೀಲತೆಗೆ ಕ್ರಿಯಾಶೀಲತೆಗೆ ಅಷ್ಟೇನೂ ಪೂರಕವಲ್ಲ. ಮಳೆ ಹಾಗೂ ಬಿಸಿಲು ಕಣ್ಣಾಮುಚ್ಚಾಲೆಯಾಡುವ ಚಳಿಗಾಲ, ಸೃಜನಶೀಲತೆಯ ಮೊಗ್ಗು ಹಿಗ್ಗಿನಿಂದ ಅರಳುವ ಸಮಯ. ಮಳೆದಿನಗಳಲ್ಲಿ ಒದ್ದೆಯಾದ ಮಣ್ಣು, ಚಳಿದಿನಗಳಲ್ಲಿ ಹದಗೊಂಡು ಜೀವಕಳೆ ಮುಕ್ಕಳಿಸುವುದು ಚಳಿಯ ಸ್ಪರ್ಶದಲ್ಲೇ.

ಈ ಬಾರಿ, ಮಳೆಗಾಲ ಸೊರಗಿತು. ಆ ಕೊರತೆಯನ್ನು ಚಳಿ ನೀಗಿಸಲಾರದು. ಆದರೆ, ಹಿಂಗಾರಿನ ಭರವಸೆ ಉಳಿಸಿಕೊಳ್ಳಲಿಕ್ಕೆ ಅಗತ್ಯವಾದ ಹುಮ್ಮಸ್ಸನ್ನು ಚಳಿ ಕರುಣಿಸಬಲ್ಲದು. ❖



ಮೈಸೂರು ಯುವಕರು ಚಳಿ ಓಡಿಸಲು ಹಾಕಿದ ಕ್ಯಾಂಪ್ ಫೈರ್... ಚಿತ್ರ: ಅನೂಪ್ ರಾಘ್ ಟಿ.




ಬಿರುಬಿಸಿಲಿನ ಕಲಬುರಗಿಗೂ ಕಾಲಿಟ್ಟಿದ್ದಾನೆ ಚಳಿರಾಯ... ಚಿತ್ರ: ತಾಜುದ್ದೀನ್ ಆಜಾದ್

ಕಾವೇರಿ ನಿಸರ್ಗಧಾಮ ಚಳಿಯ ಓ ನಾಮ

ಚಿತ್ರಗಳು: ಡಿ.ಜಿ. ಮಲ್ಲಿಕಾರ್ಜುನ



ಮಲೆಮಕ್ಕಳ ಹಾಡು–ಪಾಡು



> ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರಿನಲ್ಲಿ ಅರಣ್ಯವಾಸಿಗಳು ಬದುಕು ಕಟ್ಟಿಕೊಳ್ಳುತ್ತಿರುವ ಬಗೆಯಲ್ಲಿ ಮಾನವೀಯ ಸೆಲೆಗಳು ಇಣುಕುತ್ತವೆ. ಅಂತಹ ಬಿಡಿಬಿಡಿ ಕಥನಗಳ ನುಡಿಚಿತ್ರವಿದು.

ಕುತ್ಲೂರಿನ ಹೊಳೆ ಹಾದಿ

ಸುಬ್ರಮಣ್ಯ ಎಚ್.ಎಂ.

ಆ ದಿನ ಮಧ್ಯಾಹ್ನದ ಬಿರು ಬಿಸಿಲು... ಸಾಗುತ್ತಿದ್ದ ಜೀಪು ಡಾಂಬರು ರಸ್ತೆಯಿಂದ ಕಾಡಿನ ರಸ್ತೆಗೆ ಟರ್ನ್ ತೆಗೆದುಕೊಂಡಿತು. ಮುಗಿಲೆತ್ತರ ಮರಗಳ ದಟ್ಟ ಕಾನನದೊಳಗೆ ಬೆಳಕು ಕತ್ತಲನ್ನು ಸೀಳುತ್ತಾ ಮಂದವಾಗುತ್ತಿತ್ತು. ಪ್ರಾಣಿಯೊಂದನ್ನು ನುಂಗಿದ ಹೆಬ್ಬಾವು ಉಸಿರು ಹೊರಹಾಕುತ್ತಾ ತೆವಳುವಂತೆ ಜೀಪ್ ಸಾಗಿತ್ತು. ಅದು ರಸ್ತೆ ಅರ್ಥಾತ್ ದೊಡ್ಡ ಗಾತ್ರದ ಬೆಣಚು ಕಲ್ಲುಗಳ ಕೊರಕಲು ರಸ್ತೆ. ಜೀಪ್ ಏರುತ್ತಾ, ಇಳಿಯುತ್ತಾ ಗುರಿ ತಲುಪುವ ಹೊತ್ತಿಗೆ ಆರು ಕಿಲೋಮೀಟರ್ ರಸ್ತೆ, ಅರವತ್ತು ಕಿಲೋಮೀಟರ್ ಇದೆಯೇನೋ ಎಂಬಂತೆ ಭಾಸವಾಯಿತು.

'ಈ ವರ್ಸ ಬರ್ಸ ಬಾರೀ ಕಮ್ಮಿ. ಬರ್ಸ ಇಜ್ಜಂದಿನ್ಯೆದಾವ್ರ ರೋಡ್ ಎಡ್ಡೆ ಉಂಡು'(ಈ ವರ್ಷ ಮಳೆ ಭಾರಿ ಕಡಿಮೆ. ಹೀಗಾಗಿ ರಸ್ತೆ ಚೆನ್ನಾಗಿದೆ) ಎಂದ ಡ್ರೈವರ್ ಜೀಪ್ ಅನ್ನು ಮಲೆಕುಡಿಯರ ಮನೆ ಅಂಗಳಕ್ಕೆ ಭರ್‍ರನೆ ತಂದು ನಿಲ್ಲಿಸಿದಾಗ, ಎದುರಿಗೆ ಕಂಡ ಸಹ್ಯಾದ್ರಿ ಸಾಲಿನ ಪಣೆಬೆಟ್ಟ ಮೇಲೆ ಮೋಡಗಳು ದಿಬ್ಬಣ ಹೊರಟ್ಟಿದ್ದವು.

ಇಲ್ಲಿಂದ ಕುತ್ಲೂರು ಕಥನ ಆರಂಭ...

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯ ಕುತ್ಲೂರು ಗ್ರಾಮ, ಪ್ರಕೃತಿ ಮಡಿಲಲ್ಲಿ ಇದೆ. ಸಣ್ಣದೊಂದು ಗುಡ್ಡ ಇಳಿದು ಲಿಂಗಪ್ಪ ಮಲೆಕುಡಿಯ ಅವರ ಮನೆ ಅಂಗಳಕ್ಕೆ ಕಾಲಿಟ್ಟಾಗ ಇಳಿಹೊತ್ತು. ಲಿಲ್ಲಿ ಹೂವುಗಳು ಸ್ವಾಗತ ಕೋರಿದರೆ, ಇಂಬಳಗಳು ದಾಳಿ ನಡೆಸಲು ಸನ್ನದ್ಧವಾಗಿದ್ದವು. ದೂರದಲ್ಲಿ ಹರಿಯುವ ಹೊಳೆಯ ಝುಳ ಝುಳ ನಾದ, ಗುಂಯ್ ಎನ್ನುವ ಶಬ್ದ ಬಿಟ್ಟರೆ ಉಳಿದೆಲ್ಲವೂ ನಿಶ್ಯಬ್ದ. ಮೊಬೈಲ್ ನೆಟ್‌ವರ್ಕ್ ಇಲ್ಲದ ಪ್ರಶಾಂತ ಪರಿಸರ.

ಅಲ್ಲೇ ಮನೆ ಜಗುಲಿ ಮೇಲೆ ಲಿಂಗಪ್ಪ ಮಲೆಕುಡಿಯ ಎಲೆ ಅಡಿಕೆ ಜಗಿಯುತ್ತಾ ಕುಳಿತಿದ್ದರು. ಅಂಗಳದಲ್ಲಿ ಒಣಗಿಸಲು ಹಾಕಿದ್ದ ಅಡಿಕೆ ಒಟ್ಟುಗೂಡಿಸಲು ಅಣಿಯಾಗುತ್ತಿದ್ದರು. ಅವರ ಪತಿ ಹೊನ್ನಮ್ಮ ಅತಿಥಿಗಳನ್ನು ಬರಮಾಡಿಕೊಳ್ಳಲು ತಯಾರು ಮಾಡುತ್ತಿದ್ದ ಪದಾರ್ಥದ ಘಮಲು ಅಂಗಳದವರೆಗೂ ಹರಡಿತ್ತು. ಮಗ ಪುರುಷೋತ್ತಮ ಅಂದು ಬಲಿಪಾಡ್ಯಮಿ ದಿನದ ಸಂಜೆ ಪೂಜೆಗೆ ಕಾಡಿನ ಹೂವುಗಳನ್ನು ತಂದು ಪೋಣಿಸಿ ದೀಪ ಬೆಳಗಲು ತಯಾರಿ ನಡೆಸಿದ್ದ.



ಸುದೆ ಪೂಜೆ

ಸಮಸ್ಯೆಗಳಿಗೆ ಕಿವಿಗೊಟ್ಟಾಗ...

ಕುತ್ಲೂರಿನ ಮಲೆಕುಡಿಯರು ಜೀವನ ನಿರ್ವಹಣೆಗಾಗಿ ಕಾಡುತ್ಪತ್ತಿಗಳಾದ ಜೇನುತುಪ್ಪ, ಮಂತುಹುಳಿ, ರಾಮಪತ್ರೆ, ಗೇರುಬೀಜ, ದಾಲ್ಚಿನ್ನಿ, ಕಾಳುಮೆಣಸು ಮಾರಿ, ಬಂದ ಹಣದಿಂದ ತಮ್ಮ ದೈನಂದಿನ ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಾ ತಮ್ಮ ಪಾಡಿಗೆ ಜೀವನ ಸಾಗಿಸುವ ಸ್ವಾಭಿಮಾನಿಗಳು. ತಮಗೆ ಇರುವ ಹತ್ತೋ– ಹದಿನೈದೋ ಗುಂಟೆ ಜಾಗದಲ್ಲಿ ಅಡಿಕೆ ಬೆಳೆದು ಜೀವನ ಕಟ್ಟಿಕೊಂಡಿರುವ ಬಡ ಶ್ರಮಜೀವಿಗಳು. ಕೆಲವರು ಮಂಗಳೂರು ಹೆಂಚು ಬಳಸಿ ಒಪ್ಪವಾದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ತಮಗೆ ಲಭ್ಯವಿರುವ ಸಂಪನ್ಮೂಲಗಳಲ್ಲೇ ನಿರ್ಮಿಸಿರುವ ಶೌಚಾಲಯ, ಸ್ನಾನದ ಮನೆ ಇತ್ಯಾದಿಯೂ ಇದೆ

12ನೇ ಪುಟಕ್ಕೆ...

ಮಾಂಝೀ ಕಥೆ ನೆನಪಿಸಿದ ರಸ್ತೆ...

ಬಿಹಾರದ ಗಯಾ ಜಿಲ್ಲೆಯ ದಶರಥ್ ಮಾಂಝೀ ಎಂಬ ಸಾಮಾನ್ಯ ವ್ಯಕ್ತಿಯೊಬ್ಬ ತನ್ನ ಊರಿನ ಜನರು, ಪತ್ನಿಗಾಗಿ ಬೆಟ್ಟವನ್ನು ಕಡಿದು ರಸ್ತೆ ಮಾಡಿದ ಸಾಹಸಮಯ ಕಥೆಯಂತೆ ಕುತ್ಲೂರಿನ ಜನರು ಸುದೀರ್ಘ ಹನ್ನೆರಡು ವರ್ಷಗಳ ಕಾಲ ಆರು ಕಿಲೋಮೀಟರ್ ರಸ್ತೆ ನಿರ್ಮಿಸಿದ ಕಥೆಯೂ ರೋಚಕ.

ನಾರಾವಿ ಗ್ರಾಮ ಪಂಚಾಯಿತಿಯಿಂದ 12 ಕಿಲೋಮೀಟರ್ ದೂರದಲ್ಲಿರುವ ಅರಣ್ಯವಾಸಿಗಳಿಗೆ ಸಮರ್ಪಕವಾಗಿ ಇದುವರೆಗೂ ರಸ್ತೆ ಸಂಪರ್ಕ ಕಲ್ಪಿಸಲು ಸಾಧ್ಯವಾಗಿಲ್ಲ. ರಸ್ತೆಗಳು ಬೆಟ್ಟ ಪ್ರದೇಶದಲ್ಲಿ ಇರುವುದರಿಂದ ಮಳೆಗಾಲದಲ್ಲಿ ಕೊಚ್ಚಿಹೋಗುತ್ತವೆ. ಮತ್ತೆ ಮಳೆಗಾಲ ನಿಂತಮೇಲೆ ಯಾವುದೇ ಯಂತ್ರ ಬಳಸದೆ ಹಾರೆ, ಪಿಕಾಸಿ ಇತ್ಯಾದಿ ಸಲಕರಣೆ ಬಳಸಿ ರಸ್ತೆ ರಿಪೇರಿ ಮಾಡಬೇಕಾಗುತ್ತದೆ. ಪ್ರತಿದಿನ ಒಬ್ಬೊಬ್ಬರ ಮನೆಯಿಂದ ಊಟ, ಸ್ವಸಹಾಯ ಪದ್ಧತಿಯಲ್ಲಿ ಪ್ರತಿ ಮನೆಯವರೂ ರಿಪೇರಿಗೆ ಕೆಲಸಕ್ಕೆ ಹೋಗಬೇಕಾಗುತ್ತದೆ. ಇದು ಪ್ರತಿ ವರ್ಷದ ಕಾಯಕ.

ಕುಕ್ಕುಜೆ-ಅಂಜರೊಟ್ಟು- ಕೋಟ್ಯಂದಡ್ಕ, ಅಂಜರೊಟ್ಟು ಕುರಿಯಾಡಿ ಅಂಗನವಾಡಿ ರಸ್ತೆ ಹಾಗೂ ಅಳಂಬ-ಕುರಿಯಾಡಿ- ಪಂಜಾಲು ರಸ್ತೆ ಹಾಗೂ ಅಳಂಬ ನೆಲ್ಲಿದಡ್ಕ ರಸ್ತೆ ನಿರ್ಮಾಣಕ್ಕಾಗಿ ಇವರದ್ದು ದಶಕಗಳ ಬೇಡಿಕೆ.

“ ಬಸ್ ಬರದ ಊರಲ್ಲಿ ಬಸ್ ನಿಲ್ದಾಣ!

'ನಾವೇ ಸೌಲಭ್ಯ ರೂಪಿಸಿಕೊಂಡರೆ ಅರಣ್ಯ ಇಲಾಖೆ ದೂರು ದಾಖಲಿಸುತ್ತದೆ. ರಸ್ತೆ ರಿಪೇರಿ ಮಾಡಿದ ನಾಲ್ವರ ಮೇಲೆ ಕೇಸಿದೆ. ಜಲವಿದ್ಯುತ್ ಮಾಡಿಕೊಳ್ಳಲು ಸರ್ಕಾರ ಅನುದಾನ ಕೊಡಬೇಕು. ಕೃಷಿ ಇಲಾಖೆಯಿಂದ ಪೈಪ್ ವ್ಯವಸ್ಥೆ ಆಗಬೇಕು. ರಸ್ತೆ ಬೇಕಿದ್ದರೆ ಅರಣ್ಯ ಇಲಾಖೆಯೇ ಸಮರ್ಪಕವಾಗಿ ನಿರ್ವಹಿಸಲಿ. ಕಾಡಬಾಗಿಲು ಸಮೀಪದ ಸೇತುವೆ ಮಳೆಗಾಲದಲ್ಲಿ ಮುರಿದು ಬಿದ್ದಿದೆ. ಸೇತುವೆ ಇಲ್ಲದಿರುವುದರಿಂದ ಪಡಿತರ ತರಲು ಕಾಲ್ನಡಿಗೆಯಲ್ಲಿ ಸಾಗಬೇಕಿದೆ. ಅಳಂಬದಲ್ಲಿ ಹೆಸರಿಗಷ್ಟೆ ಬಸ್ ನಿಲ್ದಾಣ ಇದೆ. ಆದರೆ, ಇದುವರೆಗೂ ಬಸ್ಸೇ ಬಂದಿಲ್ಲ.!'

ಚೀಂಕ್ರ ಮಲೆಕುಡಿಯ, ಬರೆಂಗಾಡಿ ಮನೆ, ಕುತ್ಲೂರು

ನಾವೂ ಮನುಷ್ಯರು...

ಗೌರಮ್ಮ ಕಟ್ಟಿಮನಿ

> ಡಿಸೆಂಬರ್ 3 ವಿಶ್ವ ಅಂಗವಿಕಲರ ದಿನ. ಧಾರವಾಡದ ಬಂಕ್‌ನಲ್ಲಿ ಶ್ರವಣ–ನುಡಿ ಎರಡೂ ಶಕ್ತಿ ಕಳೆದುಕೊಂಡವರು ವ್ಯವಹರಿಸುವ ಚಾತುರ್ಯ, ಕಾಲಿಲ್ಲದಿದ್ದರೂ ಟೀ ಮಾರುತ್ತಾ, ಕಲಾಕೃತಿ ಮೂಡಿಸುವ ಹುಬ್ಬಳ್ಳಿಯ ಸಾಧಕ, ವೀಲ್‌ಚೇರ್‌ನಲ್ಲಿ ಕುಳಿತೇ ಕೆಲಸ ಮಾಡುವ ಕಾಲ್ ಸೆಂಟರ್ ಉದ್ಯೋಗಿ ಶಾರದಾ ಇವರೆಲ್ಲರ ಬದುಕಿನ ಕಥೆಗಳು ನಿಮಗಾಗಿ...

“ಏನನ್ನೂ ಮಾಡಲಾಗದವರು’ ಎಂದು ಅನುಕಂಪದಿಂದ ನೋಡುವ ಬದಲು ಒಮ್ಮೆ ಅವಕಾಶ ಕೊಡಿ. 'ಕೈಯಿಲ್ಲ, ಕಾಲಿಲ್ಲ' ಎಂದು ಹೀಯಾಳಿಸುವ ಬದಲು ಸ್ವಾವಲಂಬಿಗಳಾಗಿ ಬದುಕಲು ಬಿಡಿ. ನಮ್ಮ ದೇಹಕ್ಕೆ ವೈಕಲ್ಯವಿದೆಯೇ ಹೊರತು ಮನಸ್ಸಿಗಲ್ಲ. ನಾವೂ ಮನುಷ್ಯರು. ಬದುಕುತ್ತೀವಿ. ನಮ್ಮಲ್ಲೂ ಛಲ, ಪ್ರತಿಭೆ ಇದೆ'...

ಈ ಮಾತು ರಾಯಚೂರಿನ ಮಹಾಂತೇಶ ನಿರಲಗಿ ಅವರೊಬ್ಬರದ್ದೇ ಅಲ್ಲ, ಅವರಂತೆಯೇ ಸಣ್ಣಪುಟ್ಟ ಕೆಲಸ ಗಳಿಸಿ ಬದುಕು ಕಟ್ಟಿಕೊಂಡವರ ಅಂತರಾಳದ ದನಿ. ಅಪಘಾತದಲ್ಲಿ ಕೈಕಾಲು ಕಳೆದುಕೊಂಡು, ಚಿಕ್ಕವಯಸ್ಸಿನಲ್ಲಿ ದೃಷ್ಟಿ ಹೋಗಿ, ಗುಡುಗು ಅಬ್ಬರಿಸಿದರೂ ಕೇಳದ ಸ್ಥಿತಿಯಲ್ಲಿರುವವರ ಅನಿಸಿಕೆಯೂ ಇದೇ ಆಗಿದೆ.

ವೈದ್ಯರೊಬ್ಬರ ಎಡವಟ್ಟಿನಿಂದ ಬಾಲ್ಯಾವಸ್ಥೆಯಲ್ಲೇ ಎರಡೂ ಕಣ್ಣುಗಳನ್ನು ಕಳೆದುಕೊಂಡ ಮಹಾಂತೇಶ ನಿರಲಗಿ 13ನೇ ವಯಸ್ಸಿನವರೆಗೆ ಶಾಲೆಯತ್ತ ಮುಖ ಮಾಡಲಿಲ್ಲ. ಆಮೇಲೆ ಅಂಧರ ಶಾಲೆಗೆ ಸೇರಿಕೊಂಡ ಅವರು, ಪದವಿವರೆಗೂ ಓದಿದರು. ಕೌಶಲ ತರಬೇತಿ ಪಡೆದು, ಕೆಲಸವನ್ನೂ ಹುಡುಕಿಕೊಂಡರು. ತಂತ್ರಜ್ಞಾನದ ನೆರವಿನಿಂದ ಈಗ ಅವರದ್ದು ಚೆಂದದ ಬಾಳ್ವೆ.

ಧಾರವಾಡದ ಟೋಲ್ ನಾಕಾ ಬಳಿಯಿರುವ ಶೆಲ್ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುವ ಮಧುಸೂದನ, ವಿನಾಯಕ, ಮಲ್ಲಿಕಾರ್ಜುನ, ಅನಿತಾ, ನಿಖಿತಾ ಮತ್ತು ಸವಿತಾ ಅವರ ಕಥೆ ಇನ್ನೂ ಆಸಕ್ತಿಕರ. ಈ ಆರೂ ಜನರಿಗೆ ದೃಷ್ಟಿ ಇದೆ; ಕಿವಿ ಕೇಳಿಸಲ್ಲ, ಮಾತು ಬರಲ್ಲ. ಶಿಸ್ತು ಮತ್ತು ಬದ್ಧತೆ ವಿಷಯದಲ್ಲಿ ಈ ಆರೂ ಜನರು ತಮಗೆ ತಾವೇ ಸಾಟಿ. ಚಳಿ, ಮಳೆ, ಬಿಸಿಲು ಏನೇ ಇರಲಿ, ಸ್ವಲ್ಪವೂ ತಡ ಮಾಡದೇ ಪೆಟ್ರೋಲ್ ಬಂಕ್‌ನಲ್ಲಿ ಹಾಜರಿರುತ್ತಾರೆ. ಕೈಸನ್ನೆ, ಮುಖಭಾವದಲ್ಲೇ ಸಂವಹನ ನಡೆಸಿ, ಗ್ರಾಹಕರ ವಿಶ್ವಾಸ ಗಳಿಸುತ್ತಾರೆ.

ಪೆಟ್ರೋಲ್, ಡೀಸೆಲ್ ಮತ್ತು ದರದ ಬಗ್ಗೆ ಗ್ರಾಹಕರು ಕೇಳುವುದೇ ಬೇಡ, ಕೊರಳಿಗೆ ಹಾಕಿಕೊಂಡಿರುವ ದರಪಟ್ಟಿ ತೋರಿಸಿ ಪಟಪಟನೆ ಮುಂದಿನ ಕೆಲಸ ಮಾಡುತ್ತಾರೆ. 'ಡಿಜಿಟಲ್ ಪೇಮೆಂಟ್ ಕೂಡ ಮಾಡಬಹುದು' ಎಂದು ಕಣ್ಣುಸನ್ನೆಯಲ್ಲೇ ತಿಳಿಸುತ್ತಾರೆ.

'ಬೆಳಗಾವಿ, ಹಾವೇರಿ, ಧಾರವಾಡ, ಹುಬ್ಬಳ್ಳಿಯವರಾದ ಈ ಆರೂ ಜನರು ಕಲಿತಿದ್ದು ಎಸ್ಸೆಸ್ಸೆಲ್ಸಿಯಷ್ಟೆ. ಕೌಶಲ ತರಬೇತಿ ಮತ್ತು ಅವರೊಳಗಿನ ಆಸಕ್ತಿ, ಚತುರತೆ ಬದುಕನ್ನು ಸುಗಮಗೊಳಿಸಿದೆ. ಅವರ ಬಗ್ಗೆ ಕೆಲ ಗ್ರಾಹಕರು ವಿನಾಕಾರಣ ತಕರಾರು ಮಾಡಿದರೆ, ಇನ್ನೂ ಕೆಲವರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅಂಗವಿಕಲರೆಂದು ನಿರ್ಲಕ್ಷಿಸುವುದು ಸರಿಯಲ್ಲ. ಅವರಲ್ಲಿನ ಸಾಮರ್ಥ್ಯ ಗುರುತಿಸಿ ಕೆಲಸ ನೀಡಿದರೆ ಖಂಡಿತ ಅವರು ಮಾಡುತ್ತಾರೆ.

11ನೇ ಪುಟಕ್ಕೆ...



ಧಾರವಾಡದ ಟೋಲ್ ನಾಕಾ ಬಳಿಯಿರುವ ಪೆಟ್ರೋಲ್ ಬಂಕ್‌ನಲ್ಲಿ ಗ್ರಾಹಕರೊಬ್ಬರಿಗೆ ಸವಿತಾ ಅವರು ದರ ಪಟ್ಟಿ ತೋರಿಸುತ್ತಿರುವುದು ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

‘ವಜ್ರ’ದ ಹೊಳಪಿನಲ್ಲಿ ರವೀಂದ್ರ ಕಲಾಕ್ಷೇತ್ರ

ಮಂಜುಶ್ರೀ ಎಂ. ಕಡಕೋಳ

ಕರ್ನಾಟಕದ ಸಾಂಸ್ಕೃತಿಕ ಭೂಪಟದಲ್ಲಿ ಕಾಯಂ ಸ್ಥಾನ ಪಡೆದಿರುವ ರವೀಂದ್ರ ಕಲಾಕ್ಷೇತ್ರಕ್ಕೀಗ ವಜ್ರ ಮಹೋತ್ಸವದ ಸಂಭ್ರಮ. ಈ ನೆಪದಲ್ಲಿ ಕಲಾಕ್ಷೇತ್ರದ ಇತಿಹಾಸದ ಪುಟಗಳ ಹೊಳಪುಗಳ ಮರುನೋಟ ಇಲ್ಲದೆ...



ಸಂಭ್ರಮ

ಭಾರತಕ್ಕೆ ಮೊದಲ ನೊಬೆಲ್ ಪ್ರಶಸ್ತಿ ತಂದುಕೊಟ್ಟ ಕವಿ ರವೀಂದ್ರನಾಥ ಟ್ಯಾಗೋರರ ಜನ್ಮ ಶತಮಾನೋತ್ಸವದ ನೆನಪಿನಲ್ಲಿ ಜನ್ಮತಳೆದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರಕ್ಕೂ ಕನ್ನಡ ಸಾಂಸ್ಕೃತಿಕ ಲೋಕಕ್ಕೂ ಅವಿನಾಭಾವ ನಂಟಿದೆ. ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ ಕ್ಷೇತ್ರಗಳಷ್ಟೇ ಅಲ್ಲ; ನಾಡಿನ ಹಲವು ಹೋರಾಟ, ಚಳವಳಿಗಳಿಗೂ ಈ ಕಲಾಕ್ಷೇತ್ರದ ಕೊಡುಗೆ ಅವಿಸ್ಮರಣೀಯ.

1961ರಲ್ಲಿ ಟ್ಯಾಗೋರರ ಜನ್ಮಶತಾಬ್ದಿಗಾಗಿ ದೇಶದಾದ್ಯಂತ ರಂಗಮಂದಿರ ನಿರ್ಮಿಸಬೇಕೆಂಬ ಸಲಹೆ ಬಂದಿದ್ದೇ ಕನ್ನಡತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಂದ. ಅಂತೆಯೇ ಕೋಲ್ಕತ್ತ, ಮುಂಬೈ, ಹೈದರಾಬಾದ್, ಭೋಪಾಲ್ ಮತ್ತು ಬೆಂಗಳೂರು ಹೀಗೆ ದೇಶದ ಐದು ಕಡೆ ರವೀಂದ್ರರ ನೆನಪಿನಲ್ಲಿ ರಂಗಮಂದಿರಗಳು ರೂಪುಗೊಂಡವು.

1960ರ ದಶಕದಲ್ಲಿ ಕೊಳೆಗೇರಿಯಾಗಿದ್ದ ಜಾಗದಲ್ಲಿ ಕಲಾಕ್ಷೇತ್ರ ತಲೆಎತ್ತಿದ್ದು. 1963ರಲ್ಲಿ ಲೋಕಾರ್ಪಣೆಗೊಂಡ ರವೀಂದ್ರ ಕಲಾಕ್ಷೇತ್ರಕ್ಕೀಗ ವಜ್ರ ಮಹೋತ್ಸವದ ಸಂಭ್ರಮ.

ಕಲಾಕ್ಷೇತ್ರ ನಿರ್ಮಾಣದ ಮುಕ್ತಾಯ ಹಂತದಲ್ಲಿ ಹಣದ ಕೊರತೆ ಎದುರಾಗಿತ್ತು. ಆಗ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಸ್. ನಿಜಲಿಂಗಪ್ಪ ಅವರು ಒಂದೂವರೆ ಲಕ್ಷ ರೂಪಾಯಿ ಅನುದಾನ ನೀಡಿದ್ದರು. ವಿಶೇಷವೆಂದರೆ, ಕಲಾಕ್ಷೇತ್ರದ ನಿರ್ಮಾಣಕ್ಕೆ ಸಾರ್ವಜನಿಕರೂ ದೇಣಿಗೆ ನೀಡಿದ್ದರು. ಸರ್ಕಾರಿ ಉದ್ಯಮಗಳೂ ಸೇರಿದಂತೆ ರಂಗಕರ್ಮಿ ಎಚ್.ಸಿ. ಮಹಾದೇವಪ್ಪ ಹಾಗೂ ತಮಿಳಿನ ಖ್ಯಾತನಟ ಶಿವಾಜಿ ಗಣೇಶನ್ ಅವರೂ ದೇಣಿಗೆ ನೀಡಿದ್ದರು.

ಕಲ್ಲಿನಿಂದಲೇ ಕಟ್ಟಲಾಗಿರುವ ಈ ಕಟ್ಟಡದ ವಾಸ್ತುಶಿಲ್ಪಿ ಆಗಿದ್ದವರು ಅಮೆರಿಕದ ಚಾರ್ಲ್ಸ್ ವಿಲ್ಸನ್. ಆಗಿನ ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಬಿ.ಆರ್. ಮಾಣಿಕ್ಯಂ ನಿರ್ಮಾಣ ನಿರ್ವಹಣೆಯ ಹೊಣೆ ಹೊತ್ತಿದ್ದರು. 1963ರ ಮಾರ್ಚ್ 12ರಂದು ಅಂದಿನ ಕೇಂದ್ರ ಸಚಿವ ಪ್ರೊ. ಹುಮಾಯೂನ್ ಕಬೀರ್ ಅವರಿಂದ ಕಲಾಕ್ಷೇತ್ರ ಉದ್ಘಾಟನೆಗೊಂಡಿತು. ಮೈಸೂರು ಮಹಾರಾಜ ಹಾಗೂ ರಾಜ್ಯಪಾಲ ಜಯಚಾಮರಾಜೇಂದ್ರ ಒಡೆಯರ್ ಅಧ್ಯಕ್ಷತೆ ವಹಿಸಿದ್ದರು. ಪ್ರದರ್ಶನಕ್ಕೆ ಅವಕಾಶ ಲಭಿಸಿದ್ದು ಆಗಸ್ಟ್‌ನಲ್ಲಿ.

1970–80ರ ದಶಕ ರವೀಂದ್ರ ಕಲಾಕ್ಷೇತ್ರದ ಪಾಲಿಗೆ ಸುವರ್ಣಯುಗ. ಆಧುನಿಕ ಕನ್ನಡ ರಂಗಭೂಮಿಯ ಹಲವು ದಿಗ್ಗಜರು ಇಲ್ಲಿಂದಲೇ ತಮ್ಮ ವೃತ್ತಿ ಬದುಕು ಆರಂಭಿಸಿದರು. ಶ್ರೀರಂಗ, ಬಿ.ವಿ.ಕಾರಂತ, ಎಂ.ಎಸ್. ಸತ್ಯು, ಸಿ.ಆರ್. ಸಿಂಹ, ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರ, ಪಿ. ಲಂಕೇಶ್, ಸಿ.ಜಿ. ಕೃಷ್ಣಸ್ವಾಮಿ (ಸಿಜಿಕೆ) ಆರ್. ನಾಗೇಶ್, ಶ್ರೀನಿವಾಸ ಜಿ. ಕಪ್ಪಣ್ಣ, ಜೆ. ಲೋಕೇಶ್, ಟಿ.ಎಸ್. ನಾಗಾಭರಣ, ಬಿ.ಜಯಶ್ರೀ, ಉಮಾಶ್ರೀ, ಪ್ರಕಾಶ್ ರೈ ಸೇರಿ ಅನೇಕರು ಕಲಾಕ್ಷೇತ್ರದ ಮೂಲಕ ಪ್ರವರ್ಧಮಾನಕ್ಕೆ ಬಂದವರು.

ಸಾರ್ಕ್ ಸಮ್ಮೇಳನ, ರಷ್ಯಾ, ಐಸಿಸಿಆರ್ ಸೇರಿ ಅನೇಕ ಉತ್ಸವಗಳು ಇಲ್ಲಿ ಯಶಸ್ವಿಯಾಗಿ ನಡೆದಿವೆ. ಕಾಲಕ್ಕೆ ತಕ್ಕಂತೆ ಕಲಾಕ್ಷೇತ್ರ ತಾಂತ್ರಿಕವಾಗಿ ಅಪ್‌ಗ್ರೇಡ್‌ಗೆ ಒಳಗಾಗಿದೆ. ಆಗಾಗ ರಿಪೇರಿಯ ಕಾರಣಕ್ಕಾಗಿ ಕಲಾಕ್ಷೇತ್ರದ ಬಾಗಿಲು ಮುಚ್ಚಿದರೂ, ನಾಡಿನ ರಂಗಕರ್ಮಿಗಳು ಕಲಾಕ್ಷೇತ್ರವನ್ನು ತಮ್ಮ ಚಟುವಟಿಕೆಗಳ ಮೂಲಕ ಜೀವಂತವಾಗಿರಿಸಿದ್ದಾರೆ. 1972ರಲ್ಲಿ ಬಿ.ವಿ. ಕಾರಂತರ ಬಯಲು ರಂಗೋತ್ಸವ ಹಾಗೂ 1983–84ರ ಅವಧಿಯಲ್ಲಿ ಹವ್ಯಾಸಿ ರಂಗ ತಂಡಗಳ ‘ಕೈಲಾಸಂ ಕಲಾಕ್ಷೇತ್ರ’ ತಾಲೀಮು ಕೊಠಡಿಯನ್ನೇ ವೇದಿಕೆಯನ್ನಾಗಿಸಿದ ಸಿಜಿಕೆ ಅವರು ಇಲ್ಲಿ ನಾಟಕಗಳನ್ನು ಪ್ರದರ್ಶಿಸಿದ್ದು ಇತಿಹಾಸ. ಅಂತೆಯೇ 1973ರಲ್ಲಿ ಏರ್ಪಡಿಸಿದ್ದ ‘ಅಲ್ ಇಂಡಿಯಾ ಥಿಯೇಟರ್ ಅಂಡ್ ಡ್ರಾಮಾ ಫೆಸ್ಟಿವಲ್’ ಸಲುವಾಗಿ ಕಲಾಕ್ಷೇತ್ರದ ಹಿಂಭಾಗದಲ್ಲಿ ರೂಪುಗೊಂಡ ಸಂಸ ಬಯಲು ರಂಗಮಂದಿರಕ್ಕೀಗ ಸುವರ್ಣ ಸಂಭ್ರಮ.

1978ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ತೆಕ್ಕೆಗೆ ಬಂದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ, ಸಂಗೀತ ಮತ್ತು ನೃತ್ಯ ಅಕಾಡೆಮಿ, ಯಕ್ಷಗಾನ, ಲಲಿತಕಲಾ, ಶಿಲ್ಪಕಲಾ ಅಕಾಡೆಮಿಗಳೂ ಬಂದವು. ಪುಸ್ತಕ ಪ್ರೇಮಿಗಳ ‘ಸಿರಿಗನ್ನಡ ಮಳಿಗೆ’, ಕಲಾವಿದ–ಪ್ರೇಕ್ಷಕರ ಹೊಟ್ಟೆ ತುಂಬಿಸಲು ಕ್ಯಾಂಟೀನ್, ರಿಹರ್ಸಲ್‌ಗಾಗಿ ತಾಲೀಮು ಕೊಠಡಿಯೂ ಇಲ್ಲಿದೆ. ಕಲಾಕ್ಷೇತ್ರವು ಸಾಂಸ್ಕೃತಿಕ ಚಟುವಟಿಕೆಗಳಲ್ಲದೇ ರೈತ, ಕಾವೇರಿ, ಗೋಕಾಕ ವರದಿ, ಬಾಬರಿ ಮಸೀದಿ ಪ್ರಕರಣ ಸೇರಿದಂತೆ ಅನೇಕ ಹೋರಾಟಗಳಿಗೂ ಸಾಕ್ಷಿಯಾಗಿದೆ. ಅಂತೆಯೇ ಸಾಂಸ್ಕೃತಿಕ ಲೋಕದ ಗಣ್ಯ ವ್ಯಕ್ತಿಗಳು ನಿಧನರಾದಾಗ ಸಂಸ ಬಯಲು ರಂಗಮಂದಿರವು ಗಣ್ಯರ ಅಂತಿಮ ದರ್ಶನದ ಗೌರವ ಸಮರ್ಪಣೆಯ ತಾಣವೂ ಆಗಿದೆ.



ಕಲಾಕ್ಷೇತ್ರದಲ್ಲಿ 1991ರಲ್ಲಿ ನಡೆದ ಗುಬ್ಬಿ ವೀರಣ್ಣ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಿದ ಡಾ.ರಾಜ್‌ಕುಮಾರ್, ಬಿ. ಸರೋಜಾದೇವಿ, ಎಸ್.ಎಂ. ಕೃಷ್ಣ ಹಾಗೂ ಪಂಡರಿಬಾಯಿ

ವೇದಿಕೆಯಲ್ಲೇ ಹಾರ ಬದಲಿಸಿಕೊಂಡಿದ್ದೆವು!



ರವೀಂದ್ರ ಕಲಾಕ್ಷೇತ್ರ ನನ್ನ ಪಾಲಿಗೆ ದೇಗುಲವಿದ್ದಂತೆ. ಕಲಾವಿದರಿಗೆ ಇಲ್ಲಿ ನಾಟಕ ಮಾಡುವುದೆಂದರೆ ಹೆಮ್ಮೆಯ ಭಾವ. ಟಿಕೆಟ್ ತೆಗೆದುಕೊಳ್ಳಲು ಹಣವಿರದ ಕಾಲದಲ್ಲಿ ಹೇಮಾಮಾಲಿನಿ, ಜಯಲಲಿತಾ ಅವರ ನೃತ್ಯಗಳನ್ನು ಕಲಾಕ್ಷೇತ್ರದ ಕಿಟಕಿಯಲ್ಲಿ ನಿಂತು ನೋಡುತ್ತಿದ್ದೆ. ರಾತ್ರಿ 7.30ಕ್ಕೆ ನಾನು ಮತ್ತು ಲೋಕೇಶ್ ದೇವಸ್ಥಾನದಲ್ಲಿ ಮದುವೆಯಾಗಿ, 9.30ಕ್ಕೆ ಕಲಾಕ್ಷೇತ್ರದಲ್ಲಿ ‘ಕಾಕನಕೋಟೆ’ ನಾಟಕದಲ್ಲಿ ತಂದೆ–ಮಗಳಾಗಿ ಅಭಿನಯಿಸಿದ್ದೆವು. ನಾಟಕ ಮುಗಿದ ಬಳಿಕ ಇದೇ ಕಲಾಕ್ಷೇತ್ರದಲ್ಲೇ ಪ್ರೇಕ್ಷಕರ ಎದುರಲ್ಲಿ ಇಬ್ಬರೂ ಹಾರ ಬದಲಾಯಿಸಿಕೊಂಡಿದ್ದೆವು.

ಗಿರಿಜಾ ಲೋಕೇಶ್, ನಟಿ

ಪ್ರೇಕ್ಷಕರನ್ನೂ ಬೆಳೆಸಿ



1968ರಿಂದಲೂ ರವೀಂದ್ರ ಕಲಾಕ್ಷೇತ್ರದೊಂದಿಗೆ ನನಗೆ ಅವಿನಾಭಾವ ನಂಟಿದೆ. ಈ ರಂಗಮಂದಿರವನ್ನು ಪೂರ್ಣಪ್ರಮಾಣದ ರಂಗಕ್ರಿಯೆಗೆ ಮೀಸಲಿಟ್ಟದ್ದರೆ ಚೆನ್ನಾಗಿರುತ್ತಿತ್ತು. ಇಲ್ಲಿ ಒಳಗಿರುವ ಕೆಲ ಸೌಲಭ್ಯಗಳನ್ನು ಸುಧಾರಿಸಬೇಕಿದೆ. ಕಲಾಕ್ಷೇತ್ರವನ್ನು ಕಾಯಂ ಆಗಿ ರಿಪೇರಿ ಮಾಡಬೇಕು ಅಂತ ಯಾರಿಗೂ ಅನಿಸಿಲ್ಲ. ಹಾಗಾಗಿ, ಇದು ಆಗಾಗ ರಿಪೇರಿ ಆಗುತ್ತಲೇ ಇರುತ್ತದೆ.

ಟಿ.ಎಸ್. ನಾಗಾಭರಣ, ಸಿನಿಮಾ ನಿರ್ದೇಶಕ

ನಾಟಕ ಪ್ರದರ್ಶನ

‘ನಾಟಕ ಬೆಂಗ್ಳೂರು’, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಬೆಂಗಳೂರು ರಂಗಕಲಾವಿದರ ವಿವಿಧೋದ್ದೇಶ ಸಹಕಾರ ಸಂಘದ ಸಹಯೋಗದಲ್ಲಿ ಡಿ. 4ರಿಂದ 2024ರ ಮಾರ್ಚ್ 27ರ ತನಕ ವಜ್ರ ರಂಗೋತ್ಸವ ಹಮ್ಮಿಕೊಂಡಿದೆ. ಬೆಂಗಳೂರಿನ 30 ತಂಡಗಳು, 30 ನಾಟಕಗಳನ್ನು ಪ್ರದರ್ಶಿಸಲಿವೆ. ‘ನಾಟಕ ಬೆಂಗ್ಳೂರು’ ಕಾಲೇಜುಗಳ ಕಡೆಗೆ ಹವ್ಯಾಸಿ ರಂಗ ನಡಿಗೆ, ಸ್ಮರಣ ಸಂಚಿಕೆ– ಕಲಾಕ್ಷೇತ್ರ 60, ನಾಟಕ ರಚನಾ ಸ್ಪರ್ಧೆ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಶಿವಾಜಿ ಗಣೇಶನ್ ದೇಣಿಗೆ

ರಂಗಭೂಮಿ ಬಗ್ಗೆ ಪ್ರೀತಿ ಹೊಂದಿದ್ದ ಶಿವಾಜಿ ಗಣೇಶನ್ ಅವರು ತಮ್ಮ ತಂಡ ಕಟ್ಟಿಕೊಂಡು ‘ವೀರಪಾಂಡ್ಯ ಕಟ್ಟಬೊಮ್ಮನ್’ ನಾಟಕವನ್ನು ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಪ್ರದರ್ಶನ ನೀಡಿ 22 ಸಾವಿರ ರೂಪಾಯಿ ಸಂಗ್ರಹಿಸಿದ್ದರು. ಈ ಹಣವನ್ನು ರವೀಂದ್ರ ಕಲಾಕ್ಷೇತ್ರ ನಿರ್ಮಾಣಕ್ಕೆ ದೇಣಿಗೆಯನ್ನಾಗಿ ನೀಡಿದ್ದರು.

‘ಉತ್ತರ–ದಕ್ಷಿಣ’ ಬಾನ್ಸುರಿ ಸಮ್ಮೋಹನ

ಬಾನ್ಸುರಿಯ ಮೇರು ಶಿಖರ ಪಂ. ಹರಿಪ್ರಸಾದ್ ಚೌರಾಸಿಯ ಅವರ ಗರಡಿಯಲ್ಲಿ ಪಳಗಿರುವ ರಾಕೇಶ್ ಚೌರಾಸಿಯ ಬಾಲ ಪ್ರತಿಭೆ. ಬಾನ್ಸುರಿಯಲ್ಲಿ ಸ್ವರ, ತಾಳ, ಲಯ ಮಾಧುರ್ಯವನ್ನು ಹದವರಿತಂತೆ ಮೂಡಿಸುತ್ತಾ ಭಾವದಲೆಯನ್ನು ಶ್ರವಣಾನಂದಕರವಾಗಿ ಪ್ರಸ್ತುತಪಡಿಸುವ ಪರಿ ಅನನ್ಯ. ಅವರು ತಮ್ಮ ಸಂಗೀತ ಯಾನದ ಅನುಭವಗಳನ್ನು ಹಂಚಿಕೊಂಡರು.

ಸಂದರ್ಶನ: ಉಮಾ ಅನಂತ್

• ಬಾನ್ಸುರಿ ಮಾಂತ್ರಿಕ ಪಂ. ಹರಿಪ್ರಸಾದ್ ಚೌರಾಸಿಯ ಅವರು ನಿಮ್ಮ ಸಮೀಪದ ಬಂಧು. ಅವರಿಂದಲೇ ಬಾನ್ಸುರಿ ನುಡಿಸಾಣಿಕೆ ಕಲಿತಿರುವ ನೀವು, ಅವರ ವಾದನ ಕ್ರಮವನ್ನು ಹೇಗೆ ಮೈಗೂಡಿಸಿಕೊಂಡಿದ್ದೀರಿ?

ಪಂ. ಹರಿಪ್ರಸಾದ್ ಚೌರಾಸಿಯ ಅವರ ಬಳಿ ನಾನು ಚಿಕ್ಕ ಮಗು ಇರುವಾಗಲೇ ಬಾನ್ಸುರಿ ಕಲಿಯಲಾರಂಭಿಸಿದೆ. ಅವರನ್ನು ನಾನು ‘ಬಾಬೂಜಿ’ ಎಂದೇ ಕರೆಯುವುದು. ಅವರಿಂದ ವಾದ್ಯ ಕಲಿಯಲಾರಂಭಿಸಿದ್ದೇ ರೋಚಕ ಅನುಭವ. ಅವರು ಸದಾ ಕಛೇರಿ, ಪ್ರಯಾಣದಲ್ಲೇ ಬ್ಯುಸಿ ಇರುತ್ತಿದ್ದರು. ಅವರು ಮನೆಯಲ್ಲಿದ್ದಾಗ ನುಡಿಸಾಣಿಕೆಯ ವಿಧಾನ, ಬೆರಳಿನ ತಂತ್ರಗಾರಿಕೆ, ಲಯದೊಂದಿಗೆ ಹೊಂದಾಣಿಕೆ, ಗಮಕಗಳ ಪ್ರಯೋಗ ಮುಂತಾದವುಗಳನ್ನು ಕಲಿತೆ. ಅವರ ನುಡಿಸಾಣಿಕೆ ವಿಧಾನವನ್ನು ನೋಡುತ್ತಲೇ, ಕೇಳುತ್ತಲೇ ಬಹಳಷ್ಟು ಕಲಿತೆ. ಆರನೇ ವಯಸ್ಸಿಗೇ ದೂರದರ್ಶನದಲ್ಲಿ ನುಡಿಸಿದೆ, ಒಂಬತ್ತನೇ ವಯಸ್ಸಿನಲ್ಲಿ ಮುಂಬೈಯ ಜೇವಿಯಸ್ ಶಾಲೆಯಲ್ಲಿ ಮೊದಲ ಸಾರ್ವಜನಿಕ ಕಛೇರಿ ನೀಡಿದೆ. ಮೊದಲ ಕಛೇರಿಯಲ್ಲಿ ರಾಗ ‘ಭಾಗೇಶ್ರೀ’ ಹಾಗೂ ‘ಯಮನ್’ ಅನ್ನು ನುಡಿಸಿದೆ. ಇದು ಬಾಬೂಜಿ ಅವರಿಗೆ ಬಹಳ ಖುಷಿ ಕೊಟ್ಟಿತು. ನನ್ನ ಹದಿಮೂರನೇ ವಯಸ್ಸಿನಲ್ಲಿ ರಷ್ಯಾದಲ್ಲಿ ಬಾಬೂಜಿ ಜೊತೆ ಸೇರಿ ಬಾನ್ಸುರಿ ನುಡಿಸಿದ್ದು ಇನ್ನು ನೆನಪಿನಾಳದಲ್ಲಿ ಹಾಗೆಯೇ ಇದೆ.

• ಹಿಂದೆ ಬರೀ ಸಾಥಿ ವಾದ್ಯವಾಗಿದ್ದ ಬಾನ್ಸುರಿ ಕ್ರಮೇಣ ಸೋಲೊ ವಾದ್ಯವಾಗಿಯೇ ಖ್ಯಾತಿ ಗಳಿಸಿತು. ಇದರಿಂದಾಗಿ ಜುಗಲ್‌ಬಂದಿ ಪರಿಕಲ್ಪನೆ ಗರಿಗೆದರಿತು. ನಿಮ್ಮ ಜುಗಲ್‌ಬಂದಿ ಕಛೇರಿಗಳಲ್ಲಿ ವಾದ್ಯದ ಹೊಂದಾಣಿಕೆ ಹೇಗೆ ಮಾಡಿಕೊಳ್ಳುತ್ತೀರಿ?

ಹಿಂದೂಸ್ತಾನಿ– ಕರ್ನಾಟಕ ಸಂಗೀತ ಕಛೇರಿ ನೀಡುವಾಗ ಎರಡೂ ಪ್ರಕಾರಗಳಲ್ಲಿ ಸಾಮಾನ್ಯ ಇರುವ ರಾಗಗಳ ಆಯ್ಕೆ ಮಾಡಿಕೊಳ್ಳುತ್ತೇವೆ. ಹಿಂದೂಸ್ತಾನಿಯ ಭೂಪಾಲಿ, ಕರ್ನಾಟಕ ಸಂಗೀತದ ಮೋಹನ, ಯಮನ್ ರಾಗ ಕಲ್ಯಾಣಿಗೆ ಸಮನಾದುದು.. ಹೀಗೆ ಅನೇಕ ರಾಗಗಳು ಎರಡೂ ಪ್ರಕಾರಗಳಲ್ಲಿವೆ. ನುಡಿಸುವ ಶೈಲಿ ಮಾತ್ರ ಬೇರೆ ಬೇರೆ. ರಾಗ–ಲಯ ಎರಡನ್ನೂ ಬ್ಯಾಲೆನ್ಸ್ ಮಾಡುತ್ತಾ ಕೇಳುಗರಿಗೆ ಹೊಸ ಅನುಭವ ಆಗುವಂತೆ ಮಾಡುವುದು ಮುಖ್ಯ. ಬಾನ್ಸುರಿ ಜೊತೆಗೆ ಸಂತೂರ್, ಸಿತಾರ್, ತಬಲಾ ವಾದ್ಯಗಳ ಜೊತೆ ಜುಗಲ್‌ಬಂದಿ ನುಡಿಸಿದ್ದೇನೆ. ಘಟಾನುಘಟಿ ಗಾಯಕರ ಜೊತೆಗೂ ಗಾಯನ– ವಾದನ ಜುಗಲ್‌ಬಂದಿ ನಡೆಸಿಕೊಟ್ಟಿದ್ದೇನೆ. ಇತ್ತೀಚೆಗೆ ಉಸ್ತಾದ್ ಜಾಕೀರ್ ಹುಸೇನ್ ಅವರೊಂದಿಗೆ ಜುಗಲ್‌ಬಂದಿಯ ಹೊಸ ಆಲ್ಬಂ ‘As we speak’ ಅನ್ನು ಹೊರತಂದಿದ್ದೇವೆ.

• ಬಾನ್ಸುರಿಯಲ್ಲಿ ಮೀಂಡ್, ಗಮಕ, ಮನೋಧರ್ಮ ಪ್ರಯೋಗಗಳು ಒಬ್ಬರಿಂದ ಇನ್ನೊಬ್ಬರಿಗೆ ಭಿನ್ನವಾಗಿರುತ್ತವೆ. ನಿಮ್ಮ ನುಡಿಸಾಣಿಕೆಯ ಶೈಲಿಯನ್ನು ವಿವರಿಸುವುದಾದರೆ...


ಬಾನ್ಸುರಿಯಲ್ಲಿ ನನ್ನ ಗುರು ಹರಿಪ್ರಸಾದ್ ಚೌರಾಸಿಯ ಅವರು ಎಲ್ಲವನ್ನೂ ಕ್ರಮಬದ್ಧಗೊಳಿಸಿದ್ದಾರೆ. ರಾಗ, ನುಡಿಸಾಣಿಕೆ ಕ್ರಮ, ಗಮಕಗಳ ಪ್ರಯೋಗಗಳನ್ನು ಮಾಡುವ ಬಗೆಯನ್ನು ಹೇಳಿಕೊಟ್ಟಿದ್ದಾರೆ. ಈಗ ನಮ್ಮ ಮನೋಧರ್ಮಕ್ಕೆ ಅನುಗುಣವಾಗಿ ಮೀಂಡ್, ವಿಬ್ರಟೊಗಳನ್ನು ನಾವು ಪ್ರಯೋಗಿಸಿಕೊಳ್ಳುತ್ತಿದ್ದೇವೆ, ಕೇಳುಗನಿಗೆ ವಿಶಿಷ್ಟ ಅನುಭೂತಿ ಮೂಡಿಸಿ ನಾದಮಾಧುರ್ಯದಿಂದ ಸಮ್ಮೋಹನಗೊಳಿಸಲು ಈ ಎಲ್ಲ ಅಂಶಗಳನ್ನು ಅಗತ್ಯವಾಗಿ ನುಡಿಸಾಣಿಕೆಯಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ.

• ನಿಮ್ಮ ಫ್ಯೂಷನ್ ಸಂಗೀತದ ಬಗ್ಗೆ ಹೇಳಿ.

ಒಂದೇ ಬಗೆಯ ಸಂಗೀತ ಕೇಳುಗರಿಗೆ ನೀಡುವುದಕ್ಕಿಂತ ಬೇರೆ ಪ್ರಕಾರಗಳತ್ತಲೂ ಗಮನಹರಿಸುವುದು ಕಲಾವಿದನಿಗೆ ಸವಾಲೇ ಹೌದು. ಆದರೆ ಶಾಸ್ತ್ರೀಯ ಸಂಗೀತ ಭದ್ರ ಬುನಾದಿ ಇದ್ದರೆ ಬೇರೆ ಯಾವ ಪ್ರಕಾರಗಳನ್ನೂ ಸುಲಭವಾಗಿ ಒಲಿಸಿಕೊಳ್ಳಬಹುದು. ಜಾಗತಿಕ ನೆಲೆಯಲ್ಲಿ ಸಂಗೀತವನ್ನು ನೋಡಿದರೆ ಫ್ಯೂಷನ್ ಸಂಗೀತ ಎಲ್ಲ ವಯೋಮಾನದವರಿಗೆ ಇಷ್ಟವಾಗುತ್ತದೆ. ಹೀಗಾಗಿ ‘ರಾಕೇಶ್ ಅಂಡ್ ಫ್ರೆಂಡ್ಸ್’ ಹೆಸರಿನಲ್ಲಿ ಫ್ಯೂಷನ್ ಬ್ಯಾಂಡ್ ಕಟ್ಟಿ ಹಲವು ದೇಶಿ–ವಿದೇಶಿ ಕಲಾವಿದರೊಂದಿಗೆ ಫ್ಯೂಷನ್ ಸಂಗೀತ ನಡೆಸಿಕೊಡುತ್ತಿದ್ದೇನೆ. ಇದರೊಂದಿಗೆ ಬಾಲಿವುಡ್ ಸಂಗೀತ ನಿರ್ದೇಶಕರೊಂದಿಗೆ ಸಹ ಕೆಲಸ ಮಾಡಿದ್ದೇನೆ. ಹಲವು ಸಿನಿಮಾಗಳಿಗೆ ಹಿನ್ನೆಲೆ ಸಂಗೀತವನ್ನೂ ನೀಡಿದ್ದೇನೆ. ನನ್ನ ಮಗ ರಿತಿಕ್ ಚೌರಾಸಿಯ ಕೂಡ ನನ್ನೊಂದಿಗೆ ಬಾನ್ಸುರಿ ನುಡಿಸುತ್ತಿದ್ದು, ಎಲ್ಲ ಪ್ರಕಾರಗಳತ್ತಲೂ ಆಸಕ್ತನಾಗಿದ್ದಾನೆ. ಮುಂಬೈಯಲ್ಲಿರುವ ‘ಬೃಂದಾವನ’ ಎಂಬ ಬಾಬೂಜಿ ಅವರ ಗುರುಕುಲದಲ್ಲೂ ಶಾಸ್ತ್ರೀಯ, ಫ್ಯೂಷನ್ ಸಂಗೀತ ಕಲಿಯುತ್ತಿದ್ದಾನೆ. ನಾನೂ ಹಲವು ಮಕ್ಕಳಿಗೆ ಅಲ್ಲಿ ಬಾನ್ಸುರಿ ಕಲಿಸುತ್ತಿದ್ದೇನೆ.

ಡಿ. 10ಕ್ಕೆ ಜುಗಲ್‌ಬಂದಿ

ಬೆಂಗಳೂರಿನ ವಿವಿಧ್ ಆರ್ಟ್ಸ್ ಸಾಂಸ್ಕೃತಿಕ ಸಂಘಟನೆ ಡಿ. 10ರಂದು ಚೌಡಯ್ಯ ಸ್ಮಾರಕ ಭವನದಲ್ಲಿ ‘ಉತ್ತರ–ದಕ್ಷಿಣ ಜುಗಲ್‌ಬಂದಿ’ ಕಛೇರಿ ಆಯೋಜಿಸಿದೆ. ಬಾನ್ಸುರಿ ವಾದಕರಾದ ಪಂ. ರಾಕೇಶ್ ಚೌರಾಸಿಯ ಹಾಗೂ ಕೊಳಲು ವಾದಕ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯ ಅವರಿಂದ ಹಿಂದೂಸ್ತಾನಿ–ಕರ್ನಾಟಕ ಶಾಸ್ತ್ರೀಯ ವೇಣುವಾದನ ಕೇಳುಗರನ್ನು ಸಮ್ಮೋಹನಗೊಳಿಸಲಿದೆ. ಸಂಜೆ 6,30ರಿಂದ ಕಛೇರಿ ಆರಂಭ. ಪ್ರವೇಶ ಶುಲ್ಕವಿದೆ. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ ಇವೆ.



ರಾಕೇಶ್ ಚೌರಾಸಿಯ

ನಾವೂ ಮನುಷ್ಯರು...

10ನೇ ಪುಟದಿಂದ...

ಇತರರಿಗಿಂತ ಅವರು ಹೆಚ್ಚು ಪ್ರಾಮಾಣಿಕರು. ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ನಿಸ್ಸೀಮರು’ ಎಂದು ಶೆಲ್ ಪೆಟ್ರೋಲ್ ಬಂಕ್ ವ್ಯವಸ್ಥಾಪಕ ಅಭಿಜಿತ್ ಅಷ್ಟಾಪುರೆ ಶ್ಲಾಘಿಸುತ್ತಾ ಭಾವುಕರಾದರು.

ಪೋಲಿಯೊದಿಂದಾಗಿ ಎರಡು ಕಾಲು ಕಳೆದುಕೊಂಡರೂ ಆತ್ಮವಿಶ್ವಾಸ ಕಳೆದುಕೊಳ್ಳದ ಬಾಗಲಕೋಟೆಯ ಶಾರದಾ ಬಾದಾಮಿ ಅವರಿಗೆ ಗಾಲಿಕುರ್ಚಿ ಆಸರೆಯಾಗಿದೆ. ಕಾಲ್ ಸೆಂಟರ್‌ನಲ್ಲಿ ಉದ್ಯೋಗಿ ಆಗಿರುವ ಅವರು ಮನೆ ನಿರ್ವಹಣೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದಾರೆ.

‘ದೈಹಿಕವಾಗಿ ಸರಿಯಾಗಿದ್ದ ಮಾತ್ರಕ್ಕೆ ಅವರು ಸಮರ್ಥರು, ಅಂಗವಿಕಲರು ಅಸಮರ್ಥರು ಎಂಬ ಭಾವನೆ ಹಲವರಲ್ಲಿದೆ. ಇದರಿಂದ ಪ್ರತಿಭಾವಂತ ಅಂಗವಿಕಲರಿಗೆ ಉದ್ಯೋಗ ಸಿಗುತ್ತಿಲ್ಲ. ಶಿಕ್ಷಣ ಮುಗಿಸಿ ಹಲವು ಸಂದರ್ಶನಗಳನ್ನು ನೀಡಿದರೂ ಅಂಗವಿಕಲೆ ಎಂಬ ಕಾರಣಕ್ಕೆ ನನಗೆ ಉದ್ಯೋಗ ಸಿಗಲಿಲ್ಲ. ಈ ಭಾವನೆಯಿಂದ ಹೊರಬೇಕಾದದ್ದು ಮುಖ್ಯ’ ಎಂದು ದಾವಣಗೆರೆಯ ಪುಷ್ಪಲತಾ ಎಸ್. ಗಂಟಲು ಉಬ್ಬಿಸಿಕೊಳ್ಳುತ್ತಾರೆ.

ಕಣ್ಣು ಕಾಣಿಸದಿದ್ದರೂ ಗಾರ್ಮೆಂಟ್ಸ್‌ನಲ್ಲಿ ಶರ್ಟ್‌ಗಳಿಗೆ ಬಟನ್ ಹಾಕುವ ಮಂಡ್ಯದ ಶಶಿಕಲಾ, ಮುಂಗೈ ಇರದಿದ್ದರೂ ಮಾಲ್‌ವೊಂದರ ಬಿಲ್ ಕೌಂಟರ್‌ನಲ್ಲಿ ಕೆಲಸ ಮಾಡುವ ಶಶಿ, ಅಂಗವೈಕಲ್ಯದ ಮಧ್ಯೆಯೂ ಕೆಲಸ ಮಾಡುವ ಮಲ್ಲಿಕಾರ್ಜುನ ಗೌಡರ್, ದೈಹಿಕ ಸಮಸ್ಯೆ ಇರುವ ನೂರಾರು ಮಂದಿಯ ಆತ್ಮವಿಶ್ವಾಸ ಹೆಚ್ಚಿಸುವ ಕೆಲಸದಲ್ಲಿ ನಿರತರಾದ ಸವದತ್ತಿಯ ವಿಠ್ಠಲ ಜಾಧವ, ಬೈಲಹೊಂಗಲದ ಶಿವಣ್ಣ...ಹೀಗೆ ಸಾಧಕರ ಪಟ್ಟಿ ಉದ್ದವಾಗುತ್ತದೆ. ಹಾಗೆಯೇ ಅವರ ಆಸಕ್ತಿದಾಯಕ ಕಥೆಗಳ ಗುಚ್ಛ ದೊಡ್ಡದಾಗುತ್ತಲೇ ಹೋಗುತ್ತದೆ.

ಅಂಗವಿಕಲರಿಗೆ ಆಧಾರ ‘ಸಮರ್ಥನಂ’

ದೃಷ್ಟಿದೋಷವುಳ್ಳ ಸ್ನೇಹಿತರಾದ ಧಾರವಾಡದ ಉದಯಕುಮಾರ್, ಬೆಳಗಾವಿಯ ಮಹಾಂತೇಶ ಜಿ.ಕೆ. ಮತ್ತು ಎಸ್.ಪಿ.ನಾಗೇಶ್ ಅವರು ಅಂಗವಿಕಲರಿಗೆ ನೆರವಾಗಲು 1997ರಲ್ಲಿ ಬೆಂಗಳೂರಿನಲ್ಲಿ ‘ಸಮರ್ಥನಂ ಅಂಗವಿಕಲರ ಸಂಸ್ಥೆ’ ಆರಂಭಿಸಿದರು. ಎಲ್‌ಕೆಜಿಯಿಂದ ಹಾಗೂ ಉಳಿದ ಶಾಖೆಗಳಲ್ಲಿ ಎಸ್ಸೆಸ್ಸೆಲ್ಸಿ ನಂತರ ಅವರು ಬಯಸುವ ಪದವಿವರೆಗೆ ಶಿಕ್ಷಣದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಮಾರ್ಗದರ್ಶನ ನೀಡುತ್ತಾರೆ. ಹತ್ತಕ್ಕೂ ಹೆಚ್ಚು ಅಂಗವಿಕಲರು ಸರ್ಕಾರಿ ಕಚೇರಿಗಳಲ್ಲಿ ಪ್ರಥಮ, ದ್ವಿತೀಯ ದರ್ಜೆಯ ಸಹಾಯಕರಾಗಿದ್ದಾರೆ. ಹಲವರು ಖಾಸಗಿ ಉದ್ಯೋಗಗಳನ್ನು ಪಡೆದಿದ್ದಾರೆ. ಬೆಂಗಳೂರು, ಬೆಳಗಾವಿ, ಧಾರವಾಡ, ಬಳ್ಳಾರಿ, ಹೈದರಾಬಾದ್, ಪುಣೆ, ಗುಂಟುರು, ಅನಂತಪುರಂ, ದೆಹಲಿ, ಮುಂಬೈ, ಚೆನ್ನೈ, ಕೊಚಿ ಹಾಗೂ ಯುಕೆಯಲ್ಲಿ ಸಮರ್ಥನಂ ಶಾಖೆಗಳಿವೆ. ಆಸಕ್ತ ಅಂಗವಿಕಲರು, ಬುದ್ಧಿಮಾಂದ್ಯ ಮಕ್ಕಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080-68333999/ 25729922/ 25721444.

ಬಸವರಾಜ ಐಹೊಳೆ ಕಲಾಪ್ರೀತಿ

ಹುಬ್ಬಳ್ಳಿಯ ನಿವಾಸಿ ಬಸವರಾಜ ಐಹೊಳೆ ಹುಟ್ಟುವಾಗಲೇ ಕಾಲನ್ನು ಕಳೆದುಕೊಂಡವರು. ಬಾಲ್ಯದಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ್ದ ಅವರು ಇಂದು ‘ಕಲಾವಿದ’. ಎಲ್ಲ ರೀತಿಯ ಚಿತ್ರಗಳನ್ನು ಸುಂದರವಾಗಿ, ಆಕರ್ಷಕವಾಗಿ ಬಿಡಿಸುವ ಅವರು ‘ಯುವರತ್ನ’ ಮತ್ತು ‘ವಿಜಯಾನಂದ’ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಐಟಿಐ ಮುಗಿಸಿರುವ ಅವರು ಸ್ವಂತ ಟೀ ಶಾಪ್ ಹೊಂದಿದ್ದು, ಅದರ ಮೂಲಕ ಸ್ವಾವಲಂಬಿ ಜೀವನ ನಡೆಸಿದ್ದಾರೆ. ಶಾಲೆ–ಕಾಲೇಜುಗಳಿಗೆ ಉಚಿತವಾಗಿ ಚಿತ್ರಗಳನ್ನು ಬಿಡಿಸಿಕೊಡುತ್ತಾರೆ. ಹುಬ್ಬಳ್ಳಿಯಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವ ‘ರೆವಲ್ಯೂಷನ್ ಮೈಂಡ್ಸ್’ ತಂಡದ ಜೊತೆಗೂಡಿ ರಸ್ತೆ ಬದಿ ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸುತ್ತಾರೆ.



ಹುಬ್ಬಳ್ಳಿಯ ರಸ್ತೆ ಬದಿಯ ಗೋಡೆ ಮೇಲೆ ಪರಿಸರ ಜಾಗೃತಿ ಚಿತ್ರ ಬಿಡಿಸುತ್ತಿರುವ ಅಂಗವಿಕಲ ಕಲಾವಿದ ಬಸವರಾಜ ಐಹೊಳೆ

ಮುನ್ನೋಟ 03-12-2023 ರಿಂದ -09-12-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಅತಿಯಾದ ಆತ್ಮಾಭಿಮಾನ ನಿಮ್ಮಲ್ಲಿ ಇರುತ್ತದೆ. ಹಣದ ಒಳಹರಿವು ತೃಪ್ತಿಕರವಾಗಿರುತ್ತದೆ. ಬಹಳ ಬುದ್ಧಿವಂತಿಕೆಯ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆಸ್ತಿ ಕೊಳ್ಳುವ ವಿಚಾರದಲ್ಲಿ ಮುಂದುವರಿಯಬಹುದು. ಪಶು ಸಂಗೋಪನಾ ಇಲಾಖೆಯಲ್ಲಿ ಕೆಲಸ ಮಾಡುವ ಕೆಲವರಿಗೆ ಅಭಿವೃದ್ಧಿ ಇರುತ್ತದೆ. ಆರೋಗ್ಯದಲ್ಲಿ ತಕ್ಷಣದ ಏರಿಳಿತಗಳು ಉಂಟಾಗಿ ಸ್ವಲ್ಪ ದಿನ ನರಳುವಂತಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನವೀನ ರೀತಿಯ ಕೃಷಿಗೆ ಹೆಚ್ಚು ಆಸಕ್ತಿಯನ್ನು ತೋರುವಿರಿ. ವಾಹನ ದುರಸ್ತಿ ಮಾಡುವವರಿಗೆ ಹೆಚ್ಚಿನ ಕೆಲಸ ದೊರೆತು ಹೆಚ್ಚು ಸಂಪಾದನೆಯಾಗುತ್ತದೆ. ಹಿರಿಯರ ಆರೋಗ್ಯಕ್ಕಾಗಿ ಹೆಚ್ಚಿನ ಹಣ ಖರ್ಚಾಗುತ್ತದೆ. ಲೇವಾದೇವಿ ವ್ಯವಹಾರಗಳು ನಷ್ಟ ಉಂಟು ಮಾಡಬಹುದು. ಸಂಗಾತಿಯಿಂದ ಹೆಚ್ಚಿನ ಹಣಕ್ಕೆ ಬೇಡಿಕೆ ಬರಬಹುದು. ರಕ್ಷಣಾ ಪಡೆಯಲ್ಲಿರುವವರಿಗೆ ಉನ್ನತ ಸ್ಥಾನ ಸಿಗುವ ಸಾಧ್ಯತೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಗಣಿತ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಕಾರ ಮತ್ತು ಯಶಸ್ಸು ಸಿಗುತ್ತದೆ. ಧನ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ಆಸ್ತಿ ಕೊಳ್ಳುವ ವಿಚಾರದಲ್ಲಿ ಪ್ರಗತಿ ಇರುವುದಿಲ್ಲ. ಫ್ಯಾಶನ್ ಡಿಸೈನನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಸರ್ಕಾರಿ ಕೆಲಸಕಾರ್ಯಗಳಲ್ಲಿ ಸ್ವಲ್ಪ ನಿಧಾನಗತಿಯನ್ನು ಕಾಣಬಹುದು. ಬಹಳ ಜಾಣತನ ನಿಮ್ಮಲ್ಲಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭವು ಉತ್ಸಾಹದಾಯಕವಾಗಿರುತ್ತದೆ. ಹೈನುಗಾರಿಕೆ ಮಾಡುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ನಿಮ್ಮ ಚಟುವಟಿಕೆಗಳಲ್ಲಿ ಆಲಸೀತನವನ್ನು ಕಾಣಬಹುದು. ವ್ಯಾಪಾರಿಗಳಿಗೆ ಸ್ವಲ್ಪಮಟ್ಟಿನ ವ್ಯಾಪಾರ ವೃದ್ಧಿ ಇರುತ್ತದೆ. ತಂದೆ ಮಕ್ಕಳ ಸಂಬಂಧ ಬಹಳ ಅನ್ಯೋನ್ಯವಾಗಿರುತ್ತದೆ. ಕ್ರೀಡಾಪಟುಗಳಿಗೆ ಸರ್ಕಾರದಿಂದ ಸಾಕಷ್ಟು ಉತ್ತೇಜನ ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕುಟುಂಬದಲ್ಲಿ ಸಂತೋಷವನ್ನು ಕಾಣುವಿರಿ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ಸಹೋದರಿಯರಿಂದ ನಿಮ್ಮ ಕೆಲಸಗಳಿಗೆ ಅಡ್ಡಿ ಎದುರಾದರೂ, ನಂತರ ಸರಿಯಾಗುತ್ತದೆ. ಆಸ್ತಿಯನ್ನು ಕೊಳ್ಳುವ ವಿಚಾರದಲ್ಲಿ ಸರ್ಕಾರದಿಂದ ಧನಸಹಾಯಗಳು ದೊರೆಯಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಸಾಫ್ಟ್‌ವೇರ್ ತಂತ್ರಜ್ಞರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಸ್ವಲ್ಪ ಆಲಸೀತನ ಮೈಗೂಡಿದ್ದು ಕೆಲಸ ಕಾರ್ಯಗಳಲ್ಲಿ ಆಸಕ್ತಿ ಕಮ್ಮಿಯಾಗುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಕ್ರೀಡಾಪಟುಗಳಿಗೆ ಸರ್ಕಾರಿ ಸಂಸ್ಥೆಗಳಲ್ಲಿ ಕ್ರೀಡಾ ಕಲಿಕೆಯ ಅವಕಾಶ ದೊರೆಯುತ್ತದೆ. ಹಿರಿಯರಿಂದ ನಿಮಗೆ ಸಮಯಕ್ಕೆ ತಕ್ಕ ಸೂಕ್ತ ಮಾರ್ಗದರ್ಶನ ದೊರೆಯುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಲಾಭ ಕಡಿಮೆ ಇದ್ದರೂ ನಷ್ಟ ಇರುವುದಿಲ್ಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವೈಯಕ್ತಿಕ ಅಲಂಕಾರಕ್ಕೆ ಹೆಚ್ಚಿನ ಪ್ರಾಮುಖ್ಯ ಕೊಡುವಿರಿ. ಧನ ಆದಾಯವು ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ನಿಮ್ಮ ನಡವಳಿಕೆಯಲ್ಲಿ ಅತ್ಯಂತ ವ್ಯಾವಹಾರಿಕವಾಗಿ ಇರುತ್ತದೆ. ಕೃಷಿಯಿಂದ ಹೆಚ್ಚಿನ ಲಾಭವಿರುತ್ತದೆ. ಕೃಷಿಕರಿಗೆ ಸಿಗಬೇಕಾದ ಸಹಾಯಧನಗಳು ಹರಿದುಬರುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅಂತಹ ಯಶಸ್ಸು ಇರುವುದಿಲ್ಲ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕ್ರೀಡಾಪಟುಗಳಿಗೆ ಸರ್ಕಾರದಿಂದ ಉತ್ತಮ ಸಹಕಾರ ಸೌಲಭ್ಯಗಳು ದೊರೆಯುತ್ತವೆ. ಬಹಳ ಬುದ್ಧಿವಂತಿಕೆಯಿಂದ ಹಣ ಸಂಪಾದನೆ ಮಾಡುವಿರಿ. ಶತ್ರುಗಳಿಗೆ ಗೊತ್ತಾಗದಂತೆ ಅವರ ಶಕ್ತಿ ಕುಂದಿಸುವಿರಿ. ಕೃಷಿಕರಿಗೆ ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ಕಬ್ಬಿಣ ಮತ್ತು ಉಕ್ಕನ್ನು ತಯಾರಿಸುವವರಿಗೆ ಹೆಚ್ಚಿನ ವ್ಯಾಪಾರ ವ್ಯವಹಾರಗಳು ಸರಾಗವಾಗಿ ಆಗುತ್ತವೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬುದ್ಧಿವಂತಿಕೆ ಈ ವಾರ ನಿಮಗೆ ಮೈಗೂಡುತ್ತದೆ. ಆದಾಯ ಕಡಿಮೆ ಇದ್ದರೂ ಹಣ ನಿರ್ವಹಣೆಯನ್ನು ಸರಿಯಾಗಿ ಮಾಡುವಿರಿ. ರಾಜಕೀಯ ನಾಯಕರು ಅವರ ಶತ್ರುಗಳನ್ನು ಸದ್ದಿಲ್ಲದೆ ತಣ್ಣಗಾಗಿಸುವರು. ಆಸ್ತಿ ವಿಚಾರಗಳಲ್ಲಿ ಹೊಸ ಸಮಸ್ಯೆಗಳು ಬರಬಹುದು. ವಿದೇಶಗಳಿಂದ ವಸ್ತುಗಳನ್ನು ತರಿಸಿ ಮಾರಾಟಮಾಡುವವರಿಗೆ ವ್ಯಾಪಾರ ವೃದ್ಧಿಸುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇದ್ದೇ ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಸ್ಥಿರ ಮನಸ್ಸಿನಿಂದ ಕೆಲಸಗಳನ್ನು ಮಾಡುವಿರಿ. ಆದಾಯ ಕಡಿಮೆ ಇದ್ದರೂ ಹಣ ನಿರ್ವಹಣೆಯಲ್ಲಿ ಜಾಣ್ಮೆಯನ್ನು ತೋರುವಿರಿ. ವಿದೇಶದಲ್ಲಿರುವವರಿಗೆ ತಮ್ಮ ವ್ಯಕ್ತಿತ್ವದಿಂದ ನೆರೆಹೊರೆಯವರನ್ನು ಆಕರ್ಷಿಸುವ ಯೋಗವಿದೆ. ಆಸ್ತಿ ವಿಚಾರದಲ್ಲಿದ್ದ ಸಮಸ್ಯೆಗಳು ಸಂಧಾನದ ಮೂಲಕ ಪರಿಹಾರವಾಗುತ್ತದೆ. ವೃತ್ತಿಯಲ್ಲಿ ಆದಾಯ ಹೆಚ್ಚುವ ಸಂದರ್ಭವಿದೆ. ತಾಯಿಯ ಸಹಕಾರ ಹೆಚ್ಚಾಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸಾಂಪ್ರದಾಯಿಕ ಕೃಷಿಕರಿಗೆ ಲಾಭವಿದೆ. ವಿದೇಶಿ ಹಣ ವಿನಿಮಯ ಮಾಡುವವರಿಗೆ ಹೆಚ್ಚಿನ ಆದಾಯವಿದೆ. ವಾಹನ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರ ನಡೆಯುತ್ತದೆ. ಹಿರಿಯರು ತಮ್ಮ ನಡವಳಿಕೆಗಳಿಂದ ಸಮಾಜವನ್ನು ತಿದ್ದುವರು. ಸಿದ್ಧ ಉಡುಪು ತಯಾರಕರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಲೆಕ್ಕ ಪರಿಶೋಧಕರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ ಮತ್ತು ಆದಾಯವು ವೃದ್ಧಿಸುತ್ತದೆ. ಶ್ವಾಸಕೋಶ ಹಾಗೂ ಉಸಿರಾಟ ಸಂಬಂಧಿ ಕಾಯಿಲೆ ಇರುವವರು ಸಾಕಷ್ಟು ಎಚ್ಚರ ವಹಿಸುವುದು ಉತ್ತಮ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ವರ್ತನೆಯಲ್ಲಿ ಅತಿ ಅಹಂಕಾರವಿರುತ್ತದೆ. ಧನ ಆದಾಯವು ನಿರೀಕ್ಷೆಯಷ್ಟಿರುತ್ತದೆ. ನಿಮ್ಮ ಹಿರಿಯರಿಂದ ಬರಬೇಕಾಗಿದ್ದ ಹಣ ಈಗ ಬರುತ್ತದೆ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚಿನ ಯಶಸ್ಸಿರುತ್ತದೆ. ವೃತ್ತಿಯಲ್ಲಿ ದ್ವಂದ್ವವಿದ್ದು ಹಿರಿಯ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅತಿ ಶ್ರದ್ಧೆ ಮೂಡುತ್ತದೆ. ಹಿರಿಯರ ಆಸ್ತಿ ವಿಚಾರದಲ್ಲಿ ಗಲಾಟೆಗಳು ಹೆಚ್ಚಾಗಿ ಆಸ್ತಿ ಬರುವುದು ನಿಲ್ಲಬಹುದು.

ಪದಬಂಧ 2818



ಮೇಲಿನಿಂದ ಕೆಳಕ್ಕೆ
1. ನಮ್ಮ ದೇಶದ ವಾಗ್ಧ್ವನಿ 5
2. ಹೋದದ್ದು ಬಂದದ್ದು ಜನನ ಮರಣಗಳಷ್ಟೇ ಸತ್ಯ 4
3. ‘ಬ್ಯಾ ಬ್ಯಾ’ ಎನ್ನುವ ಬಕರಾ ಕೂಸು 4
4. ಹೊಲಕ್ಕೆ ಹಾಕಿದ ಸುತ್ತಲಿನ ತಡೆಯನ್ನು ಎಗರಿ ದಾಟು 4
8. ಎಲ್ಲದಕ್ಕೂ ಇರುವ ಕಾಣದ ನೆಪ 3
9. ಹೆದರಿಸಿ ಧಮ್ಕಿ ಹಾಕು 4
11. ನರಿಯ ಬಾಯಿಗೆ ಸಿಗದ ಈ ಹಣ್ಣು ಹುಳಿ 4
12. ಅಂಕುರಿಸಿದ ರಾಜ ಮನೆತನ 3
13. ಕನ್ನಡದ ಕಡುಗಲಿ ಎಂದು ಹೆಸರು ಪಡೆದ ಮಗ ಐತಿಹಾಸಿಕ ಪುರುಷ 5
14. ಕರ್ನಾಟಕದ ಸೌಂದರ್ಯದ ಖನಿ ಬೆಟ್ಟಗಳ ಬೀಡು 4
16. ಪ್ರಾಣಹರಿದು ಮಿಡಿಯುವ ತಂತು 4
17. ಈಶ್ವರನ ಹೆಸರನ್ನು ಎರಡು ಸಲ ಜಪಿಸಿ 4

ಎಡದಿಂದ ಬಲಕ್ಕೆ
1. ಮನಸ್ಸಿನೊಳಗಿನ ಅನಿಸಿಕೆ ಅಳಲು ರಭಸವಾಗಿ ಉಕ್ಕಿದೆ 4
3. ಕಬ್ಬಿಣವನ್ನು ಕಾಯಿಸುವ ಕಮ್ಮಾರನ ಸಾಧನ 3
4. ಸೋತು ಸೊರಗಿದರೆ ಆಗುವ ಅಸಮಾಧಾನ 3
5. ಕಾಗದಕ್ಕೆ ಮೊದಲು ಕಾವ್ಯ ಶಾಸ್ತ್ರಗಳನ್ನು ದಾಖಲು ಮಾಡುತ್ತಿದ್ದ ಎಲೆ 4
6. ಮಸ್ತಿಷ್ಕದಿಂದ ಹಾಕಿದ ಪಲ್ಟಿ 4
7. ಆಗಾಗ್ಗೆ ಏರುವ ಕಾಯಿಪಲ್ಲೆಗಳ ರೇಟು 6
12. ಒಂದು ರೀತಿ ಒಪ್ಪಿ ಹಿಡಿಯುವುದು 5
13. ಹೂವಿನಂತಹ ನವಿರಾದ ಬಾಲೆ 3
15. ನೀರಿನಲ್ಲಿ ವಾಸಿಸುವ ಪ್ರಾಣಿಗಳ ಸಂಗ್ರಹ ಒಟ್ಟಾಗಿದೆ 6
18. ವಡೆಯಾಕಾರದ ಬರೋಡ 4
19. ಹೆಸರಿನ ಮೇಲೆ ಜಾತಕನ ಕುಂಡಲಿಯ ಗುಂಪು 4
20. ಆಂಧ್ರ ತೆಲಂಗಾಣಗಳ ರಾಯ ವಂಶದ ಒಡೆಯ 3
21. ಪುಸ್ತಕದ ಮೊದಲ ಮಾತು 3
22. ಕಾಡಿನಲ್ಲಿ ವಿಹಾರದ ಮನೆ 4

ಪದಬಂಧ ಉತ್ತರ -2817

ಮೇಲಿಂದ ಕೆಳಕ್ಕೆ
1.ಗೋಕುಲ 2.ನವೀನ 3.ಹಾರಿಕೆ 4.ದರ್ಬಾರು 6.ಕೇಳುಗ 9.ಜನ 10.ಲಿಪಿ 11.ಸಮೀಪ 12.ಧಾವಿಸು 14.ಸುಖಿಸು 15.ವರಾಳಿ 17.ಖರ 18.ಹಾನಿ 20.ಜಳಕ 21.ಸರದಿ 22.ಸುಕೃತ 23.ಅಕ್ಷರ 24.ತಿವಿತ


ಎಡದಿಂದ ಬಲಕ್ಕೆ
1. ಗೋವರ್ಧನ 3.ಹಾಸ್ಯಾಸ್ಪದ 5.ವೀರಕೇಸರಿ 7.ಲಜ್ಜಾಹೀನ 8.ಕೆರೆನೀರು 9.ಜಗಲಿ 11.ಸತ್ಯಸಂಧಾನ 13.ಪಿಸುಣದೇವ 16.ಪರಮಸುಖ 18.ಹಾಸುಗಂಬಳಿ 19.ರಜನಿ 21.ಸತ್ಕರಿಸು 23.ಅಧೋಗತಿ 25.ಕೃಪಾಕಟಾಕ್ಷ 26.ದಿವಂಗತ 27.ರಜಪೂತ



ಮಲ್ಲೇಪುರಂ ಜಿ. ವೆಂಕಟೇಶ್

ಅಮ್ಮನ ಸಾವು

ಮಲ್ಲೇಪುರಂ ವೆಂಕಟೇಶ್ ಅವರ ಆತ್ಮಕಥನ 'ದಿಟದ ದೀವಿಗೆ' ಬೆಂಗಳೂರಿನ ಗಾಂಧಿಭವನದಲ್ಲಿ ಡಿಸೆಂಬರ್ 3ರ ಬೆಳಿಗ್ಗೆ 10.30ಕ್ಕೆ ಬಿಡುಗಡೆಯಾಗಲಿದೆ. 'ಅಂಕಿತ ಪುಸ್ತಕ'ವು ಈ ಕೃತಿಯನ್ನು ಪ್ರಕಟಿಸಿದೆ. ಕೃತಿಯ ಆಯ್ದ ಭಾಗದ ಓದು...



ಆತ್ಮಕಥೆ

ಧಾರವಾಡದಿಂದ ಬಂದ ಮೇಲೆ ತೀವ್ರವಾಗಿ ಅಮ್ಮನ ನೆನಪಾಯಿತು. ಒಂದು ದಿನ ಬೆಳಿಗ್ಗೆ ಊರಿಗೆ ಹೋದೆ. ಯಥಾಪ್ರಕಾರ ಮನೆಯ ಸಮೀಪದಲ್ಲಿದ್ದ ಕಾಂಗ್ರೆಸ್ ಮುಖಂಡರೂ ನಮ್ಮ ಕುಟುಂಬದ ಹಿತೈಷಿಗಳೂ ಆದ ಅಂಜನಮೂರ್ತಿ ಅವರ ಮನೆಗೆ ಹೋದೆ. ಅಲ್ಲಿಗೆ ನನ್ನ ತಂಗಿ ಬಂದಳು. ಅಮ್ಮನನ್ನು ನೋಡುವ ಸೆಳೆತಕ್ಕೆ ಒಳಗಾಗಿ ಮನೆಗೆ ಹೋದೆ. ಅಮ್ಮ ನಡುಮನೆಯ ಮೂಲೆಯಲ್ಲಿ ಮಲಗಿದ್ದಳು. ನಾನು ತಲೆಯ ಬದಿ ಕುಳಿತು ತಲೆ ಸವರಿದೆ. ಅವಳು ಕಣ್ಣುಬಿಟ್ಟಳು. ಅವಳಿಗೆ ದುಃಖ ಇಮ್ಮಡಿಸಿತು. ಕಣ್ಣಲ್ಲಿ ನೀರು ತಂದಳು. ಅಮ್ಮನ ಮುಖ ಸೊರಗಿಹೋಗಿತ್ತು. ಕಣ್ಣುಗಳು ನಿಸ್ತೇಜಗೊಂಡಿದ್ದವು. ಜಯಕ್ಕ ಬಂದು ತೋಳು ಹಿಡಿದು ಕಣ್ಣಲ್ಲಿ ನೀರು ತಂದಳು. ಅಕ್ಕ-ತಂಗಿಯರ ಬಲವಂತಕ್ಕೆ ಒಂದಿಷ್ಟು ತಿಂದು ಬೆಂಗಳೂರಿನ ಕಡೆ ಹೊರಟೆ. ಅಮ್ಮ ಮನಸ್ಸಿನ ತುಂಬಾ ತುಂಬಿಕೊಂಡಿದ್ದಳು.

ಅದಾದ ಒಂದು ವಾರಕ್ಕೆ ಅಮ್ಮನನ್ನು 'ಸರ್ಕಾರಿ ಆಯುರ್ವೇದ ಆಸ್ಪತ್ರೆ'ಗೆ ಸೇರಿಸಿರುವ ವಿಷಯ ತಿಳಿಯಿತು. ನಾನು ಆಸ್ಪತ್ರೆ ಬಳಿ ಬಂದೆ. ಜಯಕ್ಕ ವಾರ್ಡಿನ ಹೊರಗಡೆ ನಿಂತಿದ್ದಳು. ಅಪ್ಪ ಮರದ ಬಳಿ ಇದ್ದ ಬೆಂಚಿನ ಮೇಲೆ ಕುಳಿತಿದ್ದರು. ಅಪ್ಪನ ಮುಖ ಬಾಡಿಹೋಗಿತ್ತು. ನನಗೂ ಅಯ್ಯೋ ಎನಿಸಿತು. ಹುಲಿಯಂತಿದ್ದ ಮನುಷ್ಯ ಎಷ್ಟು ಸರಳನಾಗಿ ಬಿಟ್ಟನಲ್ಲ-ಎಂದೆನಿಸಿತು. ನಾನು ಕೊಠಡಿಗೆ ಹೋದೆ. ನಾನು ಪಕ್ಕ ಹೋಗಿ ಅಮ್ಮನ ತಲೆ ಸವರಿದೆ. ನನ್ನತ್ತ ನೋಡಿದವಳೇ ಸಣ್ಣ ನಗು ಬೀರಿದಳು. ಕಣ್ಣಲ್ಲಿ ಹನಿದುಂಬಿದುವು. ಪಕ್ಕದಲ್ಲಿ ದಂಡಿಯಾಗಿ ಲೇಹ್ಯ, ಟಾನಿಕ್‌ಗಳು ಇದ್ದುವು. ಇದು ಕರುಳಿನ ವ್ಯಾಧಿ ಎಂದು ಹೇಳಿದ್ದಾರೆಂದು ಜಯಕ್ಕ ಹೇಳಿದಳು.

ನಾನು ಆಸ್ಪತ್ರೆಯಲ್ಲೇ ನಾಲ್ಕೈದು ದಿನವಿದ್ದೆ. ನನ್ನೊಡನೆ ಜಯಕ್ಕಳೂ ಇರುತ್ತಿದ್ದಳು. ನಾನು ರಾತ್ರಿ ಅಣ್ಣನ ಮನೆಯಿಂದ ಊಟಕೊಟ್ಟು ಅಮ್ಮನಿಗೆ ಹಣ್ಣಿನ ರಸ ಕುಡಿಸಿ ಹೊರಡುತ್ತಿದ್ದೆ. ಅಮ್ಮನಿಗೆ ಮಾತನಾಡಬೇಕೆಂದಿದ್ದರೂ ಮಾತನಾಡಲು ಆಗುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಒಂದೆರಡು ಪದಗಳನ್ನು ಆಡುತ್ತಿದ್ದಳು. ಅಮ್ಮನನ್ನು ನೋಡಿಕೊಳ್ಳುತ್ತಿದ್ದ ಆಯುರ್ವೇದ ವೈದ್ಯರು 'ನಾಳೆ ಊರಿಗೆ ಕರೆದುಕೊಂಡು ಹೋಗಿ' ಎಂದರು. ಆ ದಿನ ಅಪ್ಪ ಬಂದರು. ನಾನು ಅಮ್ಮನನ್ನು ಎರಡೂ ಕೈಗಳಲ್ಲೂ ಅನಾಮತ್ತಾಗಿ ಎತ್ತಿಕೊಂಡು ಬಸ್‌ನಿಲ್ದಾಣಕ್ಕೆ ಬಂದೆ. ನೆಲಮಂಗಲದ ಕಡೆ ಹೋಗುವ ಬಸ್ಸಿನಲ್ಲಿ ಕುಳಿತು ಮನೆಗೆ ಅಮ್ಮನನ್ನು ಕರೆತಂದೆವು. ನಾನು ಅಲ್ಲಿ ಒಂದೆರಡು ದಿನವಿದ್ದು ಬೆಂಗಳೂರಿಗೆ ಬಂದೆ.

ನನ್ನ ಅಮ್ಮ ತೀರಿಕೊಳ್ಳುವ ಹಿಂದಿನ ದಿನ ನನ್ನ ಮನಸ್ಸು ಅಸ್ತವ್ಯಸ್ತವಾಯಿತು. ಆ ದಿನ ಸಂಜೆ ಗ್ರಂಥಾಲಯದಲ್ಲಿ ಕುಳಿತಿದ್ದೆ. ಯಾಕೋ ತಳಮಳ ಉಂಟಾಗುತ್ತಿತ್ತು. ಏನೇನೋ ಅಪಶಕುನಗಳು. ಒಂದು ಕಡೆ ಕುಳಿತುಕೊಳ್ಳಲಾಗದ ನೋವು. ಹಾಸ್ಟೆಲ್ಲಿಗೆ ಬಂದೆ. ನನ್ನ ಮಾನಸಿಕ ತಳಮಳವನ್ನು ಗೆಳೆಯ ಎನ್.ಡಿ.ರಾಮಚಂದ್ರನಲ್ಲಿ ಹೇಳಿಕೊಂಡೆ. ಅವನು ಸಮಾಧಾನಿಸಿ-ತನ್ನೊಡನೆ ಊಟಕ್ಕೆ ಕರೆದುಕೊಂಡು ಹೋದ. ನನಗೆ ಎರಡು ತುತ್ತು ಅನ್ನ ತಿನ್ನಲು ಆಗಲಿಲ್ಲ. ಎದೆಯಲ್ಲಿ ಉಸಿರುಗಟ್ಟಿದಂತಾಯಿತು. ನನ್ನ ಅವಸ್ಥೆಯನ್ನು ರಾಮಚಂದ್ರನಿಗೆ ನೋಡಲಾಗಲಿಲ್ಲ. ಹಾಗೂ ಹೀಗೂ ರಾತ್ರಿ ಒಂಬತ್ತು ಗಂಟೆಯವರೆಗೂ ತಳ್ಳಿದೆ. ಅಮ್ಮನ ನೆನಪು ತೀವ್ರವಾಯಿತು. ಎದೆ ಬಡಿದುಕೊಳ್ಳಲಾರಂಭಿಸಿತು. ನನ್ನ ಕಣ್ಣು ಮಂಜಾಗುತ್ತಿತ್ತು. ನನ್ನ ಅವಸ್ಥೆ ಕಂಡ ರಾಮಚಂದ್ರ ಕೈಗೆ ಸ್ವಲ್ಪ ಹಣಕೊಟ್ಟು ಊರಿಗೆ ಹೋಗು ಎಂದ. ನಾನು ಆ ಕೂಡಲೇ ಸಿಟಿಬಸ್ ಹಿಡಿದು ಯಶವಂತಪುರಕ್ಕೆ ಬಂದೆ. ಅಲ್ಲಿಂದ ಲಾರಿಗಾಗಿ ಕಾದೆ. ಕೊನೆಗೆ ನೆಲಮಂಗಲಕ್ಕೆ ಹೋಗುವ ಲಾರಿಯನ್ನು ಹತ್ತಿದೆ. ಅದು ನೆಲಮಂಗಲ ಸ್ವಲ್ಪ ದೂರದಲ್ಲಿ ಇರುವಾಗಲೇ ಇಂಜಿನ್ ಸಮಸ್ಯೆಯಿಂದ ನಿಂತುಹೋಯಿತು. ನಾನು ಅಲ್ಲಿಂದ ನಡೆದುಕೊಂಡು ಮನೆ ತಲುಪಿದಾಗ ಬೆಳಗಿನ ಜಾವ ನಾಲ್ಕು ಗಂಟೆ ಆಗಿತ್ತು. ನಾನು ನೆಲಮಂಗಲಕ್ಕೆ ಸಮೀಪ ಬಂದಂತೆಲ್ಲಾ ಹೃದಯದ ಬಡಿತ, ಮನಸ್ಸಿನ ತಳಮಳ ಕಡಿಮೆ ಆಯಿತು. ಇನ್ನು ಮನೆ ಸಮೀಪ ಬಂದಾಗ ಮನಸ್ಸು ಶಾಂತಗೊಂಡಿತು.

ಮನೆಯ ಮುಂದೆ ದೀಪ ಉರಿಯುತ್ತಿತ್ತು. ಅಪ್ಪ ಹೊರಗೆ ಕುರ್ಚಿಯ ಮೇಲೆ ಕುಳಿತಿದ್ದರು. ನಾನು ಗೇಟ್ ಸರಿಸಿ ಮನೆಯೊಳಕ್ಕೆ ಹೋದೆ. ಹಾಲಿನಲ್ಲಿ ದೀಪ ಉರಿಯುತ್ತಿತ್ತು. ಅಮ್ಮ ಮಲಗಿದ್ದ ಜಾಗಕ್ಕೆ ಬಂದೆ. ಜಯಕ್ಕ-ತಂಗಿ ರತ್ನ-ಇಬ್ಬರು ತಮ್ಮಂದಿರು ಅಮ್ಮನ ಸುತ್ತ ಕುಳಿತಿದ್ದರು. ನಾನು ಹೋದವನೇ ಅಮ್ಮನ ಕೈಹಿಡಿದು ಕುಳಿತುಕೊಂಡೆ. 'ಅಮ್ಮ ನಾನು ವೆಂಕಟೇಶ ಬಂದಿದ್ದೇನೆ' ಎಂದು ಹೇಳಿದೆ. ಅವಳು ಕಣ್ಣನ್ನು ತೆರೆದು ನೋಡಿದಳು. ನನ್ನ ಕಡೆ ಕಣ್ಣು ತಿರುಗಿಸಿದಳು. ಉಸಿರು ಮೇಲಕ್ಕೂ ಕೆಳಕ್ಕೂ ತುಯ್ದಾಡುತ್ತಿತ್ತು! ನಾನು ಅಮ್ಮನ ತಲೆಯನ್ನು ಸವರಿದೆ. ಅವಳ ಕಣ್ಣಿನಲ್ಲಿ ನೀರು ಜಿನುಗಿತು! ಅಪ್ಪ ಬಂದರು. ತುಳಸಿ ಹಾಕಿಟ್ಟಿದ್ದ ನೀರನ್ನು ಅಮ್ಮನ ಬಾಯಿಗೆ ಬಿಟ್ಟೆ, ತುಸು ಗುಟುಕರಿಸಿದಳು. ಸ್ವಲ್ಪ ಹೊತ್ತಿಗೆ ಉಸಿರು ಇಲ್ಲವಾಯಿತು. ಜಯಕ್ಕ, ತಂಗಿ ರತ್ನ, ಮೀನಾ, ಪದ್ಮಾವತಿ, ತಮ್ಮಂದಿರಾದ ರವಿಶಂಕರ, ಪ್ರಭುದೇವ, ಕೃಷ್ಣಮೂರ್ತಿ ಜೋರಾಗಿ ಅಳಲಾರಂಭಿಸಿದರು. ತಂಗಿ ರತ್ನಮ್ಮ ನನ್ನ ಕೈಹಿಡಿದು 'ನಮಗಿನ್ನಾರು ಗತಿ' ಎಂದು ಅಳತೊಡಗಿದಳು. ನನ್ನ ಮನಸ್ಸು ಅಮ್ಮನ ಸುತ್ತ ತಿರುಗುತ್ತಿತ್ತು! ಅಂದು ಮಹಾಶಿವರಾತ್ರಿ ದಿನ. ನನ್ನಮ್ಮ ನಮ್ಮನ್ನೆಲ್ಲಾ ಬಿಟ್ಟು 28.02.1976ರಂದು ಅಗಲಿದಳು.

ಅಪ್ಪ ಕುರುಬರ ಹಟ್ಟಿಯ ಬೀರಮ್ಮಜ್ಜಿಗೆ ಹೇಳಿಕಳಿಸಿದ. ಆಕೆ ಬಂದಳು. ಆಕೆಯ ಜತೆ ಇನ್ನೊಂದಿಷ್ಟು ಜನ ಹೆಂಗಸರು ಬಂದರು. ಅವರೆಲ್ಲಾ ಅಮ್ಮನ ಗುಣಗಾನವನ್ನು ಮಾಡಿದರು. ಮಗ್ಗುಲಲ್ಲಿದ್ದ ಮಾದಿಗರಹಟ್ಟಿ-ಇನ್ನೊಂದು ಬದಿಯಿದ್ದ ಹೊಲೆಯರ ಹಟ್ಟಿಯ ಜನಕ್ಕೆ ಸುದ್ದಿ ಹಬ್ಬಿ ಜನ ಸಮೂಹವೇ ಬರತೊಡಗಿತು. ಹಂಚೀಪುರದ ಅತ್ತೆ ಬಂದವಳೇ ನಮಗೆಲ್ಲಾ ಧೈರ್ಯ ಹೇಳಿದಳು. ಬೆಂಗಳೂರಿನಲ್ಲಿದ್ದ ನಮ್ಮ ದೊಡ್ಡಕ್ಕ, ದೊಡ್ಡಣ್ಣ, ಇತರೆ ಸಂಬಂಧಿಗಳಿಗೆ ಸುದ್ದಿ ಹೋಯಿತು. ಅವರೆಲ್ಲಾ ಮಧ್ಯಾಹ್ನದ ಹೊತ್ತಿಗೆ ಬಂದರು! ಜನರೆಲ್ಲಾ ಅಮ್ಮನ ಗುಣಗಾನ ಮಾಡುತ್ತಲೇ ಇದ್ದರು. ಆಕೆಯ ಕ್ಷಮಾಗುಣ, ಸಹಾಯಹಸ್ತ, ಕೊಡುಗೈ ಸ್ವಭಾವಗಳನ್ನು ನೆನೆದು ಕಣ್ಣೀರಿಟ್ಟರು. ನಮ್ಮ ಅಮ್ಮ ಸಂಪಾದಿಸಿದ್ದು ಜನರ ಪ್ರೀತಿ ವಿಶ್ವಾಸವನ್ನು ಮಾತ್ರ. ಸಂಜೆಯ ಹೊತ್ತಿಗೆ ದೊಡ್ಡ ಬಾವಿಯ ಸಮೀಪ ಸಮಾಧಿಯನ್ನು ಮಾಡಲಾಯಿತು! ನಡುಮನೆಯಲ್ಲಿ ದೀಪವನ್ನು ಹಚ್ಚಿಡಲಾಯಿತು. ಬಂದ ಜನ ಸ್ವಲ್ಪಸ್ವಲ್ಪವೇ ಕರಗಿದರು. ಬೆಂಗಳೂರಿನಿಂದ ಬಂದ ನಮ್ಮ ದೊಡ್ಡಕ್ಕ ಪಾರ್ವತಮ್ಮ-ನಮ್ಮಪ್ಪನ ಜೊತೆ ಕುಳಿತು ಕಳೆದ ನಲ್ವತ್ತು ವರ್ಷಗಳ ಅಮ್ಮನ ಬದುಕನ್ನು ಸ್ಮರಣೆ ಮಾಡಿಕೊಂಡರು! ನಾನು ಅವರಿಬ್ಬರ ಮಾತುಗಳನ್ನು ಗೋಡೆಗೊರಗಿಕೊಂಡು ಕೇಳುತ್ತಲಿದ್ದೆ. ನಾನು ರಾತ್ರಿ ಎಷ್ಟು ಹೊತ್ತಿಗೆ ಮಲಗಿದೆನೋ ಗೊತ್ತಿಲ್ಲ. ಬೆಳಿಗ್ಗೆ ಎದ್ದಾಗ ಅಮ್ಮ ಇಲ್ಲವೆಂಬ ಭಾವ ಬಂದಾಗ ಕಣ್ಣೀರು ಕಟ್ಟೆಯೊಡೆದು ಜೋರಾಗಿ ಅಳಲಾರಂಭಿಸಿದೆ. ನನ್ನ ಅಳುವನ್ನು ಕೇಳಿ ಜಯಕ್ಕ-ಪಾರ್ವತಕ್ಕ ತಂಗಿರತ್ನ ಬಂದು ನನ್ನ ಕೈಹಿಡಿದುಕೊಂಡರು. ನನ್ನ ದೊಡ್ಡಕ್ಕ ನನ್ನನ್ನು ಒರಗಿಸಿಕೊಂಡು ಕುಳಿತಳು.

ಪ್ರತಿನಿತ್ಯ ಅಮ್ಮನನ್ನು ನೆನೆಯುತ್ತಿದ್ದೆ. ಜಯಕ್ಕನಿಗೆ ಶಿಕ್ಷಕಿ ಕೆಲಸ ಸಿಗಬೇಕು. ತಂಗಿ ರತ್ನ ಮತ್ತು ಮೀನಾಕ್ಷಿಗೆ ಮದುವೆಯಾಗಬೇಕು. ನಾನು ಇನ್ನೂ ಅತಂತ್ರದ ಸ್ಥಿತಿಯಲ್ಲಿ ನಿಂತಿದ್ದೇನೆ. ನಿಶ್ಚಿತವಾದ ಆದಾಯವಿಲ್ಲ, ವಯಸ್ಸು ಓಡುತ್ತಿದೆ. ಇದೆಲ್ಲಾ ನನ್ನ ಮನಸ್ಸನ್ನು ಆವರಿಸಿತು. ಏನು ಮಾಡಬೇಕೆಂದು ತೋಚುತ್ತಿಲ್ಲ. ಇದೇ ಚಿಂತೆಯಲ್ಲೇ ಮೂರ್ನಾಲ್ಕು ದಿನ ಕಳೆದೆ. ಅಮ್ಮ ಸತ್ತ ಮಾರನೆಯ ದಿನದ ಹಾಲು-ತುಪ್ಪದ ಶಾಸ್ತ್ರ ಮಾಡಲಾಯಿತು. ಅವಳು ಸರಿಯಾದ ದಿನದಂದೇ ಜೀವಬಿಟ್ಟಳು. ಒಬ್ಬರಿಗೂ ಕೇಡನ್ನು ಬಯಸದೆ, ಸದಾ ಒಳಿತನ್ನೇ ಬೇಡುತ್ತಿದ್ದ ಆ ಮಹಾತಾಯಿಯ ಹದಿಮೂರನೆಯ ದಿನದ ಕಾರ್ಯವನ್ನು ಮುಗಿಸಿ ಬೆಂಗಳೂರಿನ ಕಡೆ ಹೋಗಲು ಸಿದ್ಧನಾದೆ. ಅಮ್ಮ ಸತ್ತ ಮೂರನೆಯ ದಿನಕ್ಕೆ ಹೋದ ದೊಡ್ಡಕ್ಕ ಹದಿಮೂರನೆಯ ದಿನಕ್ಕೆ ಬಂದಳು. ನಾನು ಜಯಕ್ಕ, ತಂಗಿ ರತ್ನ, ಮೀನಾಕ್ಷಿ ಇವರಿಗೆ ಸಾಂತ್ವನ ಹೇಳಿ ಮುಂದಿನ ಬದುಕನ್ನು ಕಟ್ಟಿಕೊಳ್ಳಲು ಸಿದ್ಧನಾದೆ!

ಪ್ರಭಾವೀ ವ್ಯಕ್ತಿತ್ವದ ಪ್ರಾಮಾಣಿಕ ಚಿತ್ರ

ಚಿದಾನಂದ ಸಾಲಿ

ವಿಮರ್ಶೆ

ಅಮೆರಿಕೆಯ ಸಂಶೋಧಕಿ ಎಲೀನರ್ ಜೆಲಿಯೆಟ್ ಅವರ ಸಂಶೋಧನಾ ಮಹಾಪ್ರಬಂಧ `ಡಾ. ಅಂಬೇಡ್ಕರ್ ಮತ್ತು ಮಹಾರ್ ಚಳುವಳಿ'ಯನ್ನು 'ಅಂಬೇಡ್ಕರ್ ಜಗತ್ತು' ಎಂಬ ಹೆಸರಿನಲ್ಲಿ ವಿಕಾಸ್ ಮೌರ್ಯ ಕನ್ನಡಕ್ಕೆ ಅನುವಾದಿಸಿದ್ದಾರೆ. 1890ರಿಂದ 1956ರ ನಡುವೆ ಮಹಾರ್ ಜಾತಿಯು ಅಂಬೇಡ್ಕರ್‌ರ ನೇತೃತ್ವದಲ್ಲಿ ಸಾಂಪ್ರದಾಯಿಕ ವಿಧಾನಗಳನ್ನು ಬದಿಗೊತ್ತಿ, ಆಧುನಿಕ ವಿಧಾನಗಳ ನೆರವಿನಿಂದ ರಾಜಕೀಯ ಜಾಗೃತಿ ಮತ್ತು ಏಕತೆಗಳ ಸಾಧನೆಗಾಗಿ ಶ್ರಮಿಸಿದ ಪರಿಯನ್ನು, ತಲುಪಿರುವ ಗುರಿಯನ್ನು ಇದು ಸಾದ್ಯಂತವಾಗಿ ವಿವರಿಸುತ್ತದೆ.


ವಿದ್ವತ್ಪೂರ್ಣ ಭಾಷೆ, ವ್ಯಾಪಕವಾದ ಸಂಬಂಧಿತ ಸಾಹಿತ್ಯಾವಲೋಕನ, ಸಂಶೋಧನೆಯ ತಾತ್ವಿಕ ಚೌಕಟ್ಟು, ಅಚ್ಚುಕಟ್ಟಾದ ಅಧ್ಯಾಯೀಕರಣ, ಇಟ್ಟುಕೊಂಡಿರುವ ಪ್ರಾಕ್ಕಲ್ಪನೆ ಮತ್ತು ಕಂಡುಕೊಂಡಿರುವ ಫಲಿತಾಂಶ ಮುಂತಾದ ಎಲ್ಲ ದೃಷ್ಟಿಯಿಂದಲೂ ಈ ಕೃತಿಯು ಸಂಶೋಧನಾಶಿಸ್ತನ್ನು ಸಮಗ್ರವಾಗಿ ನಿರ್ವಹಿಸಿದೆ. ಸ್ಪಷ್ಟ ಹಾಗೂ ಖಚಿತವಾದ ಭಾಷೆಯ ಮೂಲಕ ಸಾಧ್ಯವಾದಷ್ಟೂ ಸತ್ಯಕ್ಕೆ ಹತ್ತಿರವಾಗಿರಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ. ಸಂಶೋಧನಾ ಪ್ರಬಂಧಗಳ ಗುಣಮಟ್ಟವು ಕ್ರಮೇಣವಾಗಿ ಕುಸಿಯುತ್ತಿರುವ ಈ ದಿನಮಾನದಲ್ಲಿ ಇದು ಗತಕಾಲದ ಸಂಶೋಧನಾಶಿಸ್ತಿನ ಸ್ವರೂಪವನ್ನು ನಮಗೆ ಕಾಣಿಸುವಂತಿದೆ.

ಎಲ್ಲಿಯೂ ಭಾವುಕತೆಗೆ ಒಳಗಾಗದ, ಸಮಚಿತ್ತದ, ಸುದೂರದ 'ಥರ್ಡ್ ಅಂಪೈರ್' ಮಾದರಿಯ ನೋಟಕ್ರಮ ಇಲ್ಲಿದೆ. ಅಭಿಮಾನದಿಂದ ಆರಾಧಿಸುವ ಮತ್ತು ಅನುಮಾನದಿಂದ ದೂರೀಕರಿಸುವ ಎರಡೂ ವರ್ಗಗಳಿಂದ ದೊರೆತ ಅಂಬೇಡ್ಕರರ ಚಿತ್ರಗಳು ಅಪೂರ್ಣವಾಗಿದ್ದು, ಅರ್ಧಸತ್ಯವನ್ನಷ್ಟೇ ನುಡಿದವು. ವಿದೇಶೀ ದೃಷ್ಟಿಕೋನದಲ್ಲಿ ಮೂಡಿರುವ ಈ ಅಂಬೇಡ್ಕರರ ಚಿತ್ರವು ಸಾಕಷ್ಟು ವಸ್ತುನಿಷ್ಠವಾಗಿದೆ ಮತ್ತು ಪ್ರಾಮಾಣಿಕತೆಯಿಂದ ಕೂಡಿದೆ. ಗಾಂಧಿ, ಅಂಬೇಡ್ಕರ್, ತಿಲಕ್‌ರಂಥ ಮಹಾನ್ ವ್ಯಕ್ತಿತ್ವಗಳಲ್ಲಿನ ಹಠಮಾರಿತನ, ಅತಿಭಾವುಕತೆ, ನಾಜೂಕುತನ, ರಾಜಕೀಯ ಅಧಿಕಾರದ ಹಂಬಲ, ಸ್ವಜನಪಕ್ಷಪಾತ, ಇಬ್ಬಗೆಯ ನೀತಿಗಳಂಥ ಮಾನವಸಹಜ ದೌರ್ಬಲ್ಯಗಳನ್ನು, ಅವರ ಮೇಲಿನ ಅಭಿಮಾನಕ್ಕೆ ಧಕ್ಕೆಯಾಗದ ರೀತಿಯಲ್ಲಿ ತಣ್ಣಗೆ ಹೇಳಿರುವ ಕ್ರಮವು ಪ್ರಶಂಸಾರ್ಹವಾಗಿದೆ. ಗಾಂಧಿ ಮತ್ತು ಅಂಬೇಡ್ಕರ್ ಅವರ ನಡುವಿನ ಸಂಘರ್ಷವು ಸೈದ್ಧಾಂತಿಕ ಮತ್ತು ತಾತ್ವಿಕ ಸ್ವರೂಪದ್ದಾಗಿದ್ದು, ವೈಯಕ್ತಿಕವಾಗಿ ಅವರು ಪರಸ್ಪರರ ಕುರಿತಾಗಿ ಹೊಂದಿದ್ದ ಸದ್ಭಾವವನ್ನೂ ಇದು ಕಾಣಿಸಿದೆ.

'ಅಂಬೇಡ್ಕರ್ ಪೂರ್ವದ ನಾಯಕತ್ವ' ಎಂಬ ಉಪ ಅಧ್ಯಾಯದಲ್ಲಿ ಅವರ ವ್ಯಕ್ತಿತ್ವ ಮತ್ತು ಹೋರಾಟಗಳ ರೂಪಣೆಗೆ ಅಡಿಪಾಯ ಒದಗಿಸಿದ ಮಹಾತ್ಮ ಬುದ್ಧ, ಜೋತಿಬಾ ಫುಲೆ, ಸಂತ ತುಕಾರಾಂ, ಗೋಪಾಲಬಾಬಾ ವಾಲಂಗ್ಕರ್, ಶಿವರಾಂ ಜಾನ್ಬಾ ಕಾಂಬಳೆ, ಕಿಸಾನ್ ಫಗೋಜಿ ಬನ್ಸೋಡೆ, ಜಿ.ಎ.ಗವಾಯಿ ಮುಂತಾದವರ ಪ್ರಸಂಗಗಳಿವೆ. ಹಾಗೆಯೇ ಅಂಬೇಡ್ಕರರ ಉನ್ನತ ವ್ಯಾಸಂಗಕ್ಕೆ ನೆರವಾದ ಬರೋಡಾದ ಗಾಯಕವಾಡರು ಮತ್ತು ಕೊಲ್ಹಾಪುರದ ಶಾಹು ಮಹಾರಾಜರ ಚಿತ್ರಗಳಿವೆ. ಅವರ ನೆರಳಂತೆ ಬದುಕಿ ಬಹುಬೇಗ ತೀರಿಕೊಂಡ ರಮಾಬಾಯಿ, ಅವರ ಅನುಯಾಯಿಗಳಿಂದ ಹೆಚ್ಚು ಟೀಕೆಗೊಳಗಾದ ಎರಡನೇ ಪತ್ನಿ ಸವಿತಾ, ಕೊನೆವರೆಗೂ ನಿಷ್ಠರಾಗಿದ್ದ ಚಿತ್ಪಾವನ ಬ್ರಾಹ್ಮಣರಾದ ಜಿ.ಎನ್.ಸಹಸ್ರಬುದ್ಧೆ ಹೀಗೆ ಅಂಬೇಡ್ಕರ್ ಎಂಬ ವ್ಯಕ್ತಿತ್ವವನ್ನು ಹತ್ತಿರವಿದ್ದು ರೂಪಿಸಿದ ನಿಕಟಸ್ತರಿದ್ದಾರೆ. ಕಾಲಕಾಲಕ್ಕೆ ವೇದಿಕೆಗಳನ್ನು ಒದಗಿಸುತ್ತ ಬಂದ ಸಮಾಜೋ-ರಾಜಕೀಯ ಸಂದರ್ಭಗಳ ಹಿನ್ನೆಲೆಗಳಿವೆ.

ಹಲವಾರು ಚರ್ಚಾಸ್ಪದ ಸಂಗತಿಗಳು, ಚಿಂತನೆಗೆ ಹಚ್ಚುವ ಹೇಳಿಕೆಗಳು ಈ ಕೃತಿಯಲ್ಲಿ ಇದ್ದು, ಸಾವಧಾನದ ಓದನ್ನು ಕೃತಿಯು ನಿರೀಕ್ಷಿಸುತ್ತದೆ. ಒಂದೆರಡು ಕಡೆ ಊಹಾತ್ಮಕ ಹೇಳಿಕೆಗಳಿರುವುದು ಬಿಟ್ಟರೆ ಇಡೀ ಕೃತಿಯ ಭಾಷೆ ಖಚಿತವಾಗಿದೆ. ವಿದರ್ಭದವರು ಅಪರೂಪಕ್ಕಾದರೂ ಅಂಬೇಡ್ಕರ್‌ರನ್ನು ತಮ್ಮ ನಾಯಕರೆಂದು ಒಪ್ಪಿ ಬರಮಾಡಿಕೊಳ್ಳಲಿಲ್ಲ(ಪು-62), ಬಲವಾದ ಹಿಂದುತ್ವದ ಬಯಕೆಯಿಂದ ಉದ್ಭವಿಸಿದ್ದರೂ ಮಹಾಡ್ ಸತ್ಯಾಗ್ರಹಕ್ಕೆ ವೀರ್ ಸಾವರ್ಕರ್ ನೀಡಿದ ಬೆಂಬಲ ದಿಟ್ಟ ಮತ್ತು ಅಸಾಂಪ್ರದಾಯಿಕವಾಗಿತ್ತು(ಪು-65), ಮಹಾರ್ ಚಳವಳಿಯು ಪ್ರತಿ ಹಂತದಲ್ಲಿಯೂ ತಾನು ಅಸ್ಪೃಶ್ಯರ ವಿಶಾಲ ಗುಂಪಿನ ಭಾಗವೆಂದು ಘೋಷಿಸಿಕೊಂಡರೂ ಇತರೆ ಅಸ್ಪೃಶ್ಯ ಜಾತಿಗಳನ್ನು ತನ್ನೊಂದಿಗೆ ಕರೆದುಕೊಂಡು ಹೋಗುವಲ್ಲಿ ವಿಫಲವಾಯಿತು(ಪು-84), ಅಂಬೇಡ್ಕರ್ ತಮ್ಮ ಪ್ರತಿಸ್ಪರ್ಧಿ ಎಂ.ಸಿ. ರಾಜಾ ನವದೆಹಲಿಯಲ್ಲಿ ಕರೆದಿದ್ದ ದಮನಿತ ವರ್ಗಗಳ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿಲ್ಲ. ಬಹುಶಃ ಇನ್ನೊಬ್ಬ ನಾಯಕನ ಚಳವಳಿಯೊಂದಿಗೆ ಬಾಂಧವ್ಯ ಬೇಡವೆಂದಿರಬೇಕು ಅಥವಾ ಇತರರ ನಿಯಂತ್ರಣವಿಲ್ಲದೆ ತನ್ನದೇ ಆದ ಹೇಳಿಕೆ ನೀಡಬೇಕೆಂದು ಭಾವಿಸಿರಬೇಕು(ಪು-109), ಅಂಬೇಡ್ಕರ್ ಅವರ ಮೇಲೆ ಅವಕಾಶವಾದಿಯೆಂಬ ಆರೋಪವೂ ಇದ್ದು ಅದನ್ನು ಅವರು ಬಾಂಬೆ ಏಶಿಯಾಟಿಕ್ ಸೊಸೈಟಿಯ ಸಭೆಯಲ್ಲಿ ನಿರಾಕರಿಸಿದರು (ಪು-148) ಮುಂತಾದ ಸಾಲುಗಳನ್ನು ಅಂಬೇಡ್ಕರ್‌ವಾದಿಯೆಂದೇ ಹೆಸರಾಗಿರುವ ಲೇಖಕಿಯು ಬರೆದಿದ್ದಾರೆಂದರೆ ಆಶ್ಚರ್ಯವಾಗುತ್ತದೆ.

ಈ ಅನುವಾದದಲ್ಲಿ ದೋಷಗಳಿಲ್ಲವೆಂದಲ್ಲ. ಕೆಲವೆಡೆ ಇರುವ ಸಂಕೀರ್ಣ ವಾಕ್ಯಗಳು ಉದ್ದೇಶಿತ ಅರ್ಥವನ್ನು ದಾಟಿಸಲಾಗದೆ ಗೊಂದಲ ಮೂಡಿಸುವಂತಿವೆ. ಅಂಬೇಡ್ಕರರ ಕರ್ನಾಟಕ ಸಂಪರ್ಕದ ಬಗ್ಗೆ ಮೂರು ಕಡೆಗಳಲ್ಲಿ ಉಲ್ಲೇಖವಿದ್ದು, ಅವಕ್ಕೆ ಸಂಬಂಧಿಸಿ ಟಿಪ್ಪಣಿಗಳನ್ನು ಒದಗಿಸಬಹುದಿತ್ತು. ಬೆಂಗಳೂರಿನಲ್ಲಿ ಬೌದ್ಧ ಅಕಾಡೆಮಿ ಸ್ಥಾಪಿಸಲು ಉದ್ದೇಶಿಸಿದ್ದ ಭೂಮಿಗೆ ಸಂಬಂಧಿಸಿದ 104ನೇ ಟಿಪ್ಪಣಿಯ ಉಲ್ಲೇಖವಿದೆ. ಆದರೆ ಟಿಪ್ಪಣಿಯೇ ಇಲ್ಲ. ಅಧ್ಯಾಯ-2ರ 5ನೇ ಟಿಪ್ಪಣಿ ಗೊಂದಲಕಾರಿಯಾಗಿದೆ. ಅದಲ್ಲದೆ ಸಂಶೋಧನೆಯ ಭಾಷೆಯನ್ನು ಹಾಗೇ ಉಳಿಸಿಕೊಳ್ಳದೆ ತುಸು ಚೆಂದಗಾಣಿಸಿದ್ದರೆ, ತಲುಪುವಿಕೆಯ ಪ್ರಮಾಣವು ಹೆಚ್ಚಾಗುತ್ತಿತ್ತು. ಆದರೂ ವೈಯಕ್ತಿಕ ಬರೆಹಗಳೆಡೆಗೇ ವಾಲುವ ಯುವಮನಸ್ಸುಗಳ ನಡುವೆ ಇಂಥ ಸಂಶೋಧನಾ ಕೃತಿಯ ಅನುವಾದಕ್ಕೆ ತನ್ನನ್ನು ಒಡ್ಡಿಕೊಂಡ ವಿಕಾಸ್ ಮೌರ್ಯ ನಡೆ ಅಭಿನಂದನೀಯವಾಗಿದೆ. ಅಪಾರ ಶ್ರಮ, ಶ್ರದ್ಧೆ ಮತ್ತು ತಾಳ್ಮೆಗಳ ಎರಕದಲ್ಲಿ ರೂಪುಗೊಂಡಿರುವ ಈ ಕೃತಿಯ ಸಾಂಸ್ಕೃತಿಕ ಮಹತ್ವದಲ್ಲಿ ಇಂಥ ಸಣ್ಣಪುಟ್ಟ ದೋಷಗಳು ಗೌಣವಾಗುತ್ತವಷ್ಟೇ.




ಪು: 288
₹395

ಅಂಬೇಡ್ಕರ್ ಜಗತ್ತು
ಮೂಲ: ಎಲೀನರ್ ಜೆಲಿಯೆಟ್
ಕನ್ನಡಕ್ಕೆ: ವಿಕಾಸ್ ಮೌರ್ಯ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಸಂ:97422 25779

ಮೊದಲ ಓದು

ಸಾಮಾನ್ಯರ ಪ್ರೇಮಕಾಮಗಳ ಸಂಕಥನ



ಪು: 150
₹180

ನದಿಯೊಂದು ಕಡಲ ಹುಡುಕುತ್ತಾ
ಲೇ: ಸಂತೆಬೆನ್ನೂರು ಫೈಜ್ನಟ್ರಾಜ್
ಪ್ರ: ವೀರಲೋಕ
ಸಂ: 8861212172

ಸಂತೆಬೆನ್ನೂರು ಫೈಜ್ನಟ್ರಾಜ್ ಅವರ 'ನದಿಯೊಂದು ಕಡಲ ಹುಡುಕುತ್ತಾ' ಕಥಾ ಸಂಕಲನದಲ್ಲಿರುವ ಕಥೆಗಳು ವರ್ತಮಾನದ ವಿದ್ಯಮಾನಗಳ ಮೇಲೆ ಹುಟ್ಟಿದ ಕಥೆಗಳಾಗಿವೆ. ಈ ಕಥೆಗಳಿಗೆ ಓದಿಸಿಕೊಳ್ಳುವ ಗುಣವಿದೆ.

ಜನಸಾಮಾನ್ಯರ ಪ್ರೇಮಕಾಮಗಳು, ಹೆಣ್ಣುಗಂಡಿನ ಸಂಘರ್ಷಗಳು, ಮತೀಯ ಸೌಹಾರ್ದದ ಬದುಕು–ಇವೆಲ್ಲವೂ ಈ ಕಥೆಗಳ ಹೂರಣಗಳು.


ವರ್ಚುಯಲ್ ಜಗತ್ತು, ಆಧುನಿಕ ಸೌಲಭ್ಯಗಳು ಹೇಗೆಲ್ಲ ಮನುಷ್ಯನನ್ನು ದುರಂತಕ್ಕೆ ತಳ್ಳುತ್ತವೆ, ಈ ಸೌಲಭ್ಯಗಳು ಬದುಕಿನಲ್ಲಿ ಎಬ್ಬಿಸುವ ಬಿರುಗಾಳಿ ಎಂಥದ್ದೆನ್ನುವುದನ್ನು ತಣ್ಣನೆಯ ಧಾಟಿಯಲ್ಲಿ ನಿರೂಪಿಸುವ ಫೈಜ್ನಟ್ರಾಜ್ ಅವರ ಶೈಲಿ ಇಷ್ಟವಾಗುತ್ತದೆ. ವರ್ಚುಯಲ್ ಜಗತ್ತಿನ ಯಡವಟ್ಟು, ಬಯಲಾದ ವಿವಾಹೇತರ ಸಂಬಂಧ, ಅದರಿಂದಾಗುವ ದುರಂತ ಎಲ್ಲವನ್ನೂ ದೇಸಿ ಸೊಗಡಿನಲ್ಲಿ ಕಟ್ಟುಕೊಟ್ಟಿದ್ದಾರೆ.

ದ್ವೀಪದೂರಿನ ತಂದೆಯೊಬ್ಬರ ಕಥನ...

ಶರಾವತಿ ನದಿಯಾಚೆಗಿನ ಕರೂರು ಸೀಮೆಯ ಪ್ರತಿ ಮನೆಯ ಅಪ್ಪನ ಬದುಕನ್ನು ಪರಿಚಯಿಸುವ ಕೃತಿ 'ಅಪ್ಪಯ್ಯ'. ಲೇಖಕ ಜಿ.ಟಿ.ಸತ್ಯನಾರಾಯಣ ಈ ಕೃತಿಯಲ್ಲಿ ತಮ್ಮ ತಂದೆಯ ಕುರಿತಾಗಿನ ಹಲವು ಕಥೆಗಳನ್ನು ಹೇಳಿದ್ದಾರೆ. ಬಹುತೇಕ ಕಥೆಗಳು ಆ ಊರಿನ ಪ್ರತಿ ಮನೆಯ ಅಪ್ಪನ ಕಥೆಯೂ ಹೌದು ಎಂಬಂತಿವೆ. ಕೃತಿಯಲ್ಲಿ 41 ಪುಟ್ಟ ಕಥೆಗಳಿದ್ದು, ಎಲ್ಲವೂ ಆ ಊರು, ಪರಿಸರ, 1980–90 ರ ದಶಕದ ಪರಿಸ್ಥಿತಿಗಳನ್ನು ವಿವರಿಸುತ್ತ ಹೋಗುತ್ತದೆ.

'ಸಾಬರನ್ನು ದೇಶಬಿಟ್ಟು ಓಡಿಸಬೇಕು ಎನ್ನೋ ಹೊತ್ತಿಗೆ' ಎಂಬ ಲೇಖನದಲ್ಲಿ ಲೇಖಕರು ಹೇಗೆ ಸಂಘ ಪರಿವಾರದವರು ಊರಿನ ಮಂದಿಯಲ್ಲಿ ಧರ್ಮದ ದ್ವೇಷ ಬಿತ್ತುತ್ತಿದ್ದರು ಎಂಬುದನ್ನು ಹೇಳುತ್ತ, ಅಂಥ ಮನಃಸ್ಥಿತಿಗೆ ಅಪ್ಪಯ್ಯ ಹೇಗೆ ಪ್ರತಿಕ್ರಿಯಿಸುತ್ತಿದ್ದ ಎಂಬುದನ್ನೂ ಹೇಳುತ್ತಾರೆ. ಬಹಳಷ್ಟು ವರ್ಷಗಳು ಕಾಲ ಸರಿಯಾಗಿ ರಸ್ತೆ, ವಿದ್ಯುತ್‌ನಂತಹ ಮೂಲಸೌಕರ್ಯವನ್ನೇ ಹೊಂದಿರದ ತುಮರಿ, ಬ್ಯಾಕೋಡು ಸೀಮೆಯ ಪ್ರತಿ ಪ್ರಜೆಗೆ ರಾಷ್ಟ್ರ ಮಟ್ಟದ ಸಮಸ್ಯೆಗಳು ಹೇಗೆ ಪರಿಣಾಮ ಬೀರಿದ್ದವು ಎಂಬ ಚಿತ್ರಣವನ್ನು 'ಅಪ್ಪಯ್ಯ'ನ ಮಾತಿನ ಮೂಲಕ ಕಟ್ಟಿಕೊಡುವ ಯತ್ನವನ್ನು ಲೇಖಕರಿಲ್ಲಿ ಮಾಡಿದ್ದಾರೆ.

'ಅಪ್ಪಯ್ಯ ತನ್ನೊಳಗೆ ಬೀಜವಾಗಿ ಬಿದ್ದು, ಸಸಿಯಾಗಿ ಮೊಳಕೆ ಒಡೆಯುವ, ಹೆಮ್ಮರವಾಗಿ ಬೆಳದು ನಿಲ್ಲುವ ವಿಸ್ಮಯವನ್ನು ನೋಡುವ ಕೃತಿಯ ಲೇಖಕರು, ಅದರ ನೆರಳು ಓದುಗರಿಗೆ ತಂಪಿನ ಅನುಭವ ನೀಡುವಂತೆ ನೋಡಿಕೊಂಡಿದ್ದಾರೆ. ಹಾಗೆ ನೋಡಿದರೆ ಕನ್ನಡದಲ್ಲಿ ಇಂತಹ ಪ್ರಯೋಗಗಳು ವಿರಳ' ಎಂದು ಆರ್.ಟಿ.ವಿಠ್ಠಲಮೂರ್ತಿ ಕೃತಿಯ ಬೆನ್ನುಡಿಯಲ್ಲಿ ಬರೆದಿರುವುದು ಕೃತಿಯೊಳಗಿನ ಹೂರಣಕ್ಕೆ ಹಿಡಿದ ಕನ್ನಡಿಯಂತಿದೆ.



ಪು: 204
₹210

ಅಪ್ಪಯ್ಯ
ಲೇ: ಜಿ.ಟಿ.ಸತ್ಯನಾರಾಯಣ
ಪ್ರ: ಅಂಬಾರಿ ಪ್ರಕಾಶನ
ಸಂ: 9448018212

ಮಲೆಮಕ್ಕಳ ಹಾಡು...

10ನೇ ಪುಟದಿಂದ...

ಸೋಲಾರ್ ದೀಪವಿದೆ. ಸಿಗ್ನಲ್ ಸಿಕ್ಕರೆ ರೇಡಿಯೊ ಕೂಡ ಉಲಿಯುತ್ತದೆ. ಇಲ್ಲಿನ ಪ್ರಾಕೃತಿಕ ಸಿಹಿ ನೀರಿನ ಒರತೆಗಳು ದಾಹ ತಣಿಸುತ್ತವೆ.

ಸರ್ಕಾರ ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆ ಜಾರಿ ಮಾಡುವುದಕ್ಕಾಗಿ ಪರಂಪರಾಗತವಾಗಿ ಕಾಡಿನಲ್ಲಿ ವಾಸವಿದ್ದ ಮಲೆಕುಡಿಯರನ್ನು ಒಕ್ಕಲೆಬ್ಬಿಸುವ ಯೋಜನೆ ರೂಪಿಸಿತ್ತು. ನಕ್ಸಲ್ ನಿಗ್ರಹ ಪಡೆಯು ಕುತ್ಲೂರು ಹಾಗೂ ರಾಷ್ಟ್ರೀಯ ಉದ್ಯಾನ ಪ್ರದೇಶದ ಜನರು ಒಕ್ಕಲೆದ್ದು ಹೋಗಲು ಒತ್ತಡ, ₹10 ಲಕ್ಷ ಪ್ಯಾಕೇಜ್, ಆಮಿಷವೊಡ್ಡಿತ್ತು. ಹಲವು ಸಂಘಟನೆಗಳ ಪ್ರವೇಶದೊಂದಿಗೆ ಈ ಜನರು ಮುಖ್ಯವಾಹಿನಿಗೆ ತೆರೆದುಕೊಂಡಿದ್ದಾರೆ. ಹಕ್ಕುಗಳಿಗಾಗಿ ಸಂವಿಧಾನಾತ್ಮಕ ಹಾದಿಯಲ್ಲಿ ಸಾಗಿದ್ದಾರೆ.

ಕುತ್ಲೂರಿನ ಮಲೆಕುಡಿಯರು ಈಗ ಪೊಲೀಸ್ ದೌರ್ಜನ್ಯದಿಂದ ಮುಕ್ತರು. ಪೊಲೀಸ್ ಮತ್ತು ಅರಣ್ಯ ಇಲಾಖೆ ನಕ್ಸಲ್ ವಿಚಾರಣೆ ನೆಪದಲ್ಲಿ ರಾತ್ರೋರಾತ್ರಿ ಮನೆಗಳಿಗೆ ನುಗ್ಗುತ್ತಿಲ್ಲ. ನಕ್ಸಲ್ ಕೂಬಿಂಗ್ ನಡೆದರೂ ಯಾವ ಮಲೆಕುಡಿಯರ ಮೇಲೆ ಹಲ್ಲೆ ಮಾಡುವುದಾಗದಲಿ, ಸಾಕ್ಷ್ಯವಿಲ್ಲದೆ ವಿಚಾರಣೆ ನಡೆಸುತ್ತಿಲ್ಲ. ಇವರ ಪ್ರಶ್ನಿಸುವ ಮನೋಭಾವಕ್ಕೆ ಸಂವಿಧಾನ ಊರುಗೋಲಾಗಿ ನಿಂತಿದೆ.

ಕುತ್ಲೂರು ಕಥನವಾಗಿ ಸಿನಿಮಾ: ತಮ್ಮ ಜನರ ಹಕ್ಕುಗಳಿಗಾಗಿ ಮೊದಲು ಧ್ವನಿ ಎತ್ತಿದ್ದು ಈ ಸಮುದಾಯದ ಮೊದಲ ಶಿಕ್ಷಿತ ಯುವಕ ವಿಠಲ. ನಕ್ಸಲ್ ಎಂದು ಆರೋಪಿತನಾಗಿ ಸತತ 10 ವರ್ಷ ದೇಶದ್ರೋಹ ಕೇಸಿನಲ್ಲಿ ಕೋರ್ಟ್‌ಗೆ ಅಲೆದಾಡಿ, ಕೊನೆಗೂ ನಿರ್ದೋಷಿಯಾಗಿದ್ದಾರೆ. ಕೈಕೋಳದಲ್ಲೇ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪರೀಕ್ಷೆ ಬರೆದು ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದರು. ಜನಪರ ಸಂಘಟನೆಗಳು, ಹೋರಾಟಗಾರರು, ವಕೀಲರು ಬೆಂಬಲಕ್ಕೆ ನಿಂತಿದ್ದರು. ಈ ಹೋರಾಟವೇ 'ಕುತ್ಲೂರು ಕಥನ'. ಇದರ ಲೇಖಕರು ನವೀನ್ ಸೂರಿಂಜೆ. ಇದೇ ಕಥೆಯನ್ನಾಧರಿಸಿ ನಿರ್ದೇಶಕ ಮಂಸೋರೆ '19.20.21' ಚಿತ್ರ ಮಾಡಿ ಗಮನ ಸೆಳೆದಿದ್ದಾರೆ.



ಕಾನನದಲ್ಲಿ ರಸ್ತೆ ನಿರ್ಮಾಣ

ತುತ್ತಿನಚೀಲ, ಪಡಿತರ ತಾಪತ್ರಯ

ಕುತ್ಲೂರು ಅರಣ್ಯ ವ್ಯಾಪ್ತಿಯಲ್ಲಿ ಸುಮಾರು 30 ಮಲೆಕುಡಿಯರ ಮನೆಗಳಿವೆ. ಬಹುತೇಕರು ಸಂಚಾರ ಪಡಿತರ ವ್ಯವಸ್ಥೆ ಅವಲಂಬಿತರು. ತಿಂಗಳಿಗೆ ನಿಗದಿಪಡಿಸಿದ ಒಂದು ದಿನ ಪಡಿತರ ಸರಬರಾಜು ಆಗುತ್ತದೆ. ಆ ದಿನ ಎಲ್ಲ ಮನೆಯವರು ಹೋಗಿ ಪಡಿತರ ತರುತ್ತಾರೆ. ಇದು ಅವರ ತುತ್ತಿನ ಚೀಲದ ಅನಿವಾರ್ಯವೂ ಹೌದು.

ಬೆಳ್ತಂಗಡಿ ತಾಲ್ಲೂಕಿನ ನಾರಾವಿ, ಕುತ್ಲೂರು, ನಾವರ, ಸವಣಾಲು, ನೆರಿಯ, ಶಿಶಿಲ, ಸುಲ್ಕೇರಿ, ಧರ್ಮಸ್ಥಳ, ಚಾರ್ಮಾಡಿ, ಪಟ್ರಮೆ, ಶಿಬಾಜೆ ಹಾಗೂ ಉಡುಪಿ ಜಿಲ್ಲೆಯ ಈದು, ಮಾಳ, ಕಬ್ಬಿನಾಲೆ ಭಾಗದಲ್ಲಿ ಈ ಸಮುದಾಯದವರು ಹೆಚ್ಚು ವಾಸವಾಗಿದ್ದಾರೆ. ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ, ಮಡಿಕೇರಿ, ಚಿಕ್ಕಮಗಳೂರಿನ ಭಾಗದ ಅರಣ್ಯ ಪ್ರದೇಶದಲ್ಲೂ ಇದ್ದಾರೆ. ಅರಣ್ಯ ಮತ್ತು ಅರಣ್ಯದ ಅಂಚಿನಲ್ಲೇ ಹೆಚ್ಚಿನ ಕುಟುಂಬಗಳು ಇವೆ. ನಗರ ಪ್ರದೇಶಗಳಿಗೆ ಈಚೆಗೆ ಒಂದಷ್ಟು ಕುಟುಂಬಗಳು ವಲಸೆ ಹೋಗಿವೆ. 10ರಿಂದ 13 ಸಾವಿರ ಜನಸಂಖ್ಯೆ ಇದೆ.

ಅಂಗನವಾಡಿಗೆ ಆಹಾರ ತರುವ ಪೋಷಕರು

ಕುತ್ಲೂರು ಕುರಿಯಾಡಿ ಮಲೆಯಲ್ಲಿರುವ ಮಿನಿ ಅಂಗನವಾಡಿ ಗ್ರಾಮ ಪಂಚಾಯಿತಿಯಿಂದ 12 ಕಿ.ಮೀ. ದೂರದಲ್ಲಿ ಇದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗಿರುವ ಏಕೈಕ ಸರ್ಕಾರಿ ಕಟ್ಟಡ ಇದು. ಇಲ್ಲಿಗೆ ಸುಮಾರು 6 ಕಿ.ಮೀ. ದೂರ ಇರುವ ನೇಲ್ಯಪಲ್ಕೆ ಎಂಬಲ್ಲಿಯ ಅಂಗನವಾಡಿ ಕೇಂದ್ರಕ್ಕೆ ಪೌಷ್ಟಿಕ ಆಹಾರ ಸರಬರಾಜು ಆಗುತ್ತದೆ.
ಇಲ್ಲಿಂದ ಗ್ರಾಮದ ಜನರು ತಿಂಗಳಿಗೆ ಎರಡು ಮನೆಯವರಂತೆ ಆಹಾರವನ್ನು ಹೊತ್ತು ಅಂಗನವಾಡಿಗೆ ತಲುಪಿಸುತ್ತಾರೆ. ಈ ಅಂಗನವಾಡಿಗೆ ಇದೇ ಅರಣ್ಯ ಪ್ರದೇಶದ ಪಂಜಾಲು ಎಂಬಲ್ಲಿಂದ ಸುಮಾರು ಮೂರು ಕಿ.ಮೀ ದೂರದಿಂದ ಅಂಗನವಾಡಿ ಸಹಾಯಕಿ ಪ್ರತಿದಿನ ಬಂದು ಕಾರ್ಯನಿರ್ವಹಿಸುತ್ತಾರೆ. ಮಳೆಗಾಲದಲ್ಲಿ ಹೊಳೆ ದಾಟಿ ಮಕ್ಕಳು ಅಂಗನವಾಡಿಗೆ ಬರಲು ಸಾಧ್ಯವಾಗುವುದಿಲ್ಲ. ಜನರಿಗೆ ಸಂಪರ್ಕವೂ ದುಸ್ತರ.

“ ನಮ್ಮೂರಿನ ರಸ್ತೆಗಳು ಮಳೆಗಾಲದಲ್ಲಿ ಹಾಳಾಗಿ ಸಂಚರಿಸಲು ಕಷ್ಟವಾಗುತ್ತದೆ. ಆರು ತಿಂಗಳು ರಸ್ತೆ ಸರಿ ಇದ್ದರೆ ಇನ್ನು ಆರು ತಿಂಗಳು ಸಂಚಾರವೇ ದುಸ್ತರ. ವಿದ್ಯುತ್‌ಗಾಗಿ ಬಹುವರ್ಷಗಳ ಬೇಡಿಕೆ ಇದೆ. ಕೆಲವರು ಜಲವಿದ್ಯುತ್ ಘಟಕ ಮಾಡಿಕೊಂಡಿದ್ದಾರೆ. ಇಲ್ಲಿನ ಕುರಿಯಾಡಿ ಅಂಗನವಾಡಿಗೆ ಮಕ್ಕಳು ಹೋಗಬೇಕೆಂದರೆ ಎರಡು ನದಿ ದಾಟಬೇಕಾಗುತ್ತದೆ. ಈ ನದಿಗೆ ಸೇತುವೆ ನಿರ್ಮಿಸಿದರೆ ಮಕ್ಕಳು ಮಳೆಗಾಲದಲ್ಲೂ ಅಂಗನವಾಡಿಗೆ ಹೋಗಿ ಬರಲು ಅನುಕೂಲವಾಗುತ್ತದೆ.

ಪೂವಪ್ಪ ಮಲೆಕುಡಿಯ, ಅಂಜರೊಟ್ಟು ಮನೆ ಕುತ್ಲೂರು



ನಿಜ ಸಂಸ್ಕೃತಿಯ ಆರಾಧನೆ ಸುದೆಪೂಜೆ

ಮಲೆ ಕುಡಿಯರು ಮರ, ಗಿಡ, ಕಾಡು ನದಿ, ಬೆಟ್ಟ–ಗುಡ್ಡಗಳನ್ನು ಆರಾಧಿಸುವ ಕ್ರಮಗಳಲ್ಲಿ ಸುದೆಪೂಜೆ ಪ್ರಮುಖ ಆಚರಣೆ. ಕಾಡಿನಲ್ಲಿ ಹರಿಯುವ ನದಿಯನ್ನೇ ಪೂಜಿಸುವ ಪರಿಪಾಠ ಪ್ರತಿವರ್ಷ ಕುತ್ಲೂರಿನ ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿನ ಪೆರಿಂಚ ಸಮೀಪ ನಡೆಯುತ್ತದೆ.
ಕೃಷಿ ಚಟುವಟಿಕೆ ಮುಗಿದ ನಂತರ ಜನವರಿ, ಫೆಬ್ರುವರಿ ತಿಂಗಳಲ್ಲಿ ಸುದೆ ಪೂಜೆ ಆಚರಿಸುವ ಕ್ರಮವಿದೆ. ಪ್ರತಿಯೊಂದು ಮನೆಯಿಂದಲೂ ತೆಂಗಿನಕಾಯಿ, ಎಳನೀರು, ಅವಲಕ್ಕಿ- ಬೆಲ್ಲ ತರಲಾಗುತ್ತದೆ. ಬಳಿಕ ರಾಶಿಪೂಜೆಯನ್ನು ಊರಿನ ಮುಖ್ಯಸ್ಥರೇ ನಿಂತು ನಡೆಸುತ್ತಾರೆ.
ಸುಗ್ಗಿ ಸಂಭ್ರಮದ ಪುರ್ಸ ಪೂಜೆ: ಸುಗ್ಗಿ ಹುಣ್ಣಿಮೆ ಬೆಳದಿಂಗಳಲ್ಲಿ ವಿವಿಧ ವೇಷ ಧರಿಸಿ ಬಿದಿರಿನ ಕೋಲು ಹಿಡಿದು ದಿಮಿಸೋಲೆ ಪದಗಳನ್ನು ಹಾಡಿಕೊಂಡು ರಾತ್ರಿ ಮನೆ ಮನೆಗೆ ತೆರಳುತ್ತಾರೆ. ಮನೆಯಲ್ಲಿ ದೀಪ ಹಚ್ಚಿ ಅಕ್ಕಿಯನ್ನು ಇಡಲಾಗುತ್ತದೆ. ದೇವರಿಗೆ ಭಕ್ತಿಯಿಂದ ಪೂಜಿಸುವ ಸಾಂಸ್ಕೃತಿಕ ಆಚರಣೆ ಈ ಸಮುದಾಯದ ವೈಶಿಷ್ಟ್ಯ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕೂರ್ಗೆಲಸ

ಕೂರ್ಗೆಲಸ (ನಾ). ಕ್ರೂರವಾದ ಕೆಲಸ; ಕೆಟ್ಟಕೆಲಸ (ಕೂರ್ + ಕೆಲಸ)

ಕೈಕೆಯ ತಂದೆ ಕೇಕೆಯ ಮಹಾರಾಜನು ಒಂದು ದಿನ ಬೇಟೆಯ ಕ್ರೂರವಾದ ಕೆಲಸದಿಂದ ಹಿಂತಿರುಗುತ್ತಿರುತ್ತಾನೆ. ಅದನ್ನು ಕವಿ 'ಕೂರ್ಗೆಲಸ' ಎಂಬ ಪದ ರೂಪಿಸಿ ಚಿತ್ರಿಸಿದ್ದಾರೆ. ಆ ಕೆಟ್ಟ ಕೆಲಸದಿಂದ ಹಿಂತಿರುಗಿ ಬರುವಾಗ ಅನಾಥ ಶಿಶುರೋದನ ಕೇಳಿ ಅವನಲ್ಲಿ ಕರುಣೆ ಉಂಟಾಗುತ್ತದೆ.

ಪಳುವೆ ತಾನಳುವಂತೆ

ಗೋಳಿಟ್ಟುದೊಂದು ಶಿಶುರೋದನಂ. ಕೂರ್ಗೆಲಸದಿಂ

ಪಿಂತಿರುಗುತಿರ್ದ ಪಾರ್ಥಿವನೊಳುದಿಸಿತು ಕರುಣೆ.

ಭಯೋತ್ಪಾದನೆಯ ಮೂರು ಪ್ರತಿಧ್ವನಿಗಳು

ಪ್ರೇಮಕುಮಾರ್ ಹರಿಯಬ್ಬೆ

ಕೇಂದ್ರ ಸರ್ಕಾರ ಗೋವಾದಲ್ಲಿ ಸಂಘಟಿಸುವ ಚಿತ್ರೋತ್ಸವಕ್ಕೆ ಅಂತರರಾಷ್ಟ್ರೀಯ ಮಾನ್ಯತೆ ಸಿಕ್ಕಿದೆ. ಇತ್ತೀಚೆಗೆ ಒಂಬತ್ತು ದಿನಗಳ ಕಾಲ ನಡೆದ ಚಿತ್ರೋತ್ಸವದಲ್ಲಿ 78 ದೇಶಗಳ 240ಕ್ಕೂ ಹೆಚ್ಚು ಸಿನಿಮಾಗಳು ಪ್ರದರ್ಶನಗೊಂಡವು.

> ಆಸಕ್ತರಿಗೆ ಜಗತ್ತಿನ ಸಿನಿಮಾಗಳನ್ನು ನೋಡುವ ಅವಕಾಶ ಒದಗಿಸುವ ವೇದಿಕೆ ಗೋವಾದಲ್ಲಿ (ಪಣಜಿ) ನಡೆಯುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ. ಈ ಸಲದ ಚಿತ್ರೋತ್ಸವದಲ್ಲಿ ಭಯೋತ್ಪಾದನೆಯನ್ನೇ ವಸ್ತುವಾಗಿ ಉಳ್ಳ ಮೂರು ಭಿನ್ನ ಸಿನಿಮಾಗಳ ಕುರಿತ ಟಿಪ್ಪಣಿಗಳು ಇಲ್ಲಿವೆ...

ಬಹುತೇಕ ಸಿನಿಮಾಗಳು ಕಳೆದ ಒಂದು ವರ್ಷದ ಅವಧಿಯಲ್ಲಿ ಆಯಾ ದೇಶಗಳಲ್ಲಿ ಆಗಿರುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪಲ್ಲಟಗಳೇ ಅಲ್ಲದೆ ಜನರ ಬದುಕಿಗೆ ಸಂಬಂಧಿಸಿದ ಅನೇಕ ಸೂಕ್ಷ್ಮ ಸಂಗತಿಗಳನ್ನು ಇಟ್ಟುಕೊಂಡು ತಯಾರಿಸಲಾದವು. ಒಂದಕ್ಕಿಂತ ಒಂದು ಭಿನ್ನ. ಕೋವಿಡ್ ಹಾವಳಿಯ ನಂತರ ಚೇತರಿಸಿಕೊಂಡಿದ್ದ ಚಿತ್ರೋತ್ಸವದಲ್ಲಿ ಈ ವರ್ಷ ಉತ್ಸಾಹದ ಕೊರತೆ ಇತ್ತು. ನೋಂದಾಯಿಸಿಕೊಂಡು ಬಂದ ಪ್ರತಿನಿಧಿಗಳ ಸಂಖ್ಯೆಯೂ ಕಡಿಮೆ ಇತ್ತು.

ಇತ್ತೀಚಿನ ವರ್ಷಗಳಲ್ಲಿ ಮೂಲಭೂತವಾದ ಪ್ರೇರಿತ ಭಯೋತ್ಪಾದನೆ ಕೆಲ ದೇಶಗಳಿಗೆ ಸವಾಲಾಗಿದೆ. ಹಲವು ದೇಶಗಳು ಜನಾಂಗೀಯ ಸಂಘರ್ಷ ಮತ್ತು ಕೋಮು ಅಸಹನೆಗಳಿಂದ ನಲುಗುತ್ತಿವೆ. ಕೋಮು ದ್ವೇಷ ಬೆಳೆಯುವುದಕ್ಕೆ ಅವಕಾಶ ಕೊಟ್ಟು, ಬೆಳೆದ ಮೇಲೆ ನಿಯಂತ್ರಿಸಲಾಗದ ವಿಚಿತ್ರ ಪರಿಸ್ಥಿತಿ ಕೆಲ ದೇಶಗಳಲ್ಲಿದೆ. ಹೊಸ ತಲೆಮಾರಿನ ಜನರಲ್ಲಿ ಕಾಣಿಸಿಕೊಂಡಿರುವ ಅರಾಜಕ, ವಿಕ್ಷಿಪ್ತ ಮನಃಸ್ಥಿತಿಗೆ ಪ್ರತಿಕ್ರಿಯಿಸುವ ಸಿನಿಮಾಗಳೂ ಇದ್ದವು. ಪ್ರತಿನಿಧಿಯೊಬ್ಬ ದಿನಕ್ಕೆ ನಾಲ್ಕೈದು ಸಿನಿಮಾ ನೋಡುವ ಅವಕಾಶವಿತ್ತು. ಹಾಗೆ ನೋಡಿದ ಯಾವುದೋ ಒಂದರ ಕಥೆಯೋ, ಪಾತ್ರವೋ, ವಸ್ತುವೋ ಇಷ್ಟವಾಗಿ ಅದು ಮತ್ತೆ ಮತ್ತೆ ನೆನಪಾಗಿ ಕಾಡಿದರೆ ಅದು ಉತ್ತಮ ಸಿನಿಮಾ. ಆದರೆ, ಅಂತಹ ಸಿನಿಮಾಗಳ ಸಂಖ್ಯೆ ಇಲ್ಲಿ ಹೆಚ್ಚಿರಲಿಲ್ಲ.



ಮನುಷ್ಯ ಸಂಬಂಧಗಳ ರೂಪಕ

ಐವತ್ತನಾಲ್ಕನೇ ಚಿತ್ರೋತ್ಸವದ ಅತ್ಯುತ್ತಮ ಚಿತ್ರ ಎಂಬ ಪ್ರಶಂಸೆಗೆ ಪಾತ್ರವಾಗಿ ಸ್ವರ್ಣ ಮಯೂರ ಫಲಕದ ಜತೆಗೆ ₹40 ಲಕ್ಷ ನಗದು ಪುರಸ್ಕಾರಕ್ಕೆ ಭಾಜನವಾದದ್ದು **'ಎಂಡ್‌ಲೆಸ್ ಬಾರ್ಡರ್ಸ್'** ಇರಾನ್ ಸಿನಿಮಾ. ಅಬ್ಬಾಸ್ ಅಮಿನಿ ಇದರ ನಿರ್ದೇಶಕರು. 111 ನಿಮಿಷಗಳ ಈ ಸಿನಿಮಾ ತಾಲಿಬಾನಿಗಳ ಕೈವಶವಾದ ನಂತರ ಅಫ್ಘಾನಿಸ್ತಾನದ ಬುಡಕಟ್ಟು ಸಮುದಾಯಗಳ ಅತಂತ್ರ ಸ್ಥಿತಿಯನ್ನು ಕಟ್ಟಿಕೊಡುತ್ತದೆ.

ತಾಲಿಬಾನಿ ಉಗ್ರರಿಂದ ತಪ್ಪಿಸಿಕೊಂಡು ದಕ್ಷಿಣ ಇರಾನಿನ ಗಡಿ ಹಳ್ಳಿಯೊಂದಕ್ಕೆ ನುಸುಳಿ ಬಂದ ಹಝಾರ್ ಬುಡಕಟ್ಟು ಜನರ ಗುಂಪಿಗೆ, ಶಾಲೆಯ ಶಿಕ್ಷಕ ಅಹ್ಮದ್ ಆಶ್ರಯ ಕೊಡುತ್ತಾನೆ. ಗುಂಪಿನ ಜತೆ ಬಂದ ವಿವಾಹಿತ ಯುವತಿಯೊಬ್ಬಳು ಸ್ಥಳೀಯ ಬಲೂಚ್ ಯುವಕನಲ್ಲಿ ಅನುರಕ್ತಳಾಗುತ್ತಾಳೆ! ಬೆನ್ನತ್ತಿ ಬರುವ ತಾಲಿಬಾನಿಗಳಿಂದ ತಪ್ಪಿಸಿಕೊಳ್ಳಲು ಪ್ರೇಮಿಗಳು ಟರ್ಕಿಗೆ ಓಡಿಹೋಗುವ ಸನ್ನಾಹದಲ್ಲಿದ್ದಾರೆ. ಮಕ್ಕಳಿಗೆ ಪಾಠ ಹೇಳುತ್ತ, ಸ್ಥಳೀಯರ ವಿಶ್ವಾಸ ಗಳಿಸಿದ್ದ ಅಹ್ಮದ್ ಪತ್ನಿಯಿಂದ ದೂರವಿದ್ದಾನೆ. ಅವಳ ವಿಶ್ವಾಸ ಗಳಿಸುವ, ಮುರಿದ ಸಂಬಂಧಗಳನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾನೆ. ಅಫ್ಘನ್ ಜನರ ಅಸಹಾಯಕತೆಗೆ ಅವನ ಹೃದಯ ಮರುಗುತ್ತದೆ. ನಗರದಲ್ಲಿರುವ ಪತ್ನಿಯ ನೆರವು ಪಡೆದು ಪ್ರೇಮಿಗಳನ್ನು ಇರಾನ್ ಗಡಿ ದಾಟಿಸುತ್ತಾನೆ. ದೇಶ, ದೇಶಗಳ ನಡುವೆ ಮತ್ತು ಮನುಷ್ಯ ಸಂಬಂಧಗಳಿಗೆ ಗಡಿ ಎಂಬುದಿಲ್ಲ ಎನ್ನುವುದರ ಸಾಂಕೇತಿಕ ರೂಪಕ ಈ ಸಿನಿಮಾ.

ಅಸಹಾಯಕರ ರಕ್ಷಣೆಗೆ ಧಾವಿಸುವ ಕಾಳಜಿಯ ಅಹ್ಮದ್ ಪಾತ್ರ ನೆನಪಿನಲ್ಲಿ ಉಳಿಯುತ್ತದೆ. ಈ ಪಾತ್ರ ಪೋಷಿಸಿರುವ ನಟ ಪೌರಿಯೊ ರಹಿಮಿ ಸ್ಯಾಮ್ ಅವರಿಗೆ ಚಿತ್ರೋತ್ಸದ ಅತ್ಯುತ್ತಮ ನಟ ಪ್ರಶಸ್ತಿಯೂ ದಕ್ಕಿತು.



ಭಯೋತ್ಪಾದನೆಯ ನೆರಳಿನ 'ದಿ ಲಾಸ್ಟ್ ಬರ್ತ್‌ಡೇ'



ಗೋವಾದಲ್ಲಿ ಚಿತ್ರೋತ್ಸವ ನಡೆದ ಸ್ಥಳ

ದಿಟ್ಟೆಯ ಕೊನೆಯ ಹುಟ್ಟುಹಬ್ಬ

ಕಳೆದ ವರ್ಷದ ನವೆಂಬರ್‌ನಲ್ಲಿ ಅಫ್ಘಾನಿಸ್ತಾನದಲ್ಲಿ ಅಧಿಕಾರಕ್ಕೆ ಬಂದ ತಾಲಿಬಾನ್ ಸರ್ಕಾರದ ಬೆಂಬಲಿಗರು ಅಲ್ಲಿನ ಮಹಿಳೆಯರ ಮೇಲೆ ನಡೆಸಿದ ದೌರ್ಜನ್ಯಗಳನ್ನು ಕಟ್ಟಿಕೊಡುವ ಸಿನಿಮಾ **'ದ ಲಾಸ್ಟ್ ಬರ್ಥ್‌ಡೇ'**. ನವೀದ್ ಮಹ್ಮೌದಿ ಇದರ ನಿರ್ದೇಶಕರು. ಮಹಿಳೆಯರ ಪರ ಧ್ವನಿ ಎತ್ತಿದ್ದ ದಿಟ್ಟ ಪತ್ರಕರ್ತೆಯೊಬ್ಬಳು ತನ್ನ ಹುಟ್ಟುಹಬ್ಬದ ದಿನವೇ ತಾಲಿಬಾನಿ ಉಗ್ರರ ಗುಂಡಿಗೆ ಬಲಿಯಾಗುವುದು ಸಿನಿಮಾದ ಒನ್‌ಲೈನ್ ಕಥೆ.

ತಾಲಿಬಾನ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಅದರ ಬೆಂಬಲಿಗರು ಮಹಿಳೆಯರನ್ನು ನಿಯಂತ್ರಿಸುವ ಪ್ರಯತ್ನಕ್ಕೆ ಕೈಹಾಕುತ್ತಾರೆ. ಬುರ್ಖಾ ಧರಿಸದ, ಬ್ಯೂಟಿ ಪಾರ್ಲರ್‌ಗಳಿಗೆ ಹೋಗುವ ಮಹಿಳೆಯರು ಉಗ್ರರ ಕೆಂಗಣ್ಣಿಗೆ ಗುರಿಯಾದ ವಿದ್ಯಮಾನಗಳು ಇಡೀ ಜಗತ್ತಿಗೆ ಗೊತ್ತಿವೆ. ಇಂಥ ಬೆಳವಣಿಗೆಗಳ ವಿರುದ್ಧ ಧ್ವನಿ ಎತ್ತಿ ಮಹಿಳೆಯರ ಭವಿಷ್ಯದ ದಿನಗಳ ಬಗ್ಗೆ ಎಚ್ಚರಿಸುವ ಪತ್ರಕರ್ತೆ ಸೊರೈಯಾ ಮೇಲೆ ಉಗ್ರರ ಕಣ್ಣು ಬೀಳುತ್ತದೆ. ಹುಟ್ಟುಹಬ್ಬ ಆಚರಿಸಿಕೊಳ್ಳುವ ಸಂಭ್ರಮದಲ್ಲಿದ್ದ ಸೊರೈಯಾ ಮನೆಯನ್ನು ಉಗ್ರರು ಸುತ್ತುವರಿಯುತ್ತಾರೆ. ಮನೆಗೆ ಬಂದ ಅತಿಥಿಗಳನ್ನು ರಕ್ಷಿಸಿ ಎಲ್ಲರನ್ನೂ ಕಾಬೂಲ್‌ನ ಏರ್‌ಪೋರ್ಟ್‌ಗೆ ಕಳಿಸಿಕೊಡುವ ಸೊರೈಯಾ, ದೇಶದಿಂದ ಪಲಾಯನ ಮಾಡಲು ನಿರಾಕರಿಸಿ ಉಗ್ರರ ಗುಂಡಿಗೆ ಬಲಿಯಾಗುತ್ತಾಳೆ.

ತಾಲಿಬಾನ್ ಸರ್ಕಾರ ಸಿನಿಮಾಗಳ ಪರ ಇಲ್ಲ. ಹೀಗಾಗಿ ಉಗ್ರರ ದೌರ್ಜನ್ಯಗಳನ್ನು ಟೀವಿ ಮತ್ತು ವಿಡಿಯೊ ತುಣುಕಗಳು ಮತ್ತು ಆಗಾಗ ಕೇಳಿಬರುವ ಗುಂಡಿನ ಸದ್ದುಗಳ ಮೂಲಕವೇ ಪ್ರೇಕ್ಷಕರಿಗೆ ದಾಟಿಸುವ ನಿರ್ದೇಶಕರ ಜಾಣತನ ಇಷ್ಟವಾಗುತ್ತದೆ. ಸಂಪ್ರದಾಯಗಳ ವಿರುದ್ಧ ಧ್ವನಿ ಎತ್ತುವವರ ಜೀವ ತೆಗೆಯುತ್ತೇವೆ ಎನ್ನುವ ತಾಲಿಬಾನಿಗಳ ಮನಃಸ್ಥಿತಿಯನ್ನು ಸಿನಿಮಾ ಧ್ವನಿಸುತ್ತದೆ.

ಭಯೋತ್ಪಾದಕರ ವಿರುದ್ಧ ಹೆಣ್ಣಿನ ಹೋರಾಟ

'ಇಟ್ಸ್ ಸೀರಾ' (It's Sira), ಇಸ್ಲಾಮಿಕ್ ಭಯೋತ್ಪಾದಕರ ವಿರುದ್ಧ ಹೋರಾಡಿ ಯಶಸ್ವಿಯಾಗುವ ಸೀರಾ ಎಂಬ ಯುವತಿ ಎದುರಿಸಿದ ಕಷ್ಟಗಳನ್ನು ದಾರುಣವಾಗಿ ನಿರೂಪಿಸುವ ಸಿನಿಮಾ.

ಪಶ್ಚಿಮ ಆಫ್ರಿಕಾ ಪ್ರಾಂತ್ಯದ ಅಲೆಮಾರಿ ಜನಾಂಗವೊಂದರ ಗುಂಪಿನ ನಾಯಕನೊಬ್ಬ ತನ್ನ ಮಗಳು ಸೀರಾಳ ಜತೆ ಮದುವೆ ಗೊತ್ತಾಗಿರುವ ಕ್ರಿಶ್ಚಿಯನ್ ಹುಡುಗನನ್ನು ನೋಡಲು ತನ್ನ ಪರಿವಾರದ ಜತೆಯಲ್ಲಿ ಹೊರಟಿದ್ದಾನೆ. ಸಡಗರ, ಸಂಭ್ರಮದಲ್ಲಿದ್ದ ಗುಂಪಿನ ಮೇಲೆ ಭಯೋತ್ಪಾದಕರು ಎರಗಿ ಗಂಡಸರನ್ನೆಲ್ಲ ಕೊಲ್ಲುತ್ತಾರೆ! ತಂದೆ ಹಾಗೂ ಇತರರ ಸಾವಿನಿಂದ ಆಕ್ರೋಶಗೊಂಡ ಸೀರಾ ಭಯೋತ್ಪಾದರತ್ತ ಉಗುಳಿ ಶಪಿಸುತ್ತಾಳೆ! ಕೆರಳಿದ ಉಗ್ರರು ಸೀರಾಳನ್ನು ಅಪಹರಿಸುತ್ತಾರೆ. ಉಗ್ರನೊಬ್ಬ ಅವಳ ಮೇಲೆ ಅತ್ಯಾಚಾರ ಎಸಗಿ ನಿರ್ಜನ ಮರಳುಗಾಡಿನಲ್ಲಿ ಬಿಟ್ಟು ಹೋಗುತ್ತಾನೆ. ಆಘಾತಗೊಂಡ ಸೀರಾ ಗುಂಪಿನಲ್ಲಿದ್ದ ತಾಯಿ ಮತ್ತಿತರ ಮಹಿಳೆಯರನ್ನು ಹುಡುಕಿಕೊಂಡು ಹೋಗದೆ ಉಗ್ರರ ನೆಲೆ ಪತ್ತೆ ಮಾಡಿ ಅವರನ್ನು ನಾಶಗೊಳಿಸುವುದು ಸಿನಿಮಾದ ಕಥೆ.

ಆಫ್ರಿಕಾದ ಉತ್ತರ ಮತ್ತು ಪಶ್ಚಿಮ ಪ್ರಾಂತ್ಯಗಳಲ್ಲಿ ಸಕ್ರಿಯವಾಗಿರುವ ಜಗತ್ತಿನ ಅತ್ಯಂತ ಕ್ರೂರಿಗಳಾದ ಭಯೋತ್ಪಾದಕರ ಸಂಘಟನೆಯೊಂದು ಹಳ್ಳಿಗಳ ಅಮಾಯಕ ಯುವಕರನ್ನು ಸೇರಿಸಿಕೊಳ್ಳುತ್ತದೆ. ಭಯೋತ್ಪಾದಕರು ತಮ್ಮ ಚಾಕರಿಗೆ, ಲೈಂಗಿಕ ದಾಹ ತೀರಿಸಿಕೊಳ್ಳಲು ಮುಗ್ಧ ಯುವತಿಯರನ್ನು ಅಪಹರಿಸುತ್ತಾರೆ. ಅಸಹಾಯಕ ಯುವತಿಯರು ಗರ್ಭಿಣಿಯರಾಗಿ ಉಗ್ರರ ನೆಲೆಗಳಲ್ಲೇ ಉಳಿದು ಅನುಭವಿಸುವ ದಾರುಣ ಪರಿಸ್ಥಿತಿಯನ್ನು ಜಗತ್ತಿಗೆ ತೋರಿಸುವ ಗಂಭೀರ ಸಿನಿಮಾ ಆಗುವ ಅವಕಾಶ ಈ ಚಿತ್ರದಲ್ಲಿ ತಪ್ಪಿಹೋಗಿದೆ.

ಅತ್ಯಾಚಾರದಿಂದ ಬಸಿರಾಗಿ, ಮರಳುಗಾಡಿನ ಸಣ್ಣ ಗುಡ್ಡವೊಂದರ ಗುಹೆಯಂತಹ ಪೊಟರೆಯಲ್ಲಿ ಉಳಿದುಕೊಂಡ ಸೀರಾ, ಉಗ್ರರ ಕಣ್ಣು ತಪ್ಪಿಸಿ ಅವರ ನೆಲೆಗೆ ನುಗ್ಗುತ್ತಾಳೆ. ಅಲ್ಲಿದ್ದ ಹೆಣ್ಣುಮಕ್ಕಳ ಅನುಕಂಪ ಗಿಟ್ಟಿಸುತ್ತಾಳೆ. ಮಗುವನ್ನೂ ಹೆರುತ್ತಾಳೆ. ಕೊನೆಗೆ ಭಯೋತ್ಪಾದಕರ ನೆಲೆಯನ್ನು ಸ್ಫೋಟಿಸಿ, ನಾಶ ಮಾಡುತ್ತಾಳೆ! ಗನ್ ಹಿಡಿದು ಹಲವರನ್ನು ಕೊಲ್ಲುತ್ತಾಳೆ. ಸೀರಾಳ ಅಸಹಾಯಕತೆ, ಧೈರ್ಯ, ಸಾಹಸಗಳನ್ನು ಹೇಳುತ್ತಲೇ ಪ್ರತಿಭಟನೆಯ ಹೊಸ ಮಾದರಿಯೊಂದನ್ನು ರೂಪಿಸುವ ಸಾಧ್ಯತೆ ಇದ್ದ ಈ ಸಿನಿಮಾ ಕೊನೆಯ ಹತ್ತು ನಿಮಿಷಗಳಲ್ಲಿ ಭಾರತೀಯ ಕಮರ್ಷಿಯಲ್ ಸಿನಿಮಾಗಳ ಜಾಡು ಹಿಡಿದಿದೆ. ಅಪೋಲಿನ್ ಟ್ರಾಒರ್ ಈ ಸಿನಿಮಾದ ನಿರ್ದೇಶಕಿ.



'ಇಟ್ಸ್ ಸೀರಾ' ಚಿತ್ರದಲ್ಲಿ ಕಾಡುವ ಕಥಾನಾಯಕಿ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಗಣಿತದಲ್ಲಿ ಗರ್ದಿ ಗಮ್ಮತ್ತು

ಸ್ವಾರಸ್ಯಕರ ಸಂಕಲನ

1. ಒಂದೇ ವ್ಯತ್ಯಾಸವುಳ್ಳ ನಾಲ್ಕು ಕ್ರಮಸಂಖ್ಯೆಗಳ ಮೊತ್ತವನ್ನು ಹೀಗೂ ಮಾಡಬಹುದು

ಉದಾ: 5,8,11,14– ಇವುಗಳ ಒಟ್ಟು ಮೊತ್ತ ಕಂಡುಹಿಡಿಯಲು, ಇಲ್ಲಿಯ ಮೂರನೇ ಸಂಖ್ಯೆಗೆ 3ರಿಂದ ಗುಣಿಸಿ. ನಂತರ ಅದಕ್ಕೆ ಆ ಸರಣಿಯ ಮೊದಲ ಅಂಕಿ ಕೂಡಿಸಿದರೆ ನಾಲ್ಕೂ ಸಂಖ್ಯೆಗಳ ಮೊತ್ತಕ್ಕೆ ಸಮವಾಗಿರುತ್ತದೆ.

5
8
11X3 = 33
14

ತಾಳೆ:
5 + 8 + 11 + 14 = **38**

33 + 5(ಸರಣಿಯ ಮೊದಲ ಅಂಕಿ)
= **38**

2. ಇದೇ ನಿಯಮವನ್ನು ಯಾವುದೇ ಮಗ್ಗಿಗೆ ಹಚ್ಚಿದರೂ ಬರುತ್ತದೆ.

ಉದಾ: 7,14,21,28,35,42,49,56,63,70 –ಇಲ್ಲಿ 35,42,49,56 ಈ ನಾಲ್ಕು ಕ್ರಮ ಸಂಖ್ಯೆಗಳನ್ನು ತೆಗೆದುಕೊಳ್ಳೋಣ.

35
42
49X3 = 147
56

ತಾಳೆ: 35 +
42
49
56
= **182**

147 + 35(ಸರಣಿಯ ಮೊದಲ ಅಂಕಿ)
= **182**





ಕ್ವಿಕ್–ಕ್ವಿಜ್

ಇಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಸರಿ–ತಪ್ಪು ಮೂಲಕ ಗುರುತಿಸಿ

1. ಗದಾಯುದ್ಧ ಕೃತಿಯ ಕರ್ತೃ ರನ್ನ
   1.ಸರಿ 2.ತಪ್ಪು
2. ಹಣ್ಣುಗಳ ರಾಜ ಎಂದು ಸೇಬು ಹಣ್ಣಿಗೆ ಕರೆಯುತ್ತೇವೆ.
   1.ಸರಿ 2.ತಪ್ಪು
3. ನಾಕುತಂತಿಯನ್ನು ದ.ರಾ.ಬೇಂದ್ರೆಯವರು ಬರೆದಿದ್ದಾರೆ.
   1. ಸರಿ 2.ತಪ್ಪು
4. ರಂಗನತಿಟ್ಟು ಒಂದು ಪಕ್ಷಿಧಾಮ.
   1.ಸರಿ 2.ತಪ್ಪು
5. ಮೈಸೂರು ಬದಲಾಗಿ ಕರ್ನಾಟಕ ಎಂಬ ನಾಮಕರಣ ಆದ ವರ್ಷ 1972
   1.ಸರಿ 2.ತಪ್ಪು

ಕೊಂಚತಂತ್ರ

ಇಲ್ಲಿ ಕೊಟ್ಟ ದಿನಬಳಕೆಯ ಕೆಲವು ಸಂಕ್ಷಿಪ್ತಾಕ್ಷರಗಳು ಕೆಲವು ವಿಷಯಗಳನ್ನು ನೆನಪಿಡಲು ಸಹಾಯವಾಗುತ್ತವೆ.

1	B.A	ಪಂಪನ ತಂದೆ ತಾಯಿ ಹೆಸರು
		B-ಭೀಮಪ್ಪಯ್ಯ A-ಅಬ್ಬಲಬ್ಬೆ
2	M.A	ಗೋಳಗುಮ್ಮಟ ಕಟ್ಟಿಸಿದವರು
		M-ಮಹಮ್ಮದ A-ಆದಿಲಶಾ
3	K.T	ಭಾರತದ ಪ್ರಾಚೀನ ಭಾಷೆಗಳು
		K-ಕನ್ನಡ T-ತಮಿಳು
4	R.S	ಪುಟ್ಟರಾಜ ಗವಾಯಿಗಳ ತಂದೆ ತಾಯಿ
		R-ರೇವಣಸಿದ್ಧಯ್ಯ S-ಸಿದ್ಧಮ್ಮ
5	C.M	ನೀರಿಲ್ಲದೇ ಹೆಚ್ಚು ದಿನ ಬದುಕುವ 2 ಜೀವಿಗಳು
		C-Camel, M-Mouse

ಜಾಣಪದ ಆಟ


ಇಲ್ಲಿ ಕೊಟ್ಟಿರುವ ಅನುಸ್ವಾರ(0)ಕ್ಕೆ ಹಿಂದೆ ಮುಂದೆ ಅದೇ ಅಕ್ಷರ ತುಂಬಿ ಪದ ರಚಿಸಿ.

1		೦	
2		೦	
3		೦	
4		೦	
5		೦	

ಡಬ್ಬ ಚಿಕ್ಕ ಕ್ರೇಶ್ಯಪ್ಪ ಕಥೆಯ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಚಮತ್ಕಾರಿ ಎಣ್ಣೆ!



ಸಿನಿ ಸ್ವಾರಸ್ಯ

ಇಲ್ಲಿ ಕೊಟ್ಟಿರುವ ಅಕ್ಷರಗಳಿಂದ ಪ್ರಾರಂಭವಾಗುವ ಸಿನಿಮಾ ಹೆಸರುಗಳನ್ನು ಹೇಳಿ...

1. ಪು........................
2. ನೀ........................
3. ತ........................

ಟು ಇನ್ ಒನ್
ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಭಾರ ಸರಿ ವಿರ

ನಸು ತನ ಗಾಣಿ

ಅಕ್ಷರ ಪಟ್ಟಿ:

ಮ ಸಾ ಕೇ ಚೇ ತಿ ಗ

ಸ ಪಿಂ ಮುಂ ತಾ ಕು ಯ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಆಯಾತನೆ 2.ಆಮದುವೆ 3.ನಿವಾಸನೆ 4.ಸಂಶಯನ 5.ಭೂಪಾಲಕ 6.ಆಗರತಿ

ಸಿನಿ ಸ್ವಾರಸ್ಯ: A.ಒಂದು ಮುತ್ತಿನ ಕಥೆ B.ಎರಡು ಕನಸು C.ಮೂರುವರೆ ವಜ್ರಗಳು D.ಮೂರು ಜನ್ಮ E.ಏಳು ಸುತ್ತಿನ ಕೋಟೆ

ಹುಡುಕಾಟ: ಸುನೀಲ ಗಾವಸ್ಕರ

ಕಸರತ್ತು:

ಕ ವಿಭಾಗ: 1.ಕೋರಿಕೆ 2.ಕರಿಕೆ 3.ಕುಡಿಕೆ 4.ಕೆಡಕು 5.ಕಲಿಕೆ 6.ಕಾಯಕ 7.ಕಾರ್ಮಿಕ 8.ಕೊಳಕು 9.ಕುಟುಕು 10.ಕಾತುಕ

ಸ ವಿಭಾಗ: 1.ಸಲೀಸು 2.ಸವೆಸು 3.ಸೋಲಿಸು 4.ಸರಿಸು 5.ಸಾರಿಸು 6.ಸೇರಿಸು 7.ಸಾಗಿಸು 8.ಸುಲಿಸು 9.ಸರಸ 10.ಸಾಹಸ

ರ ವಿಭಾಗ: 1.ಅರ 2.ಕರ 3.ಗರ 4.ನರ 5.ಪರ 6.ಬರ 7.ವರ 8.ಮರ 9.ಚರ 10.ಸರ

ತ್ತು ವಿಭಾಗ: 1.ಕತ್ತು 2.ಕೆತ್ತು 3.ಕುತ್ತು 4.ಗತ್ತು 5.ನತ್ತು 6.ಬತ್ತು 7.ಮತ್ತು 8.ಹತ್ತು 9.ಹೊತ್ತು 10.ಎತ್ತು

ಚಿಕ್ಕ-ಲೆಕ್ಕ: 1. 1X7 = 7, 2. ₹4.50 ಹಾಗೂ ₹5.50 3. 7 Dozen, 4. 8, 5. 1.2(ದಶಮಾಂಶ ಚಿಹ್ನೆ)

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಅಕ್ಷರ ಎಂ. ಎಸ್.
ಮೈಸೂರು




ಶ್ರೇಯಾ ಶ್ರೀಶೈಲ ಅಂಗಡಿ
ಬೆಳಗಾವಿ



ಶ್ರೇಯಸ್ ಕಿತ್ತೂರ
ಬೆಳಗಾವಿ



ಸನ ಹಿರೇಮಠ
ಹಗರಿಬೊಮ್ಮನಹಳ್ಳಿ



ಊಮಿಕಾ ಬಾತಿ
ಬಾಗಲಕೋಟೆ



ದುಶ್ಯಂತ್ ಸಿ.ಎಸ್.
ಬೇಲೂರು

ಭಾರತ–ಆಸ್ಟ್ರೇಲಿಯಾ ಟಿ20 ಹಣಾಹಣಿ ಇಂದು; ರಿಂಕು ಸಿಂಗ್ ಆಕರ್ಷಣೆ

‘ಔಪಚಾರಿಕ’ ಪಂದ್ಯಕ್ಕೆ ಬೆಂಗಳೂರು ಅಣಿ

• ಗಿರೀಶ ದೊಡ್ಡಮನಿ


ಬೆಂಗಳೂರು: ಉದ್ಯಾನನಗರಿಯ ಮುಸ್ಸಂಜೆಗಳಿಗೆ ಈಗ ಕಚಗುಳಿ ನೀಡುವ ಚಳಿ ಆವರಿಸುತ್ತಿದೆ. ಈ ಹೊತ್ತಿನಲ್ಲಿ ಹನಿಯುವ ಇಬ್ಬನಿಗೆ ಮೈಯೊಡ್ಡಿಕೊಂಡಿರುವ ಚಿನ್ನಸ್ವಾಮಿ ಕ್ರೀಡಾಂಗಣ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಟಿ20 ಪಂದ್ಯಕ್ಕೆ ಅಣಿಯಾಗಿದೆ.

ಭಾನುವಾರ ನಡೆಯಲಿರುವ ಈ ಪಂದ್ಯವು ಔಪಚಾರಿಕವಷ್ಟೇ ಅಲ್ಲ; ಬೆಂಗಳೂರು ಕ್ರಿಕೆಟ್‌ಪ್ರೇಮಿಗಳ ಪಾಲಿಗೆ ಅನಿರೀಕ್ಷಿತವೂ ಹೌದು.

ಏಕೆಂದರೆ; ಐದು ಪಂದ್ಯಗಳ ಈ ಸರಣಿಯನ್ನು ಭಾರತವು ಈಗಾಗಲೇ 3–1ರಿಂದ ತನ್ನದಾಗಿಸಿಕೊಂಡಿದೆ. ಆದ್ದರಿಂದ ಕೊನೆಯ ಪಂದ್ಯದ ಫಲಿತಾಂಶಕ್ಕೆ ಅಷ್ಟೇನೂ ಮಹತ್ವ ಉಳಿದಿಲ್ಲ.

ಕ್ಲೀನ್ ಸ್ವೀಪ್ ಮಾಡಿಕೊಳ್ಳುವ ಅವಕಾಶವಿಲ್ಲದಿದ್ದರೂ ಗೆಲುವಿನೊಂದಿಗೆ ಸರಣಿಗೆ ಮುಕ್ತಾಯ ಹಾಡುವ ಆಸೆ ಆತಿಥೇಯರಿಗೆ ಇದೆ. ಕಳೆದ ಎರಡೂವರೆ ತಿಂಗಳುಗಳಿಂದ ಭಾರತದ ಪ್ರವಾಸದಲ್ಲಿರುವ ಆಸ್ಟ್ರೇಲಿಯಾ ತಂಡವೂ ಸಮಾಧಾನಕರ ಜಯದೊಂದಿಗೆ ಸ್ವದೇಶಕ್ಕೆ ಮರಳುವ ಛಲದಲ್ಲಿದೆ. ಈ ಸುದೀರ್ಘ ಅವಧಿಯಲ್ಲಿ ಕಾಂಗರೂ ನಾಡಿನ ಬಳಗವು ಭಾರತದ ಎದುರಿನ ಏಕದಿನ ಕ್ರಿಕೆಟ್ ಸರಣಿ ಸೋತಿತ್ತು. ಆದರೆ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಭಾರತಕ್ಕೆ ಆಘಾತ ನೀಡಿ ಕಿರೀಟ ಧರಿಸಿತು.

ವಿಶ್ವಕಪ್ ಟೂರ್ನಿ ಮುಗಿದು ನಾಲ್ಕೇ ದಿನಕ್ಕೆ ಶುರುವಾದ ಸರಣಿಯ ಮೊದಲೆರಡು ಪಂದ್ಯದಲ್ಲಿ ಸೋತಿದ್ದ ಆಸ್ಟ್ರೇಲಿಯಾ, ಮೂರನೇ ಪಂದ್ಯದಲ್ಲಿ ಪುಟಿದೆದ್ದಿತ್ತು. ಗ್ಲೆನ್ ಮ್ಯಾಕ್ಸ್‌ವೆಲ್ ಅಮೋಘ ಶತಕ ಹೊಡೆದಿದ್ದರು. ಆದರೆ ನಾಲ್ಕನೇ ಪಂದ್ಯದಲ್ಲಿ ಅವರಿರಲಿಲ್ಲ. ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ತಂಡದಲ್ಲಿದ್ದ ಟ್ರಾವಿಸ್ ಹೆಡ್ ಮತ್ತು ಜೋಶ್ ಇಂಗ್ಲಿಸ್ ಬಿಟ್ಟರೆ ಉಳಿದವರೆಲ್ಲರೂ ತಮ್ಮ ದೇಶಕ್ಕೆ ಮರಳಿದ್ದಾರೆ. ಆದ್ದರಿಂದ ಹೊಸಬರಿರುವ ಆಸ್ಟ್ರೇಲಿಯಾ ತಂಡದಲ್ಲಿ ಸಮತೋಲನವಿಲ್ಲ. ಹೆಡ್ ಮತ್ತು ನಾಯಕ ಮ್ಯಾಥ್ಯೂ ವೇಡ್ ಅವರ ಅನುಭವದ ಮೇಲೆ ಹೆಚ್ಚು ಅವಲಂಬಿತವಾಗಿದೆ.



ಇದೇ ಮೊದಲ ಬಾರಿ ನಾಯಕತ್ವ ವಹಿಸಿರುವ ಸೂರ್ಯಕುಮಾರ್ ಯಾದವ್ ಸರಣಿ ಗೆಲುವಿನ ಖುಷಿಯಲ್ಲಿದ್ದಾರೆ. ಆದರೆ ಒಂದು ಪಂದ್ಯ ಬಿಟ್ಟರೆ ಉಳಿದದ್ದರಲ್ಲಿ ಅವರ ಬ್ಯಾಟ್‌ನಿಂದ ಹೆಚ್ಚು ರನ್‌ಗಳು ಹರಿದಿಲ್ಲ. ಆದರೂ ಋತುರಾಜ್ ಗಾಯಕವಾಡ್, ಇಶಾನ್ ಕಿಶನ್, ಯಶಸ್ವಿ ಜೈಸ್ವಾಲ್, ‘ಸಿಕ್ಸರ್ ಪರಿಣತ’ ರಿಂಕು ಸಿಂಗ್ ಅವರು ಉತ್ತಮ ಫಾರ್ಮ್‌ನಲ್ಲಿದ್ದಾರೆ. ದೀಪಕ್ ಚಾಹರ್ ಮರಳಿರುವುದರಿಂದ ಬೌಲಿಂಗ್ ವಿಭಾಗವೂ ಉತ್ತಮವಾಗಿದೆ. ಅಕ್ಷರ್ ಪಟೇಲ್ ಮತ್ತು ರವಿ ಬಿಷ್ಣೋಯಿ ಜೋಡಿಯು ಸ್ಪಿನ್ ಮೋಡಿ ಮೆರೆಯುತ್ತಿರುವುದು ಭರವಸೆ ಮೂಡಿಸಿದೆ.

ಇದೇ ತಿಂಗಳು ನಡೆಯಲಿರುವ ಐಪಿಎಲ್ ಮಿನಿ ಹರಾಜು ಪಟ್ಟಿಯಲ್ಲಿರುವ ಕೆಲವು ಆಟಗಾರರಿಗೆ ಈ ಪಂದ್ಯದಲ್ಲಿ ತಮ್ಮ ಭುಜಬಲ ಮೆರೆದು ಫ್ರ್ಯಾಂಚೈಸಿಗಳನ್ನು ಆಕರ್ಷಿಸುವ ಅವಕಾಶವಂತೂ ಇದೆ.

ಅನಿರೀಕ್ಷಿತ ಪಂದ್ಯ: ಬೆಂಗಳೂರಿನ ಪಾಲಿಗೆ ಇದು ಅನಿರೀಕ್ಷಿತ ಪಂದ್ಯ. ಪೂರ್ವನಿರ್ಧರಿತ ವೇಳಾಪಟ್ಟಿಯ ಪ್ರಕಾರ ಈ ಪಂದ್ಯವು ಹೈದರಾಬಾದ್‌ನಲ್ಲಿ ನಿಗದಿಯಾಗಿತ್ತು. ಆದರೆ, ತೆಲಂಗಾಣ ರಾಜ್ಯ ಚುನಾವಣೆಯ ಮತ ಎಣಿಕೆಯು ಭಾನುವಾರ ನಡೆಯಲಿದೆ. ಆದ್ದರಿಂದ ಈ ಪಂದ್ಯವನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಗಿದೆ.

ಅಕ್ಟೋಬರ್–ನವೆಂಬರ್‌ನಲ್ಲಿ ಭಾರತ ಮತ್ತು ನೆದರ್ಲೆಂಡ್ಸ್ ನಡುವಣ ಪಂದ್ಯ ಸೇರಿದಂತೆ ವಿಶ್ವಕಪ್ ಟೂರ್ನಿಯ ಐದು ಪಂದ್ಯಗಳು ಇಲ್ಲಿ ನಡೆದಿದ್ದವು. ಆಗ ಕಂಡುಬಂದಿದ್ದ ಟಿಕೆಟ್ ಖರೀದಿಯ ನೂಕುನುಗ್ಗಲು ಇರಲಿಲ್ಲ.

‘ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಕೆ.ಎಲ್. ರಾಹುಲ್ ಅವರು ಆಡುತ್ತಿಲ್ಲ. ಆಸ್ಟ್ರೇಲಿಯಾ ತಂಡದಲ್ಲಿರುವ ಆರ್‌ಸಿಬಿ ಆಟಗಾರ ಮ್ಯಾಕ್ಸ್‌ವೆಲ್ ಕೂಡ ಇಲ್ಲ. ಆದ್ದರಿಂದ ಪ್ರೇಕ್ಷಕರ ಸಂಖ್ಯೆ ತುಸು ಕಡಿಮೆಯಾಗಬಹುದು.

